ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ

ಸಂಚಿಕೆ 8 • ಸಂಪುಟ 2 • ಜುಲೈ 2025 • ಬೆಲೆ ರೂ. 18/–

# வெண்மை

VENMAI ಕನ್ನಡ ಮಾಸಿಕ


ಕನ್ನಡ ಮಾಸಿಕ

## ಅರ್ಪಣಾ ಭಾವ

### ವಿಶೇಷಾಂಕ




Inners for Winners
RAMRAJ
VESTS
BRIEFS • TRUNKS
Uplift your spirit from Within
Through celebrations and challenges, feel the comfort and confidence all day long.
Unleash your true self with Ramraj Banians.
Shreyas Iyer - Cricketer
SCAN QR CODE FOR STORE LOCATION
SUKRA SUPER FINE COTTON VESTS
ROMEX SUPERIOR BANIANS
RISE-UP PREMIUM BANIANS
ACOSTE LUXURY INNERWEARS
Breeze Eye Let Vests
WinStripe STRIPED BANIANS
ARCHERY GYM VEST
COMPACT PREMIUM COTTON RIB VESTS
LITTLE STARS KIDS INNERWEARS
Available at Ramraj Showrooms and All Leading Textile Shops | Shop Online at www.ramrajcotton.in


ಗೌರವಾನ್ವಿತರಿಗೆ...
RAMRAJ
ಕಾಟನ್
ಭಾರತೀಯ ಸಂಸ್ಕೃತಿ
ಕೆಲಸ, ಉದ್ಯಮ, ವ್ಯಾಪಾರ ಹೀಗೆ ಎಲ್ಲದರಲ್ಲೂ ಅರ್ಪಣಾ ಭಾವ
ಅಥವಾ ಬದ್ಧತೆಯಿಂದ ತೊಡಗಿಸಿಕೊಳ್ಳಲು ದಾರಿಗಳನ್ನು ತಿಳಿಸುವ
ಜೀವನದಲ್ಲಿ ಅತಿ ದೊಡ್ಡ ಯಶಸ್ಸನ್ನು ಸಾಧಿಸಲು ನೆರವಾಗುವ
ಅರ್ಪಣಾ ಭಾವ
ವಿಶೇಷಾಂಕ
ಎನ್ನುವ ಈ ಉಪಯುಕ್ತ
ಸಂಚಿಕೆಯನ್ನು ನಿಮಗೆ ನೀಡಲು
ನಾವು ಹೆಮ್ಮೆ ಪಡುತ್ತೇವೆ.

# ಗೌರವಾನ್ವಿತರಿಗೆ...

**ನಮಸ್ಕಾರ.**

ಜೀವನವು ಯಾವಾಗಲೂ ಆಸಕ್ತಿದಾಯಕವಾಗಿರಬೇಕಾದರೆ, ನಾವು ಮಾಡುವ ಕೆಲಸಗಳಲ್ಲಿ ನಾವು ಯಾವಾಗಲೂ ಅರ್ಪಣಾ ಮನೋಭಾವದಿಂದಲೂ ಬದ್ಧತೆಯಿಂಲೂ ನಮ್ಮನ್ನು ತೊಡಗಿಸಿಕೊಳ್ಳುವ ಪ್ರಜ್ಞೆಯನ್ನು ಹೊಂದಿರಬೇಕು. ಹಣ, ಹೆಸರು, ಖ್ಯಾತಿ ಅಥವಾ ಯಾವುದೇ ಬಗೆಯ ನಿರೀಕ್ಷೆಗಳಿಲ್ಲದೆ ಒಂದು ಚಟುವಟಿಕೆಯಲ್ಲಿ ಸಮರ್ಪಣಾ ಮನೋಭಾವದ ಬದ್ಧತೆಯಿಂದ ತೊಡಗಿಸಿಕೊಳ್ಳಲು ಸಾಧ್ಯವಾದರೆ, ಅದು ತರುವ ಆನಂದವನ್ನು ಯಾವುದರೊಂದಿಗೂ ಹೋಲಿಸಲಾಗದು. ಒಬ್ಬ ಪ್ರಸಿದ್ಧ ಲೇಖಕರು ಹಂಚಿಕೊಂಡಿದ್ದ ಅವರ ಅನುಭವವನ್ನು ಒಮ್ಮೆ ನಾನು ಓದಿದ್ದೇನೆ. ಸಣ್ಣ ಕೆಲಸವನ್ನೂ ಕೂಡ ಈಡಿಪಾಡಿನಿಂದಲೂ ಅರ್ಪಣಾ ಭಾವದಿಂದಲೂ ಮಾಡುವ ಅಗತ್ಯವನ್ನು ಅದು ನನಗೆ ಮನವರಿಕೆ ಮಾಡಿಕೊಟ್ಟಿತು.

ಒಂದು ದೊಡ್ಡ ನಗರದ ರಸ್ತೆ ಬದಿಯ ಒಂದು ಪುಸ್ತಕದಂಗಡಿಯಲ್ಲಿ ಒಬ್ಬ ವೃದ್ಧರು, ಮಕ್ಕಳಿಗಾಗಿ ಪುಸ್ತಕಗಳನ್ನು ಹುಡುಕಾಡಿ ಖರೀದಿಸುತ್ತಿದ್ದರು. "ಇವುಗಳನ್ನು ನೀವು ಯಾರಿಗಾಗಿ ಖರೀದಿಸುತ್ತಿದ್ದೀರಿ?" ಎಂದು ಆ ಲೇಖಕರು, ಪುಸ್ತಕಗಳನ್ನು ಕುತೂಹಲದಿಂದ ಹುಡುಕುತ್ತಿದ್ದ ಆ ವೃದ್ಧರನ್ನು ಕೇಳಿದರಂತೆ!

"ನಾನು ಪ್ರತಿದಿನ ನನ್ನ ಮೊಮ್ಮಗನಿಗೆ ಪುಸ್ತಕಗಳನ್ನು ಓದಿ ಹೇಳುತ್ತೇನೆ. ಅದಕ್ಕಾಗಿಯೇ ನಾನು ಈ ಪುಸ್ತಕಗಳನ್ನು ಖರೀದಿಸುತ್ತೇನೆ" ಎಂದು ವೃದ್ಧರು ಉತ್ತರಿಸಿದರು.

ಮುಂದುವರೆದು, "ಅಮೆರಿಕದಲ್ಲಿ ವಾಸಿಸುತ್ತಿರುವ ನನ್ನ ಮಗನ ಮಗನಿಗೆ ಎಂಟು ವರ್ಷ. ಅವನಿಗೆ ತನ್ನ ಮಾತೃಭಾಷೆಯನ್ನು ಇಂಗ್ಲಿಷ್‌ನಂತೆ ಓದಲು ಅಥವಾ ಬರೆಯಲು ಬರುವುದಿಲ್ಲ. ಏಕೆಂದರೆ ಅವನಿಗೆ ಮನೆಯಲ್ಲಿ ತನ್ನ ಮಾತೃಭಾಷೆಯನ್ನು ಮಾತನಾಡಲು ಯಾವುದೇ ಅವಕಾಶವಿಲ್ಲ. ಆದ್ದರಿಂದ ನಾನು ಪ್ರತಿದಿನ ಒಂದು ಗಂಟೆಗಳ ಕಾಲ ಅವನಿಗೆ ಈ ಪುಸ್ತಕಗಳನ್ನು ಓದಿ ಹೇಳುತ್ತೇನೆ. ನಾನು ಹೆಚ್ಚಾಗಿ ಮಕ್ಕಳಿಗಾಗಿ ಇರುವ ಕಥೆಗಳನ್ನು ಅವನಿಗೆ ಓದಿ ಹೇಳುತ್ತೇನೆ. ಈ ಕಾರ್ಯವು, ನನ್ನ ಮೊಮ್ಮಗನೊಂದಿಗೆ ಮಾತನಾಡಲು ಮತ್ತು ಅವನನ್ನು ಅರ್ಥ ಮಾಡಿಕೊಳ್ಳಲು ನನಗೆ ತುಂಬಾ ಸಹಾಯ ಮಾಡುತ್ತದೆ.

ಈ ಕಥೆಗಳನ್ನು ಓದುವಾಗ ನಾನು ಮಗುವಿನಂತೆ ಸಂತೋಷಪಡುತ್ತೇನೆ. ಇದಕ್ಕಾಗಿಯೇ ನಾನು ಹೊಸ ತಂತ್ರಜ್ಞಾನಗಳನ್ನು ಕೂಡ ಉತ್ಸುಕತೆಯಿಂದ ಕಲಿಯುತ್ತಿದ್ದೇನೆ. ನಾನು ಪ್ರತಿದಿನ ಸ್ಕೈಪ್ ವಿಡಿಯೋ ಮೂಲಕ ನನ್ನ ಮೊಮ್ಮಗನೊಂದಿಗೆ ಮಾತನಾಡುತ್ತೇನೆ.

ನನ್ನ ಮೊಮ್ಮಗನಿಗೆ ಅರ್ಥವಾಗುವ ರೀತಿಯಲ್ಲಿ ಕಥೆಗಳನ್ನು ಹೇಳಲು ನಾನು ಪ್ರತಿದಿನ ಕ್ಯಾಮೆರಾ ಮುಂದೆ ಕುಳಿತು ಅಭ್ಯಾಸ ಮಾಡುತ್ತೇನೆ. ನನ್ನ ಮೊಮ್ಮಗ ಕೂಡ, ಈಗ ಒಂದು ವರ್ಷದ ನಂತರ, ತನ್ನ ಮಾತೃಭಾಷೆಯನ್ನು ಚೆನ್ನಾಗಿ ಮಾತನಾಡುತ್ತಿದ್ದಾನೆ. ಕೆಲಸದಿಂದ ನಿವೃತ್ತಿ ಹೊಂದಿ ಮನೆಯಲ್ಲೇ ಇರುವ ನನಗೆ ಕೂಡ ಇದು ಒಂದು ಸೃಜನಶೀಲ ಚಟುವಟಿಕೆಯಾಗಿದೆ.

ಕಥೆಗಳಷ್ಟೇ ಅಲ್ಲದೆ ನಾನು ಇನ್ನೂ ಸ್ವಲ್ಪ ಮುಂದೆ ಹೋಗಿ ಒಗಟುಗಳು, ಗಾದೆಗಳು, ಕವನಗಳು ಇತ್ಯಾದಿಗಳನ್ನು ಕೂಡ ಅವನಿಗೆ ಹೇಳುತ್ತೇನೆ. ನನ್ನ ಮೊಮ್ಮಗ ಯಾವುದೇ ಕಾರಣಕ್ಕೂ ಮನೆಯಲ್ಲಿ ತನ್ನ ಮಾತೃಭಾಷೆಯನ್ನು ಮಾತನಾಡುವುದನ್ನು ನಿಲ್ಲಿಸಬಾರದು. ಆ ನಿಟ್ಟಿನಲ್ಲಿ ಇದು ನನ್ನ ಸಣ್ಣ ಪ್ರಯತ್ನ. ನಾನು ಇದನ್ನು ಸಮರ್ಪಣಾಭಾವದಿಂದ ಪೂರ್ಣ ಈಡುಪಾಡಿನೊಂದಿಗೆ ಮಾಡುತ್ತಿದ್ದೇನೆ" ಎಂದು ಆ ಹಿರಿಯರು ಹೇಳಿದರು.

ಒಬ್ಬ ಅಜ್ಜನ ಇಂತಹ ಸಮರ್ಪಣಾ ಮನೋಭಾವ ಮುಂದಿನ ಪೀಳಿಗೆಗೆ ಅವರ ಮಾತೃಭಾಷೆಯನ್ನು ಕಲಿಸುತ್ತದೆ. ವಿದೇಶದಲ್ಲಿ ಎಲ್ಲೋ ವಾಸಿಸುವ ತನ್ನ ಮೊಮ್ಮಗನೊಂದಿಗೆ ಸಂವಹನ ನಡೆಸಲು, ಪೀಳಿಗೆಯ ಅಂತರವನ್ನು ನಿವಾರಿಸಿಕೊಳ್ಳಲು ಅವರು ತಂತ್ರಜ್ಞಾನವನ್ನು ಕಲಿಯಲು ಸಹ ಇದರಿಂದ ಸಾಧ್ಯವಾಗುತ್ತದೆ. ಆ ಒಂದು ಗಂಟೆಯನ್ನು ಅವನಿಗೆ ಉತ್ತಮ ಅನುಭವವನ್ನಾಗಿ ಮಾಡಲು, ಅವರು ಅತ್ಯುತ್ತಮ ಪುಸ್ತಕಗಳನ್ನು ಹುಡುಕಿ ಖರೀದಿಸುತ್ತಾರೆ ಮತ್ತು ವೀಡಿಯೊ ಕರೆಯ ಮೂಲಕ ಅವನೊಂದಿಗೆ ಮಾತನಾಡುವ ಮೊದಲು ಅದನ್ನು ಅಭ್ಯಾಸ ಮಾಡುತ್ತಾರೆ. ಒಂದು ಗಂಟೆಯ ಕಾಲ ತಾವು ಮಾಡಲಿರುವ ಕೆಲಸವನ್ನು ಚೆನ್ನಾಗಿ ಮಾಡಲು ಅವರು ತೋರಿಸುವ ಇಂತಹ ಸಮರ್ಪಣೆಯೇ ಎಂಟು ವರ್ಷದ ಮಗು ತನ್ನ ಮಾತೃಭಾಷೆಯನ್ನು ಕಲಿಯುವಂತೆ ಮಾಡುತ್ತದೆ. ಇದೇ ಸಮರ್ಪಣಾ ಮನೋಭಾವದಿಂದ ಮಾಡುವ ಕೆಲಸಕ್ಕೆ ದೊರಕುವ ಪ್ರತಿಫಲ.

'ಜೀವನದಲ್ಲಿ ಗುರಿಯನ್ನು ಹೊಂದಿರುವವರು ಅದರಲ್ಲಿ ಯಶಸ್ವಿಯಾಗುತ್ತಾರೆ' ಎಂಬುದೆಲ್ಲ ಕಲ್ಪನೆ. ತಮ್ಮ ಮಹತ್ವಾಕಾಂಕ್ಷೆಗಳನ್ನು ಸಾಧಿಸಲು ಶ್ರಮಿಸುವವರು ಮಾತ್ರವೇ ಅದರಲ್ಲಿ ಯಶಸ್ವಿಯಾಗುತ್ತಾರೆ. ಬದ್ಧತೆ ಇಲ್ಲದ ಮಹತ್ವಾಕಾಂಕ್ಷೆ ಕೇವಲ ಹಗಲುಗನಸಾಗಿರುತ್ತದೆ. ಕಣ್ಣು ತೆರೆದರೆ ಅದು ಮಾಯವಾಗುತ್ತದೆ.

ರಾಮ್‌ರಾಜ್ ಕಾಟನ್ ಕಂಪನಿಯು ನಲವತ್ತು ವರ್ಷಗಳಿಂದಲೂ ಮಹತ್ವಾಕಾಂಕ್ಷೆಯೊಂದಿಗೆ ತನ್ನ ಯಶಸ್ಸಿನ ಪ್ರಯಾಣವನ್ನು ಅರ್ಪಣಾ ಭಾವದಿಂದ ಮುಂದುವರೆಸಿಕೊಂಡು ಬಂದಿದೆ. ವ್ಯವಹಾರದಲ್ಲಿ ತೊಡಗಿರುವ ಪ್ರತಿಯೊಬ್ಬರೂ ತಮ್ಮ ಸಂಸ್ಥೆಯನ್ನು ಉನ್ನತ ದರ್ಜೆಯ ಕಂಪನಿಯಾಗಿ ಬೆಳೆಸುವ ಮಹತ್ವಾಕಾಂಕ್ಷೆಯನ್ನು ಹೊಂದಿರುತ್ತಾರೆ. ಅದನ್ನು ಸಾಧಿಸಬೇಕಾದರೆ ಅದರ ಸಂಸ್ಥಾಪಕರು ಮಾತ್ರ ಸಮರ್ಪಣಾ ಭಾವದಿಂದ ಕೆಲಸ ಮಾಡಿದರೆ ಅದರಲ್ಲಿ ಯಶಸ್ಸು ಸಿಗುವುದಿಲ್ಲ. ಕಂಪನಿಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರೂ ಒಂದೇ ರೀತಿಯ ಮನಸ್ಥಿತಿಯೊಂದಿಗೆ ಕೆಲಸ ಮಾಡಿದಾಗ ಮಾತ್ರ ಗುರಿಯನ್ನು ಸಾಧಿಸಲು ಸಾಧ್ಯ.

ನಲವತ್ತು ವರ್ಷಗಳಿಗೂ ಹೆಚ್ಚು ಕಾಲ ನನ್ನೊಂದಿಗೆ ಕೈಜೋಡಿಸಿ ಕೆಲಸ ಮಾಡಿದ ನಮ್ಮ ಕಂಪನಿಯ ಉದ್ಯೋಗಿಗಳಿದ್ದಾರೆ. 'ಗ್ರಾಹಕರಿಗೆ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಒದಗಿಸುವುದು' ಎಂಬ ನಮ್ಮ ಕಂಪನಿಯ ಧ್ಯೇಯವನ್ನು ತಮ್ಮ ಹೃದಯದಲ್ಲಿ ಅವರು ಹೊತ್ತುಕೊಂಡಿದ್ದಾರೆ.



ರಾಮ್‌ರಾಜ್ ಕಂಪನಿಯಲ್ಲಿ ಸತತ 30 ವರ್ಷಗಳು, 25 ವರ್ಷಗಳು, 20 ವರ್ಷಗಳು, 15 ವರ್ಷಗಳು ಎಂದು ನಮ್ಮೊಂದಿಗೆ ಪ್ರಯಾಣಿಸಿದ ಎಲ್ಲರಿಗೂ ಧನ್ಯವಾದ ತಿಳಿಸಿ ನಾನು ಒಂದು ಪತ್ರ ಬರೆದಿದ್ದೆ. ಅ ಪತ್ರ ಬರೆಯುವಾಗ ಅವರೆಲ್ಲರ ಸಮರ್ಪಣಾ ಭಾವ, ಕಠಿಣ ಪರಿಶ್ರಮಗಳನ್ನು ನೆನೆನು ನನ್ನ ಹೃದಯ ತುಂಬಿ ಬಂದಿತ್ತು!

ವೃತ್ತಿಪರತೆ ಮತ್ತು ಸಮರ್ಪಣಾ ಮನೋಭಾವದಿಂದ ಮಾಡುವ ಕೆಲಸ ನಮ್ಮನ್ನು ಒಟ್ಟಿಗೆ ಬೆಸೆಯುತ್ತದೆ. 40 ವರ್ಷಗಳ ಹಿಂದೆ ನಾನು ಏಕಾಂಗಿಯಾಗಿ ಪಂಚೆಗಳನ್ನು ಮಾರಾಟ ಮಾಡಲು ಪ್ರಾರಂಭಿಸಿದಾಗ ನನಗಿದ್ದ ಬದ್ಧತೆ ಕಾಲಾನಂತರದಲ್ಲಿ ಹಲವು ಪಟ್ಟು ಹೆಚ್ಚಾಗಿದೆ. ನಾನು ಒಂದೇ ಕೆಲಸವನ್ನು ಮತ್ತೆ ಮತ್ತೆ ಮಾಡುತ್ತಿದ್ದೇನೆ ಎಂದು ಒಮ್ಮೆಯೂ ನನಗೆ ಅನ್ನಿಸಲಿಲ್ಲ. ಈ ಕೆಲಸದಲ್ಲಿ ಹೊಸತನವನ್ನು ಕಂಡುಕೊಳ್ಳುವ ಉತ್ಸಾಹವು ನನಗೆ ಮಾರ್ಗದರ್ಶನ ನೀಡುತ್ತಲೇ ಇದೆ. ರಾಮರಾಜ್ ಕಾಟನ್ ಉತ್ಪನ್ನಗಳನ್ನು ವಿಶ್ವಾಸದಿಂದ ಖರೀದಿಸುವ ಗ್ರಾಹಕರನ್ನು ತೃಪ್ತಿ ಪಡಿಸುವುದಕ್ಕಾಗಿಯೇ ಶ್ರಮಿಸಬೇಕು ಎಂದು ನಾನು ನನ್ನ ಸಹೋದ್ಯೋಗಿಗಳಿಗೆ ಹೇಳುತ್ತೇನೆ.

ಉತ್ಪನ್ನವನ್ನು ಮಾರಾಟ ಮಾಡುವುದು ಮಾತ್ರವೇ ನಮ್ಮ ಏಕೈಕ ಗು–ರಿಯಾಗಿದ್ದರೆ, ನಾವು ಯಶಸ್ವಿಯಾಗಿ ಅದನ್ನು ವ್ಯಾಪಾರ ಮಾಡಬಹುದು. ಆದರೆ, ಆ ಉತ್ಪನ್ನವು ಉತ್ತಮ ಗುಣಮಟ್ಟದ್ದಾಗಿಲ್ಲದಿದ್ದರೆ, ಗ್ರಾಹಕರು ಆ ಅಂಗಡಿಗೆ ಮತ್ತೊಮ್ಮೆ ಬರುವುದಿಲ್ಲ. ಪ್ರತಿಯೊಬ್ಬರನ್ನೂ ಶಾಶ್ವತ ಗ್ರಾಹಕರನ್ನಾಗಿ ರೂಪಿಸಲು ಅದರ ಗುಣಮಟ್ಟವೇ ಆಧಾರವಾಗಿರಬೇಕು. ಅದಕ್ಕಾಗಿಯೇ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ಉತ್ಪಾದಿಸುವುದು ಮತ್ತು ಮಾರಾಟ ಮಾಡುವುದು ನಮ್ಮ ಗುರಿಯಾಗಿರಬೇಕು ಎಂದು ನಾನು ಒತ್ತಿ ಹೇಳುತ್ತೇನೆ. ನಮ್ಮ ಉತ್ಪನ್ನಗಳು ಗ್ರಾಹಕರಲ್ಲಿ ಮೌಲ್ಯಯುತ ಭಾವನೆ ಮೂಡಿಸಬೇಕು. ವಾರ್ಷಿಕ ಆದಾಯದ ಮೂಲಕ ಕಂಪನಿಯ ಬೆಳವಣಿಗೆಯನ್ನು ಅಳೆಯುವ ಬದಲು, ಗ್ರಾಹಕರ ತೃಪ್ತಿಯಿಂದ ಅಳೆಯುವುದು ಹೆಚ್ಚು ಸೂಕ್ತ ಎಂದು ನಾನು ನಂಬುತ್ತೇನೆ.

"ನಾವು ನೇಕಾರರ ಜೀವನವನ್ನು ಉತ್ತಮ ಪಡಿಸಲು ಕೆಲಸ ಮಾಡುತ್ತಿದ್ದೇವೆ" ಎಂಬ ಭಾವನೆಯನ್ನು ನಾನು ನನ್ನಲ್ಲಿ ಬೆಳೆಸಿಕೊಂಡಂತೆಲ್ಲಾ, ಆ ವೃತ್ತಿಯ ಬಗ್ಗೆ ನನ್ನಲ್ಲಿ ಗೌರವ ಹೆಚ್ಚಿತು. ಈ ಚಿಂತನೆ ರಾಮರಾಜ್ ಕಾಟನ್‌ನಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಲ್ಲೂ ಪ್ರತಿಫಲಿಸಬೇಕೆಂದು ನಾನು ಬಯಸಿದೆ. ಹೀಗೆ ಸಮರ್ಪಣಾ ಮನೋಭಾವದಿಂದ ತಮ್ಮನ್ನು ತೊಡಗಿಸಿಕೊಳ್ಳುವವರ ಬೆಳವಣಿಗೆಗೂ ನಮ್ಮ ಸಂಸ್ಥೆಯು ಬೆಂಬಲ ನೀಡುತ್ತದೆ. ಏಕೆಂದರೆ ಕಂಪನಿಯ ಬೆಳವಣಿಗೆಯಲ್ಲಿ ಅವರ ಕೊಡುಗೆ ಸಾಕಷ್ಟಿರುತ್ತದೆ.

ಪ್ರತಿ 15 ವರ್ಷಗಳಿಗೊಮ್ಮೆ ಪೀಳಿಗೆಯ ಬದಲಾವಣೆ ಸಂಭವಿಸುತ್ತದೆ ಎಂದು ತಜ್ಞರು ಹೇಳುತ್ತಾರೆ. ಹಾಗಾದಲ್ಲಿ, ಮೂರನೇ ತಲೆಮಾರಿನವರು ಈಗ ರಾಮರಾಜ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಇದು ಸಂಬಂಧಕ್ಕೂ ಮೀರಿದ ಬಾಂಧವ್ಯ. ಇದು ಉದ್ಯಮವು ಮುಂದುವರಿಯುವ ಮತ್ತು ಅಭಿವೃದ್ಧಿ ಹೊಂದುವ ಬದ್ಧತೆಯೊಂದಿಗೂ ಸಂಬಂಧ ಹೊಂದಿರುತ್ತದೆ. ಈ ತಿಂಗಳ 'ಬಿಳುಪು ಭಾವನೆಗಳು' ಸಂಚಿಕೆಯು, ಯಾವುದೇ ಕೆಲಸದಲ್ಲಾದರೂ ಅರ್ಪಣಾಭಾವದಿಂದ ಸಂಪೂರ್ಣ ಈಡುಪಾಡಿನೊಂದಿಗೆ ತೊಡಗಿಸಿಕೊಂಡರೆ ಸಂತೋಷ ಮತ್ತು ಬೆಳವಣಿಗೆ ಖಚಿತ ಎಂಬುದನ್ನು ಓದುಗರಿಗೆ ಮನವರಿಕೆ ಮಾಡಿಕೊಡುತ್ತದೆ.


The Culturepreneur

**ಗುರು ಕೃಪೆ**

ಬಾಳ್ಗೆ ಭೂಮಂಡಲ – ಬಾಳ್ಗೆ ಸಮೃದ್ಧಿಯೊಂದಿಗೆ

**ಕೆ.ಆರ್. ನಾಗರಾಜನ್**

ಸಂಸ್ಥಾಪಕರು – ರಾಮ್‌ರಾಜ್ ಕಾಟನ್

# ಅರ್ಪಣಾ ಭಾವ ಇರುವುದನ್ನು



ಬಡಗಿ ಕೆಲಸ ಮಾಡುತ್ತಿದ್ದ ಒಬ್ಬ ಬಡವನಿದ್ದ. ಅವನು ತನ್ನ ಅಲ್ಪ ಆದಾಯದಲ್ಲಿ ಹೇಗೋ ಜೀವನ ನಡೆಸುತ್ತಿದ್ದ. ದಿನದಿಂದ ದಿನಕ್ಕೆ ಅವನ ಆದಾಯ ಇನ್ನೂ ಕಡಿಮೆಯಾಗತೊಡಗಿತು. ಅವನೂ, ಅವನ ಹೆಂಡತಿ ಮತ್ತು ಇಬ್ಬರು ಮಕ್ಕಳೂ ಅವನಿಗೆ ಬರುತ್ತಿದ್ದ ಆದಾಯದಲ್ಲಿ ಬದುಕುಳಿಯುವುದೇ ಕಷ್ಟ ಎನ್ನಿಸುತ್ತಿತ್ತು.

ಒಂದು ದಿನ ಅವನು ಬೀದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಅವನಿಗೆ ಒಂದು ಹಳೆಯ ನಾಣ್ಯ ಸಿಕ್ಕಿತು. ಆ ನಾಣ್ಯದ ಮಧ್ಯದಲ್ಲಿ ಒಂದು ರಂಧ್ರವಿತ್ತು. ಹಳೆಯ ಕಾಲದ ನಾಣ್ಯಗಳು ಈ ರೀತಿ ರಂಧ್ರಗಳಿಂದ ಕೂಡಿರುತ್ತಿದ್ದವು. "ಹೀಗೆ ಟೊಳ್ಳಾದ ನಾಣ್ಯ ಸಿಗುವುದು ಅದೃಷ್ಟ" ಎಂದು ಹಿಂದೆಂದೋ ಅವನ ಜ್ಯೋತಿಷಿ ಸ್ನೇಹಿತರೊಬ್ಬರು ಹೇಳಿದ್ದುದು ಅವನಿಗೆ ನೆನಪಾಯಿತು. ಆದುದರಿಂದ ಅವನು ಅದನ್ನು ತೆಗೆದುಕೊಂಡು, 'ಇಂದಿನಿಂದ, ಅದೃಷ್ಟ ನನಗೆ ಬರುತ್ತದೆ, ನಾನು ಶ್ರೀಮಂತನಾಗುತ್ತೇನೆ' ಎಂದುಕೊಂಡ ಅವನು ಆ ನಾಣ್ಯವನ್ನು ತೆಗೆದುಕೊಂಡು ತನ್ನ ಜೇಬಿನಲ್ಲಿ ಇಟ್ಟುಕೊಂಡ.

ಆ ದಿನ ಅವನಿಗೆ ಸ್ವಾಭಾವಿಕವಾಗಿಯೇ ಇತರ ದಿನಗಳಿಗಿಂತ ಹೆಚ್ಚಿನ ಕೆಲಸ ಮತ್ತು ಅದರಿಂದ ಸ್ವಲ್ಪ ಹೆಚ್ಚಿನ ಆದಾಯ ಸಿಕ್ಕಿತು. "ಈ ನಾಣ್ಯ ನನಗೆ ಸಿಕ್ಕ ಸಮಯ ನನಗೆ ತುಂಬಾ ಒಳ್ಳೆಯದಾದುದಾಗಿದೆ" ಎಂದು ಅವನು ಇನ್ನೂ ಹೆಚ್ಚಾಗಿ ನಂಬಿದ. ಮನೆಗೆ ಬಂದು ತನ್ನ ಹೆಂಡತಿಗೆ ಇದನ್ನೆಲ್ಲಾ ಹೇಳಿ, ಹಳೆಯ ರೇಷ್ಮೆ ತುಂಡಿನಿಂದ ಒಂದು ಸುಂದರವಾದ ಚೀಲವನ್ನು ತಯಾರಿಸಿಕೊಂಡು, ಅದರೊಳಗೆ ಆ ನಾಣ್ಯವನ್ನು ಸುರಕ್ಷಿತವಾಗಿ ಇಟ್ಟುಕೊಂಡ. ಆ ಚೀಲವನ್ನು ತನ್ನ ಮರಗೆಲಸದ ಉಪಕರಣಗಳೊಂದಿಗೆ ಭದ್ರವಾಗಿ ಇಟ್ಟುಕೊಂಡ. ಅವನು ಪ್ರತಿದಿನ ಕೆಲಸಕ್ಕೆ ಹೊರಡುವ ಮೊದಲು ಅದನ್ನು ಮುಟ್ಟಿ ನೋಡುತ್ತಿದ್ದ. ಆದರೆ ಚೀಲದಿಂದ ಅದನ್ನು ಹೊರ ತೆಗೆಯುತ್ತಿರಲಿಲ್ಲ.

ಹೇಗೋ ಕೆಲವೇ ತಿಂಗಳುಗಳಲ್ಲಿ ಅವನ ಆದಾಯ ಇನ್ನೂ ಸ್ವಲ್ಪ ಹೆಚ್ಚಾಯಿತು. ಅಲ್ಲಿಯವರೆಗೆ ಕೂಲಿ ಕೆಲಸ ಮಾಡುತ್ತಿದ್ದ ಆ ವ್ಯಕ್ತಿ, ಕೆಲವರಿಂದ ಸಾಲ ಪಡೆದು ಸ್ವಂತ ಉದ್ಯಮವನ್ನು ಆರಂಭಿಸಿದ. ಅವನ ವೃತ್ತಿಜೀವನ ಮುಂದುವರೆಯಿತು. ವಿದೇಶಗಳಿಂದ ಕೂಡ ಅವಕಾಶಗಳು ಬಂದವು. ಇದನ್ನೆಲ್ಲ ಮಾಡಲು ಅವನು ಕೆಲಸಗಾರರನ್ನು ಕೂಡ ನೇಮಿಸಿಕೊಂಡ. ತಾನು ತಯಾರಿಸಿದ ವಸ್ತುಗಳನ್ನು ಮಾರಾಟ ಮಾಡಲು ಒಂದು ಅಂಗಡಿಯನ್ನು ಕೂಡ ತೆರೆದ. ಕೆಲವೇ ವರ್ಷಗಳಲ್ಲಿ, ನೆರೆಯ ನಗರಗಳಲ್ಲಿ ಶಾಖೆಗಳನ್ನು ಕೂಡ ತೆರೆದ. ಹೀಗೇ ಮುಂದುವರೆದು, ನಗರದಲ್ಲಿ ಅತಿ ಹೆಚ್ಚು ಆದಾಯ ಗಳಿಸುವ ಉದ್ಯಮಿಗಳಲ್ಲಿ ಅವನೂ ಒಬ್ಬನಾದ.

ಒಂದು ಬಿಡುವಿನ ದಿನ ಅವನು ತನ್ನ ಹೆಂಡತಿ ಮತ್ತು ಮಕ್ಕಳೊಂದಿಗೆ ವಿರಾಮವಾಗಿ ಕುಳಿತಿದ್ದಾಗ ತನ್ನ ಜೀವನದ ಬಗ್ಗೆ ಮಾತನಾಡುತ್ತಾ, "ರಂಧ್ರವಿರುವ ಆ ನಾಣ್ಯವನ್ನು ನಾನು ಒಂದು ಕ್ಷಣವೂ ಬಿಟ್ಟಿರಲಿಲ್ಲ. ಇದೆಲ್ಲಾ ಅದರಿಂದ ನಮಗೆ ಬಂದಿರುವ ಅದೃಷ್ಟ! ಆದರೆ ಅದನ್ನು ನಾನು ಹೊರಗೆ ತೆಗೆದು ನೋಡಲೇ ಇಲ್ಲ. ಬಹಳ ವರ್ಷಗಳ ನಂತರ ಈಗ ನಾನು ಅದನ್ನು ನೋಡಲಿದ್ದೇನೆ" ಎಂದು ಹೇಳಿ ಅದನ್ನು ತನ್ನ ರೇಷ್ಮೆ ಚೀಲದಿಂದ ಹೊರತೆಗೆದು ನೋಡಿ, ಒಳಗಿನ ನಾಣ್ಯದಲ್ಲಿ ಯಾವುದೇ ರಂಧ್ರವಿಲ್ಲದಿರುವುದನ್ನು ಕಂಡು ಆಘಾತಕ್ಕೊಳಗಾದ.

"ಇದು ಹೇಗೆ ಸಾಧ್ಯ?" ಎಂದು ಅವನು ಗೊಂದಲದಿಂದ ಹೆಂಡತಿಯತ್ತ ನೋಡಿದ.

ಅವನ ಹೆಂಡತಿ ಹಿಂಜರಿಯುತ್ತಾ ಹೇಳಿದಳು: "ಕ್ಷಮಿಸಿ. ರೇಷ್ಮೆ ಚೀಲ ಕೊಳಕಾಗಿದ್ದುದರಿಂದ ಅದನ್ನು ತೊಳೆಯಲು ತೆಗೆದುಕೊಂಡು ಹೋಗಿದ್ದೆ. ಒಗೆಯುವ ಮುನ್ನ ಅದನ್ನು ಜೋರಾಗಿ ಒದರಿದ್ದರಿಂದ ಅದರಲ್ಲಿದ್ದ ಆ ನಾಣ್ಯ ಎಲ್ಲೋ ಬಿದ್ದು ಹೋಯಿತು. ಎಷ್ಟೇ ಹುಡುಕಿದರೂ ಸಿಗಲಿಲ್ಲ. ಆದ್ದರಿಂದ ಅದೇ ಮಾದರಿಯ ಇನ್ನೊಂದು ನಾಣ್ಯವನ್ನು ಅದರಲ್ಲಿ ಹಾಕಿದೆ."

"ಇದು ಯಾವಾಗ ಸಂಭವಿಸಿತು?" ಎಂದು ಅವನು ಕೇಳಿದ.

"ಆ ಹಣ ಸಿಕ್ಕ ಒಂದು ವಾರದೊಳಗೆ" ಎಂದು ಅವಳು ಹೇಳಿದಳು.

ಅವನು ಶಾಂತವಾಗಿ ಕುಳಿತು ಯೋಚಿಸಿದ... 'ಆರಂಭದಲ್ಲಿ ನಾನು ಸಿಕ್ಕಷ್ಟೇ ಆದಾಯ ಸಾಕು



# ಹೇಗೆ ಅರಿಯುವುದು?

ಎಂಬಂತೆ ಸ್ವಲ್ಪವೇ ಕೆಲಸ ಮಾಡುತ್ತಿದ್ದೆ ಮತ್ತು ಆ ಸಮಯದಲ್ಲಿ ನಾನು ಯಾವುದೇ ಬದ್ಧತೆ ಇಲ್ಲದೆ ಕೆಲಸ ಮಾಡುತ್ತಿದ್ದೆ. ನಾನು ನನ್ನ ವೃತ್ತಿಯಲ್ಲಿ ಆಸಕ್ತಿ ಮತ್ತು ಬದ್ಧತೆಯನ್ನು ತೋರಿಸಲು ಪ್ರಾರಂಭಿಸಿದಾಗ ನನ್ನ ಜೀವನ ಬದಲಾಯಿತು. ನಿಜವಾಗಲೂ ಅದೃಷ್ಟ ತಂದು ಕೊಟ್ಟಿದ್ದು ನಾಣ್ಯವಲ್ಲ. ಇದು ನನ್ನ ಸಮರ್ಪಣೆ ಮತ್ತು ಕಠಿಣ ಪರಿಶ್ರಮದಿಂದ ಸಾಧ್ಯವಾಗಿದೆ' ಎಂದು ಅವನು ಯೋಚಿಸಿದ. ಆ ನಂತರ ಅವನು ಮೊದಲಿಗಿಂತ ಹೆಚ್ಚು ಉತ್ಸಾಹದಿಂದ ತನ್ನ ಕೆಲಸವನ್ನು ಮುಂದುವರೆಸಿದ.

ಒಬ್ಬ ವ್ಯಕ್ತಿಗೆ ತನ್ನ ಕೆಲಸ, ವೃತ್ತಿ ಅಥವಾ ವ್ಯವಹಾರದ ಬಗ್ಗೆ ಬದ್ಧತೆ ಎಲ್ಲಿಂದ ಬರುತ್ತದೆ? ಅದು ಕೋಪ, ಕಿರಿಕಿರಿ, ದುಃಖ, ಭಯ ಅಥವಾ ಹತಾಶೆಯಂತಹ ನಕಾರಾತ್ಮಕ ಭಾವನೆಗಳಿಂದ ಉದ್ಭವಿಸಲು ಸಾಧ್ಯವಿಲ್ಲ. ಸಕಾರಾತ್ಮಕ ಭಾವನೆಗಳು ನಿಶ್ಚಿತತೆಯನ್ನು ಸೃಷ್ಟಿಸುತ್ತವೆ.

ಉದಾಹರಣೆಗೆ ಒಬ್ಬ ಮನುಷ್ಯನನ್ನು ನೋಡೋಣ. ಅವನು ಪ್ರತಿದಿನ ಬೆಳಿಗ್ಗೆ ಐದು ಗಂಟೆಗೆ ಎದ್ದು, ಸಿದ್ಧನಾಗಿ, ರೈಲು ಹತ್ತಿ ಒಂದು ದೊಡ್ಡ ನಗರವನ್ನು ತಲುಪುತ್ತಿದ್ದ. ಅವನು ಅಲ್ಲಿ ಒಂಬತ್ತು ಗಂಟೆಗೆ ಇಳಿದು, ಬಸ್ ಹಿಡಿದು, ಹತ್ತು ಗಂಟೆಗೆ ತನ್ನ ಕೆಲಸದ ಸ್ಥಳಕ್ಕೆ ಹೋಗುತ್ತಿದ್ದ. ಸಂಜೆ ಏಳು ಗಂಟೆಗೆ ಕೆಲಸ ಮುಗಿಸಿ ರಾತ್ರಿ ಹತ್ತು ಗಂಟೆಗೆ ಮನೆಗೆ ಮರಳುತ್ತಿದ್ದ. ವರ್ಷ ಪೂರ್ತಿ ಪ್ರತಿ ದಿನ, ವಾರದಲ್ಲಿ ಆರು ದಿನಗಳು ಇದೇ ರೀತಿಯ ಪ್ರಯಾಣ.

ಅವನು ಇದನ್ನು ಯಾವ ಬಗೆಯ ಮನೋಭಾವದಿಂದ ಮಾಡುತ್ತಾನೆ ಎಂಬುದು ಅವನ ಬೆಳವಣಿಗೆಯನ್ನು ನಿರ್ಧರಿಸುತ್ತದೆ. "ನನ್ನ ಹಣೆ ಬರೆಹ ಹೀಗೆ ಯಾವಾಗಲೂ ಅಲೆದಾಡುವಂತೆ ಆಗಿ ಹೋಗಿದೆಯಲ್ಲಾ!' ಎಂಬ ಹತಾಶೆಯಿಂದಲೂ ಅವನು ಈ ಕೆಲಸವನ್ನು ಮಾಡಬಹುದು. "ಇದನ್ನು ಬಿಟ್ಟರೆ ನನಗೆ ಬದುಕಲು ಬೇರೆ ದಾರಿ ಇಲ್ಲ" ಅಂತ ಯೋಚಿಸಿ ಅನಿವಾರ್ಯತೆಯಿಂದಲೂ ಆ ಕೆಲಸ ಮಾಡಬಹುದು. 'ನಾನು ಇದನ್ನು ನನ್ನ ಕುಟುಂಬಕ್ಕಾಗಿ ಮಾಡಲೇಬೇಕಾಗಿದೆ. ಇದು ಇಲ್ಲದೆ ಹೋದರೆ, ಬೀದಿಗೆ ಬೀಳಬೇಕಾಗುತ್ತದೆ' ಎಂಬ ಭಯದಿಂದಲೂ ಅವನು ಆ ಕೆಲಸ ಮಾಡಬಹುದು. ನನ್ನದು ಅನುಕೂಲಸ್ಥ ಕುಟುಂಬವಲ್ಲ, ಸರಿಯಾದ ಶಿಕ್ಷಣದ ಪಡೆದುಕೊಳ್ಳದೇ ಹೋಗಿರುವುದು, ನಮ್ಮ ಊರಿನಲ್ಲಿ ಅವಕಾಶಗಳಿಗೆ ಕೊರತೆ ಇರುವುದರಿಂದಲೇ ಹೀಗೆ ಬೇರೆಲ್ಲೋ ಹೋಗಬೇಕಾಗಿದೆ ಎಂದುಕೊಳ್ಳುವುದು ಹೀಗೆ ಯಾವ್ಯಾವುದೋ ಕಾರಣ ಮತ್ತು ನೆಪಗಳನ್ನು ಕಲ್ಪಿಸಿಕೊಳ್ಳುವ ಮೂಲಕ ಅವನು ತನ್ನ ಶಾಂತಿಯನ್ನು ಕಳೆದುಕೊಳ್ಳಬಹುದು. ಆದರೆ ಇದ್ಯಾವುದೂ ಅವನ ಅಭಿವೃದ್ಧಿಗೆ ಸಹಾಯ ಮಾಡುವುದಿಲ್ಲ.

ತನ್ನ ಕೆಲಸಕ್ಕೆ ಬದ್ಧನಾಗಿರುವ ಇನ್ನೊಬ್ಬ ವ್ಯಕ್ತಿ ಇದೇ ಕೆಲಸವನ್ನು ವಿಭಿನ್ನವಾಗಿ ಮಾಡುತ್ತಾನೆ. ಅವನು ಪ್ರತಿದಿನ ಹತಾಶೆ, ಗೊಣಗುವಿಕೆ ಅಥವಾ ಕಿರಿಕಿರಿಯಿಲ್ಲದೆ ನೆಮ್ಮದಿಯಿಂದ ಆ ಕೆಲಸಕ್ಕೆ ಹೋಗುತ್ತಾನೆ. ಅವನು ತನ್ನ ಪ್ರಯಾಣದ ಸಮಯವನ್ನು ಸಹ ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳುತ್ತಾನೆ. ಈ ಕೆಲಸವನ್ನು ಬಿಟ್ಟು ನನಗೆ ಬೇರೆ ದಾರಿಯಿಲ್ಲ ಎಂಬ ಭಾವನೆ ಅವನಲ್ಲಿರುವುದಿಲ್ಲ. 'ಇದು ನನ್ನ ಜೀವನಕ್ಕೆ ಹೇಗೆ ಸಹಾಯ ಮಾಡುತ್ತದೆ?', 'ನಾನು ಇದನ್ನು ಕೌಶಲ್ಯದಿಂದ ಚೆನ್ನಾಗಿ ಮಾಡುವುದನ್ನು ಕಲಿತರೆ ನನಗೆ ಯಾವ ರೀತಿಯ ಪ್ರಗತಿ ಸಿಗುತ್ತದೆ?' ಎಂದು ಅವನು ಯೋಚಿಸುತ್ತಾನೆ.

ಅವನು ಪ್ರತಿದಿನ ಒಂದೇ ರೀತಿಯಲ್ಲಿ ತನ್ನ ಕೆಲಸವನ್ನು ಮಾಡುವುದಿಲ್ಲ, ತಾನು ಮಾಡುವ ಕೆಲಸದಲ್ಲಿ ವ್ಯತ್ಯಾಸಗಳನ್ನು ತೋರಿಸುತ್ತಾನೆ. ತಾನು ಮಾಡುವ ಕೆಲಸಗಳನ್ನು ಇನ್ನಷ್ಟು ಸರಳ ಮತ್ತು ಉತ್ತಮಗೊಳಿಸಲು ಮಾರ್ಗಗಳನ್ನು ಕಂಡುಕೊಳ್ಳುತ್ತಾನೆ. ಅದು ಅವನನ್ನು ಇತರರಿಂದ ಭಿನ್ನವಾಗಿಸುತ್ತದೆ ಮತ್ತು ಅವನನ್ನು ಇನ್ನೂ ಹೆಚ್ಚಿನ ಎತ್ತರಕ್ಕೆ ಕೊಂಡೊಯ್ಯುತ್ತದೆ.

ಕಬ್ಬಿಣವನ್ನು ಬೇರೆ ಯಾವುದೇ ವಸ್ತುವಿನಿಂದ ನಾಶ ಮಾಡಲು ಸಾಧ್ಯವಿಲ್ಲ. ಅದು ತುಕ್ಕು ಹಿಡಿದು ತಾನಾಗಿಯೇ ನಾಶವಾಗುತ್ತದೆ. ಇದು ಮನುಷ್ಯರ ಸ್ವಭಾವವೂ ಹೌದು! ನಮ್ಮ ನಕಾರಾತ್ಮಕ ಆಲೋಚನೆಗಳಿಂದ ನಾವೇ ನಾಶವಾದಾಗ ಮಾತ್ರ ಅದು ಸಂಭವಿಸುತ್ತದೆ. ನಾವು ದೃಢವಾದ ಮನಸ್ಸಿನಿಂದ ಸಕಾರಾತ್ಮಕವಾಗಿ ಯೋಚಿಸಿ, ಮಾಡುವ ಕೆಲಸವನ್ನು ಬದ್ಧತೆಯಿಂದ ಮಾಡಲು ನಿಂತರೆ, ಯಾವುದೂ ನಮಗೆ ಹಾನಿ ಮಾಡಲು ಸಾಧ್ಯವಿಲ್ಲ. ಕಷ್ಟಪಟ್ಟು ದುಡಿದು ಮೇಲೇರೋಣ! •

# ಕಥಾ ಸಮಯ



ಒಬ್ಬ ರೋಗಿ ಕಿಟಕಿಯ ಪಕ್ಕದ ಹಾಸಿಗೆಯಲ್ಲಿ ಮಲಗಿ ಕಿಟಕಿಯಿಂದ ಹೊರಗೆ ನೋಡುತ್ತಿದ್ದ. ಅವನ ಪಕ್ಕದ ಹಾಸಿಗೆಯ ಮೇಲೆ ಮಲಗಿದ್ದ ವ್ಯಕ್ತಿ ಯಾವುದೋ ಮಾರಕ ಕಾಯಿಲೆಯಿಂದ ಬಳಲುತ್ತಾ, ಎದ್ದೇಳಲೂ ಸಾಧ್ಯವಾಗದೆ ಹತಾಶೆಯಿಂದ ಮಲಗಿದ್ದ.

ಈ ವ್ಯಕ್ತಿ ಅವನೊಂದಿಗೆ ಯಾವಾಗಲೂ ಏನಾದರೂ ಮಾತನಾಡುತ್ತಿದ್ದ. ನಡೆಯಲೂ ಸಾಧ್ಯವಾಗದೆ ಮಲಗಿದ್ದ ಅವನಲ್ಲಿ ತನ್ನ ಮಾತುಗಳಿಂದಲೇ ಉತ್ಸಾಹ ತುಂಬುತ್ತಿದ್ದ. ಕಿಟಕಿಯ ಹೊರಗೆ ಕಾಣುತ್ತಿದ್ದ ಹೂವಿನ ತೋಟ, ರಸ್ತೆಯಲ್ಲಿ ವೇಗವಾಗಿ ಬರುವ ವಾಹನಗಳು ಮತ್ತು ಶಾಲೆಗೆ ಧಾವಿಸುತ್ತಿರುವ ವಿದ್ಯಾರ್ಥಿಗಳ ಬಗ್ಗೆ ಅವನು ವಿವರಿಸುತ್ತಿದ್ದ. ಇದನ್ನೆಲ್ಲಾ ಕೇಳುವಾಗ, ಮಲಗಿದ್ದ ರೋಗಿಗೆ ಬದುಕುವ ಆಸೆ ಹೆಚ್ಚಿತು. ಅವನು ನಿಧಾನವಾಗಿ ಎದ್ದು ಕುಳಿತುಕೊಳ್ಳಲು ಪ್ರಾರಂಭಿಸಿದ.

ಆ ಸಮಯದಲ್ಲಿ ಕಿಟಕಿಯ ಬಳಿ ಮಲಗುತ್ತಿದ್ದ ಮೊದಲ ರೋಗಿ ಸತ್ತು ಹೋದ. ಎರಡನೇ ರೋಗಿಗೆ ಇದನ್ನು ನೋಡಿ ದೊಡ್ಡ ಆಘಾತವಾಯಿತು. ಅದರ ನಂತರ ಅವನು ಕಿಟಕಿಯ ಪಕ್ಕ ತನ್ನನ್ನು ಸ್ಥಳಾಂತರಿಸಲು ಕೇಳಿಕೊಂಡ. ಆಸ್ಪತ್ರೆಯವರೂ ಅವನ ಕೋರಿಕೆಯನ್ನು ಮನ್ನಿಸಿ ಅವನನ್ನು ಕಿಟಕಿಯ ಪಕ್ಕದ ಹಾಸಿಗೆಗೆ ಸ್ಥಳಾಂತರಿಸಿದರು. ಅವನನ್ನು ಅಲ್ಲಿಗೆ ಸ್ಥಳಾಂತರಿಸಿದ ಬಳಿಕ ಅವನೂ ಆಸೆಯಿಂದ ಕಿಟಕಿಯಿಂದ ಹೊರಗೆ ನೋಡಿದ. ಆದರೆ ಅಲ್ಲಿ ನಿರಾಶೆ ಅವನಿಗಾಗಿ ಕಾದಿತ್ತು! ಹೊರಗೆ ಯಾವ ಉದ್ಯಾನವನವೂ ಇರಲಿಲ್ಲ, ರಸ್ತೆಯೂ ಇರಲಿಲ್ಲ. ಸತ್ತು ಹೋದ ವ್ಯಕ್ತಿ ವಿವರಿಸಿದಂತೆ ಅಲ್ಲಿ ಏನೂ ಕಾಣುತ್ತಿರಲಿಲ್ಲ. ಕಿಟಕಿಯ ಬದಿಯಲ್ಲಿ ಒಂದು ಕಾಲಿ ಗೋಡೆ ಮಾತ್ರ ಇತ್ತು. ಸತ್ತು ಹೋದ ರೋಗಿ ಇಷ್ಟು ದಿನ ತನಗೆ ಸುಳ್ಳು ಹೇಳಿದ್ದಾನೆಂದು ಬೇಸರಗೊಂಡು ನರ್ಸ್‌ಗೆ ತಿಳಿಸಿದ.

ಅವಳು ನಗುತ್ತಾ ಹೇಳಿದಳು, "ಅವನಿಗೆ ಏನೂ ಕಾಣಿಸಲು ಸಾಧ್ಯವೇ ಇಲ್ಲ. ಏಕೆಂದರೆ ಅವನಿಗೆ ಎರಡೂ ಕಣ್ಣುಗಳಿರಲಿಲ್ಲ." ಅದನ್ನು ಕೇಳಿ ಇವನು ಇನ್ನೂ ಹೆಚ್ಚು ಆಘಾತಕ್ಕೊಳಗಾದ. "ಹಾಗಾದರೆ ಅವನು ಯಾಕೆ ನನಗೆ ಸುಳ್ಳು ಹೇಳಿದ?" ಎಂದು ಇವನು ನರ್ಸ್ ಬಳಿ ಕೇಳಿದ. ಅವಳು ಹೇಳಿದಳು: "ಅವರು ನಿಮಗೆ ಜೀವನದಲ್ಲಿ ಆಸಕ್ತಿ ಮೂಡಿಸಲು, ನಿಮಗೆ ಭರವಸೆ ನೀಡಲು ಮತ್ತು ನಿಮ್ಮಲ್ಲಿ ಉತ್ಸಾಹ ತುಂಬಲು ಹಾಗೆ ಹೇಳಿದರು" ಎಂದು.

ತನ್ನ ಎರಡೂ ಕಣ್ಣುಗಳಲ್ಲಿ ಬೆಳಕು ಇಲ್ಲದಿದ್ದರೂ, ಇನ್ನೊಬ್ಬ ವ್ಯಕ್ತಿಯ ಜೀವನದಲ್ಲಿ ಬೆಳಕನ್ನು ತುಂಬಲು ಅವನಿಂದ ಸಾಧ್ಯವಾಯಿತು!



ಪರ ಊರಿಗೆ ಹೋಗಲು ಒಬ್ಬ ವ್ಯಕ್ತಿ ಬಾಡಿಗೆ ಕಾರನ್ನು ಹತ್ತಿದನು. ಸಾಮಾನ್ಯ ಬಾಡಿಗೆ ಟ್ಯಾಕ್ಸಿಗಳು ಕೊಳಕಾಗಿರುವಂತೆ ಅದು ಕೊಳೆಯಾಗಿರಲಿಲ್ಲ. ಒಳಗಿನ ಆಸನಗಳು ಸ್ವಚ್ಛವಾಗಿದ್ದವು ಕೆಳಗೂ ಕೂಡ ಸ್ವಚ್ಛವಾದ ನೆಲಹಾಸನ್ನು ಹಾಸಲಾಗಿತ್ತು. ಗರಿಗರಿಯಾದ ಬಿಳಿ ಸೂಟ್ ಧರಿಸಿದ್ದ ಚಾಲಕ ನಗುತ್ತಾ ಅವರನ್ನು ಸ್ವಾಗತಿಸಿದ. "ನಾವು ಎಲ್ಲಿಗೆ ಹೋಗಬೇಕು? ಎಷ್ಟು ಗಂಟೆಗೆ ಹಿಂತಿರುಗುತ್ತೇವೆ?" ಆ ರೀತಿಯ ಪ್ರಶ್ನೆಗಳನ್ನು ಕೇಳಿ ಬೇಸರ ಉಂಟು ಮಾಡಲಿಲ್ಲ. ಅನಗತ್ಯ ಮಾತುಗಳೋ, ದೂರುಗಳೋ ಕೂಡ ಇರಲಿಲ್ಲ. ಅವರು ಕೇಳಿದ ಪ್ರಶ್ನೆಗಳಿಗೆ ಎಷ್ಟು ಬೇಕೋ ಅಷ್ಟು ಮಾತ್ರ ಸ್ಪಷ್ಟವಾಗಿ ಉತ್ತರಿಸುತ್ತಿದ್ದ. ಅನಗತ್ಯ ವೇಗ, ಅನಗತ್ಯ ಬ್ರೇಕ್ ಅಥವಾ ರಸ್ತೆಯಲ್ಲಿ ಇತರರ ಮೇಲೆ ಕೂಗಾಡುವುದು ಯಾವುದೂ ಇರಲಿಲ್ಲ

ಇದನ್ನು ನೋಡಿ ಪ್ರಯಾಣಿಕನಿಗೆ ಆಶ್ಚರ್ಯವಾಯಿತು. "ನೀವು ಯಾವಾಗಲೂ ಹೀಗೆಯೇ ಇರುತ್ತೀರಾ?" ಎಂದು ಚಾಲಕನನ್ನು ಕೇಳಿದ. "ಇಲ್ಲ ಸರ್. ಮೊದಲು ನಾನು ಇತರ ಚಾಲಕರಂತೆಯೇ ಇದ್ದೆ. ನನ್ನ ಕೆಲಸವನ್ನು ಗೌರವಿಸುತ್ತಿರಲಿಲ್ಲ, ಪ್ರಯಾಣಿಕರನ್ನೂ ಗೌರವಿಸುತ್ತಿರಲಿಲ್ಲ. ನಾನು ಇತರರ ಮೇಲೆ ಗಲಾಟೆ ಮಾಡುತ್ತಿದ್ದೆ ಮತ್ತು ದೂರುತ್ತಿದ್ದೆ" ಎಂದು ಚಾಲಕ ಹೇಳಿದನು. "ಹಾಗಾದರೆ ನೀವು ನಿಮ್ಮನ್ನು ಹೇಗೆ ಬದಲಾಯಿಸಿಕೊಂಡಿರಿ?" ಎಂದು ಪ್ರಯಾಣಿಕ ಕೇಳಿದ.

'ಒಮ್ಮೆ, ನನ್ನ ಕಾರಿನಲ್ಲಿ ಪ್ರಯಾಣಿಸಿದ ಒಬ್ಬ ಪ್ರಯಾಣಿಕರೊಂದಿಗೆ ಒಂದು ಹೋಟೆಲ್‌ನಲ್ಲಿ ನಡೆದ ಒಂದು ಉಪನ್ಯಾಸಕ್ಕೆ ಹೋದೆ. ಅವರು ಹಿಂದಿರುಗುವ ತನಕ ಕಾರಿನಲ್ಲಿ ಸುಮ್ಮನೆ ಕುಳಿತುಕೊಳ್ಳುವ ಬದಲು, ನಾನೂ ಒಳಗೆ ಹೋಗಿ ನಿಂತಿದ್ದೆ. ಅವರ ಮಾತುಗಳು ನನ್ನನ್ನು ಬದಲಾಯಿಸಿದವು.

'ಬಾತುಕೋಳಿಗಳು ಯಾವಾಗಲೂ ಶಬ್ದ ಮಾಡುತ್ತಲೇ ಇರುತ್ತವೆ. ಅವು ತಮ್ಮ ಜೀವನದ ಬಗ್ಗೆ ಸದಾ ಏನಾದರೂ ದೂರು ಹೇಳುತ್ತಿರುವಂತೆ ಅನ್ನಿಸುತ್ತದೆ. ಆದರೆ ಹದ್ದು ಶಬ್ದ ಮಾಡುವುದನ್ನು ಅನೇಕ ಜನರು ಕೇಳಿಯೇ ಇರಲಾರರು. ಆದರೆ ಅದು ಎಲ್ಲಕ್ಕಿಂತ ಮೇಲೆ ಹಾರುತ್ತದೆ ಮತ್ತು ಸದಾ ತನ್ನ ಗುರಿಯತ್ತ ಗಮನ ಹರಿಸುತ್ತದೆ. ನೀವೂ ಬಾತುಕೋಳಿಯಾಗಬೇಡಿ, ಹದ್ದಾಗಿ ಬದಲಾಗಿ" ಎಂದು ಆ ಉಪನ್ಯಾಸಕರು ವಿವರಿಸಿದರು.

ಆ ದಿನದಿಂದ, ನಾನು ಯಾವುದರ ಬಗ್ಗೆಯೂ ದೂರು ಹೇಳುವುದನ್ನು ಮತ್ತು ಕೊರಗುವುದನ್ನು ನಿಲ್ಲಿಸಿದೆ. ನಾನು ಹದ್ದಿನಂತೆ ಆಗಲು ಮತ್ತು ಮೇಲಕ್ಕೇರಲು ಬಯಸಿದೆ. ನಾನು ಶ್ರದ್ಧೆಯಿಂದಲೂ ಬದ್ಧತೆಯಿಂದಲೂ ಕೆಲಸ ಮಾಡತೊಡಗಿದೆ. ನಾನು ನನ್ನ ವಾಹನದಲ್ಲಿ ಬರುವ ಪ್ರಯಾಣಿಕರನ್ನು ದಯೆ ಮತ್ತು ಸಭ್ಯತೆಯಿಂದ ನಡೆಸಿಕೊಳ್ಳಲು ಪ್ರಾರಂಭಿಸಿದೆ. ಆ ನಂತರ ಪ್ರತಿದಿನವೂ ನನಗೆ ಸಂತೋಷದ ದಿನವೇ. ಇದರಿಂದ ನನ್ನ ಮನಸ್ಸಿಗೆ ಶಾಂತಿ ಸಿಕ್ಕಿತು ಮತ್ತು ನನ್ನ ಆದಾಯವೂ ಹೆಚ್ಚಾಯಿತು. "ಒಮ್ಮೆ ನನ್ನ ವಾಹನದಲ್ಲಿ ಪ್ರಯಾಣಿಸಿದ ಜನರು ನನಗೆ ಪದೇ ಪದೇ ಕರೆ ಮಾಡಲು ಪ್ರಾರಂಭಿಸಿದರು" ಎಂದು ಚಾಲಕ ಹೇಳಿದ.

ಇದು ಎಲ್ಲರಿಗೂ ಹೊಂದುವಂತಹ ಜೀವನ ಶೈಲಿ. ನೀವು ಬಾತುಕೋಳಿಯಾಗಿರುತ್ತೀರೋ ಅಥವಾ ಹದ್ದಾಗುತ್ತೀರೋ? ನಿರ್ಧಾರ ನಿಮ್ಮದು.

ಒಬ್ಬ ವ್ಯಕ್ತಿಗೆ ಐಸ್ ಕ್ರೀವ್ ಎಂದರೆ ತುಂಬಾ ಇಷ್ಟ. ತಿಂಗಳಾಂತ್ಯದ ಬಿಕ್ಕಟ್ಟಿನಲ್ಲಿಯೂ ಸಹ, ಅವನು ಹಣ ಖರ್ಚು ಮಾಡಿ ದುಬಾರಿ ಐಸ್ ಕ್ರೀವ್ ಖರೀದಿಸಿ ತಿನ್ನಲು ಕುಳಿತ. ಅವನು ಒಂದು ಚಮಚ ಐಸ್ ಕ್ರೀಮ್ ತೆಗೆದುಕೊಂಡು ಬಾಯಿಗೆ ಹಾಕಿಕೊಳ್ಳುತ್ತಿದ್ದಂತೆ ಅವನಿಗೆ ಸ್ವಲ್ಪ ತಲೆನೋವು ಕಾಣಿಸಿಕೊಳ್ಳತೊಡಗಿತು.

ಅವನು ಯೋಚಿಸಲು ಪ್ರಾರಂಭಿಸಿದ... 'ನಾನು ನಿನ್ನೆ ರಾತ್ರಿ ಊಟ ಮಾಡಿದ ಹೋಟೆಲ್ ಸ್ವಚ್ಛವಾಗಿರಲಿಲ್ಲ. ಅವರು ಎಲ್ಲಾ ಪಾತ್ರೆಗಳನ್ನೂ ತೆರೆದಿಟ್ಟಿದ್ದರು. ಬಹುಶಃ ಅದರಲ್ಲಿ ಜಿರಲೆ ಅಥವಾ ಬೇರೆ ಯಾವುದಾದರೂ ಕೀಟ ಬಿದ್ದಿರಬಹುದೇ? ನಾನು ಅದನ್ನು ಗಮನಿಸದೆ ತಿಂದೆನಾ? ಇದು ಕೇವಲ ತಲೆನೋವಿನೊಂದಿಗೆ ನಿಲ್ಲುತ್ತದೆಯೇ? ಅಥವಾ ಇನ್ನೂ ಬೇರೆ ಏನಾದರೂ ಆಗುತ್ತದೆಯೇ? ಬಹುಶಃ ನಾನು ಅನಾರೋಗ್ಯಕ್ಕೆ ತುತ್ತಾಗಿ ಹಾಸಿಗೆ ಹಿಡಿಯುಬಹುದೇ?' ಎಂದು ಅವನು ಯೋಚಿಸತೊಡಗಿದ.

ಇಂತಹ ಯೋಚನೆಗಳು ಅವನಿಗೇ ವಿಚಿತ್ರವೆನ್ನಿಸಿತು. ಆದ್ದರಿಂದ ಅವನು ತನ್ನ ಗಮನವನ್ನು ಬೇರೆಡೆ ತಿರುಗಿಸಲು ಪ್ರಯತ್ನಿಸಿದ. ಎದುರಿಗಿದ್ದ ಬಟ್ಟೆ ಅಂಗಡಿಯ ಶೋಕೇಸ್‌ನಲ್ಲಿ ಪ್ರದರ್ಶಿಸಲಾಗಿದ್ದ ಉಡುಪಿನ ಕಡೆ ಅವನು ಆಕರ್ಷಿತನಾದ. ಒಂದು ದೀರ್ಘ ನಿಟ್ಟುಸಿರು ಅವನಿಂದ ಹೊರಬಂತು. 'ಈ ಜನ್ಮದಲ್ಲಿ ಅಂತಹ ಬಟ್ಟೆಗಳನ್ನು ಖರೀದಿಸಿ ಧರಿಸಲು ನನ್ನಿಂದ ಸಾಧ್ಯವೇ? ನನಗೆ ಸಿಗುವ ಸಂಬಳ ನನ್ನ ಅಗತ್ಯ ಖರ್ಚುಗಳನ್ನು ಭರಿಸಲೂ ಸಾಕಾಗುತ್ತಿಲ್ಲ. ತಿಂಗಳ ಅಂತ್ಯ ಬಂದರೆ ನಾನು ಹಣವನ್ನು ಎರವಲು ಪಡೆಯಬೇಕಾಗಿದೆ. ಇದೂ ಒಂದು ಜೀವನವೇ?' ಎನ್ನಿಸಿತು.

ಹೀಗೆ ಅವನ ಯೋಚನೆಗಳು ಎಲ್ಲೆಲ್ಲೋ ಹರಿಯುತ್ತಿದ್ದಂತೆ, ಅವನ ಕೈಯಲ್ಲಿದ್ದ ಐಸ್ ಕ್ರೀವ್ ಸಂಪೂರ್ಣವಾಗಿ ಕರಗಿ ಹೋಗಿತ್ತು. ಅವನು ಅದನ್ನು ಬಹಳ ಆಸೆಯಿಂದ ಖರೀದಿಸಿದರೂ ಅದರ ರುಚಿಯನ್ನು ಸವಿಯಲು ಅವನಿಂದ ಸಾಧ್ಯವಾಗಲಿಲ್ಲ.

ಮಾನವನ ಮನಸ್ಸು ಯಾವಾಗಲೂ ಹಿಂದಿನ ಘಟನೆಗಳು ಮತ್ತು ಭವಿಷ್ಯದ ಘಟನೆಗಳ ಕನಸುಗಳಲ್ಲಿ ಮುಳುಗಿರುತ್ತದೆ. ಇದರಿಂದಾಗಿ ಸಂತೋಷದಿಂದ ಕಳೆಯಬೇಕಾದ 'ಈ ಕ್ಷಣ'ವನ್ನು ಕಳೆದುಕೊಳ್ಳಬೇಕಾಗುತ್ತದೆ. ಮುಗಿದು ಹೋದುದರ ಬಗ್ಗೆ ನೀವು ಯಾವಾಗಲೂ ಯೋಚಿಸಿದರೆ, ಕಳೆದುಕೊಂಡ ಯಾವುದನ್ನೂ ಎಂದಿಗೂ ಮರಳಿ ಪಡೆಯಲು ಸಾಧ್ಯವಾಗುವುದಿಲ್ಲ. ಹಾಗೆಯೇ ಮುಂದೆ ಏನಾಗುವುದೋ ಎಂದು ಚಿಂತಿಸುವ ಅಗತ್ಯವೂ ಇಲ್ಲ. ಈ ಕ್ಷಣ ಸಂಪೂರ್ಣವಾಗಿ ನಿಮಗೆ ಸೇರಿದ್ದು. ಅದನ್ನು ಬುದ್ಧಿವಂತಿಕೆಯಿಂದ ಖರ್ಚು ಮಾಡಿ.



# ಕೆಲಸದಲ್ಲಿ ಬದ್ಧತೆಯನ್ನು ತೋರಿಸಿ!

"ಎಲ್ಲಾ ಆಲೋಚನೆಗಳನ್ನೂ ಒಳ್ಳೆಯ ಕಾರ್ಯಗಳಾಗಿ ಪರಿವರ್ತಿಸಿದಾಗಲೇ ಯಶಸ್ಸು ಸಿದ್ಧಿಸುವುದು" ಎಂದು ವೋಲ್ಟೇರ್ ಹೇಳುತ್ತಾರೆ. ಜೀವನದ ಪ್ರತಿಯೊಂದು ಹಂತದಲ್ಲೂ ಸಕಾರಾತ್ಮಕ ಆಲೋಚನೆಗಳನ್ನು ಬೆಳೆಸಿಕೊಳ್ಳುವುದು ಯಶಸ್ಸಿನ ಹಾದಿಯಾಗಿರುತ್ತದೆ. ಪ್ರತಿಯೊಬ್ಬರಲ್ಲೂ ವಿಶಿಷ್ಟ ಪ್ರತಿಭೆಗಳಿರುತ್ತವೆ. ಅದನ್ನು ಸರಿಯಾಗಿ ಗುರುತಿಸಿ ಜೀವನದಲ್ಲಿ ಕಷ್ಟಪಟ್ಟು ಕೆಲಸ ಮಾಡುವವರು ಅದನ್ನು ಸಾಧಿಸುತ್ತಾರೆ. ಜಗತ್ತು ಅವರನ್ನು ಮೆಚ್ಚಿಕೊಳ್ಳುತ್ತದೆ; ಅವರನ್ನು ಆದರ್ಶಪ್ರಾಯವಾಗಿಯೂ ನೋಡುತ್ತದೆ.

ಅವರು ಸಾಮಾನ್ಯ ರೀತಿಯಲ್ಲೇನೂ ಆ ಯಶಸ್ಸನ್ನು ಸಾಧಿಸಿರುವುದಿಲ್ಲ. ಅವರು ಕಠಿಣ ಪರಿಶ್ರಮ, ಸಮಯ, ತರಬೇತಿ ಮತ್ತು ಪ್ರಯತ್ನದ ಮೂಲಕ ಆ ಎತ್ತರವನ್ನು ತಲುಪಿರುತ್ತಾರೆ. ಅವರು ತಾವು ಮಾಡುವ ಚಟುವಟಿಕೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿರುತ್ತಾರೆ. ಅದು ಅವರನ್ನು ಸರಾಸರಿ ವ್ಯಕ್ತಿಗಿಂತ ಹೆಚ್ಚು ಸಂತೋಷದಿಂದ ಮತ್ತು ಉತ್ಸಾಹದಿಂದ ಬದುಕುವಂತೆ ಮಾಡುತ್ತದೆ. ಕಷ್ಟಪಟ್ಟು ಕೆಲಸ ಮಾಡುವವರ ಜೀವನದಲ್ಲಿ ಈ ಕೆಳಗಿನ ವ್ಯತ್ಯಾಸಗಳು ಖಂಡಿತವಾಗಿಯೂ ಸಂಭವಿಸುತ್ತವೆ:

● ತಾವು ಮಾಡುವ ಕೆಲಸದಲ್ಲಿ ಪೂರ್ಣ ಅರ್ಪಣಾ ಭಾವವನ್ನು ಹೊಂದಿರುವ ಜನರು ರಾತ್ರಿಯಲ್ಲಿ ಚೆನ್ನಾಗಿ ನಿದ್ರಿಸುತ್ತಾರೆ. ಅವರು ತಾವು ಮಾಡುವ ಕೆಲಸದಲ್ಲಿ ಯಾವಾಗಲೂ ತೃಪ್ತರಾಗಿರುವುದರಿಂದ ಅವರಿಗೆ ಆಳವಾದ ನಿದ್ರೆ ಸಾಧ್ಯವಾಗುತ್ತದೆ. ಹಾಗಾಗಿ ಅವರು ಬೆಳಿಗ್ಗೆ ಬೇಗನೆ ಎಚ್ಚರಗೊಳ್ಳುತ್ತಾರೆ. ಇದರಿಂದ ಅವರಿಗೆ ಪ್ರತಿದಿನ ಇತರರಿಗಿಂತ ಹೆಚ್ಚಿನ ಸಮಯ ಸಿಗುತ್ತದೆ. ಅವರು ಎಚ್ಚರವಾದ ಕ್ಷಣದಿಂದಲೇ, ಆ ದಿನದ ಕೆಲಸದ ಬಗ್ಗೆ ಉತ್ಸಾಹದಿಂದ ಯೋಚಿಸಲು ಪ್ರಾರಂಭಿಸುತ್ತಾರೆ. ಅವರು ಮಾಡುವ ಕೆಲಸವು ಅವರಿಗೆ ಪೂರ್ಣ ತೃಪ್ತಿಯನ್ನು ತರದಿದ್ದರೂ, ಭವಿಷ್ಯದಲ್ಲಿ ಅದರಿಂದ ದೊರಕುವ ಪ್ರಯೋಜನಗಳು ಅವರನ್ನು ಪ್ರೇರೇಪಿಸುತ್ತವೆ.

● ಅವರ ಮನಸ್ಸು ಯಾವಾಗಲೂ ತಾವು ಮಾಡುವ ಕೆಲಸದ ಬಗೆಗಿನ ಆಲೋಚನೆಗಳಿಂದಲೇ ತುಂಬಿರುತ್ತವೆ. ಯಾರ ಜೊತೆ ಮಾತನಾಡಿದರೂ, ಕೆಲವೇ ನಿಮಿಷಗಳಲ್ಲಿ ಅವರು ತಮ್ಮ ಕೆಲಸದ ಬಗ್ಗೆ ಮಾತನಾಡಲು ಪ್ರಾರಂಭಿಸುತ್ತಾರೆ. ಕುಟುಂಬ, ಸ್ನೇಹಿತರು ಅಥವಾ ಸಂಬಂಧಿಕರೊಂದಿಗೆ ಇತರ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಾಗಲೂ ಸಹ, ಅವರು ತಮ್ಮ ಕೆಲಸದ ಬಗ್ಗೆಯೇ ಯೋಚಿಸುತ್ತಾರೆ. ಅನೇಕ ಜನರು ತಮ್ಮ ಹವ್ಯಾಸಗಳಲ್ಲಿ ಸಂತೋಷವನ್ನು ಕಂಡುಕೊಂಡರೆ, ಇಂತಹ ಜನರು ಮಾತ್ರ ಕೆಲಸದಲ್ಲೇ ಎಲ್ಲಕ್ಕಿಂತ ಹೆಚ್ಚಿನ ಸಂತೋಷವನ್ನು ಕಂಡುಕೊಳ್ಳುತ್ತಾರೆ.

● ಕೆಲವರು ತಮ್ಮ ಹಳೆಯ ಸ್ನೇಹಿತರನ್ನು ನೋಡಿ ಆಶ್ಚರ್ಯ ಪಡುತ್ತಾರೆ, ಕೆಲವರು ಅನಿರೀಕ್ಷಿತ ಉಡುಗೊರೆಗಳಿಂದ ಆಶ್ಚರ್ಯ ಹೊಂದುತ್ತಾರೆ, ಮತ್ತೆ ಕೆಲವರು ಪ್ರವಾಸಗಳಲ್ಲಿ ಆಶ್ಚರ್ಯ ಕಾಣುತ್ತಾರೆ. ಪ್ರತಿಯೊಬ್ಬರನ್ನೂ ಅಚ್ಚರಿಗೊಳಿಸುವ ವಿಷಯಗಳು ಹೀಗೆ ವಿಭಿನ್ನವಾಗಿರುತ್ತವೆ. ಆದರೆ ಬದ್ಧತೆಯಿಂದ ತಮ್ಮನ್ನು ಕೆಲಸದಲ್ಲಿ ಅರ್ಪಿಸಿಕೊಳ್ಳುವ ಮನೋಭಾವ ಇರುವ ಜನರಿಗೆ, ಅವರ ಕೆಲಸವೇ ಅವರಿಗೆ ಹೆಚ್ಚು ಆಶ್ಚರ್ಯಕರವಾಗಿರುತ್ತದೆ. ಕೆಲಸದಲ್ಲಿ ಸಾಧಿಸುವ ಪ್ರಗತಿ, ಅದರಿಂದ ತಮ್ಮ ಜೀವನದಲ್ಲಿ ಕಾಣುವ ಬದಲಾವಣೆಗಳು ಮತ್ತು ಅವುಗಳ ಪರಿಣಾಮವಾಗಿ ಪಡೆಯುವ ಪ್ರಗತಿ ಅವರನ್ನು ಬೆರಗುಗೊಳಿಸುತ್ತದೆ.

● ಅವರು ತಮ್ಮ ಕೆಲಸವನ್ನೇ ತಮ್ಮ ಜೀವನಕ್ಕೆ ಅರ್ಥ ನೀಡುವ ವಿಷಯವೆಂದು ಭಾವಿಸುತ್ತಾರೆ. ಆ ಕೆಲಸದಲ್ಲಿ ಸಾಧಿಸುವ ಪ್ರಗತಿಯ ಆಧಾರದ ಮೇಲೆ, ತಾವು ಸರಿಯಾದ ಹಾದಿಯಲ್ಲಿ ಸಾಗುತ್ತಿದ್ದೇವೆ ಎಂದು ನಿರ್ಧರಿಸುತ್ತಾರೆ. ಕೆಲಸದಲ್ಲಿ ಸಾಧಿಸುವ ಯಶಸ್ಸು ಅವರಿಗೆ ತೃಪ್ತಿಯನ್ನು ನೀಡುತ್ತದೆ. ಇದು ಭವಿಷ್ಯದ ಬಗ್ಗೆ ಅವರಲ್ಲಿ ಭರವಸೆಯನ್ನು ಹುಟ್ಟು ಹಾಕುತ್ತದೆ.

● ಪ್ರತಿಯೊಬ್ಬರೂ ತಾವು ಹೆಚ್ಚು ಪ್ರೀತಿಸುವ ವಿಷಯಕ್ಕಾಗಿ ಜೀವನದಲ್ಲಿ ದೊಡ್ಡ ಅಪಾಯಗಳನ್ನು ಎದುರಿಸುತ್ತಾರೆ. ತಮ್ಮ ಕೆಲಸದಲ್ಲಿ ಹೆಚ್ಚು ಬದ್ಧತೆಯನ್ನು ಹೊಂದಿರುವ ಜನರು ತಮ್ಮ ಕೆಲಸ ಅಥವಾ ವೃತ್ತಿ ಜೀವನದಲ್ಲಿ ಹೆಚ್ಚು ಅಪಾಯಗಳನ್ನು ತೆಗೆದುಕೊಳ್ಳುತ್ತಾರೆ. ಅವರು ತಮ್ಮ ಕೆಲಸಕ್ಕಾಗಿ ಬೇರೆಲ್ಲವನ್ನೂ ತ್ಯಾಗ ಮಾಡಲು ಸಿದ್ಧವಾಗಿರುತ್ತಾರೆ. ಅದಕ್ಕೆ ಹೋಲಿಸಿದರೆ, ಉಳಿದ ಯಾವುದೂ ಅವರಿಗೆ ಮುಖ್ಯವಾಗಿರುವುದಿಲ್ಲ.

● ನಮ್ಮ ಹಾದಿಯಲ್ಲಿ ಎರಡು ರೀತಿಯ ವಿಷಯಗಳು ನಮಗಾಗಿ ಕಾಯುತ್ತಿರುತ್ತವೆ. ಒಂದು: ಮಾಡಲೇ ಬೇಕಾದ ಮೌಲ್ಯಯುತವಾದ ಕಾರ್ಯಗಳು. ಅವುಗಳನ್ನು ಮಾಡುವುದರಿಂದ ನಾವು ಜೀವನದಲ್ಲಿ ಪ್ರಗತಿ ಹೊಂದುತ್ತೇವೆ. ಎರಡು: ತಪ್ಪಿಸಬೇಕಾದ ನಿಷ್ಪ್ರಯೋಜಕ ಕೆಲಸಗಳು. ಈ ಕೆಲಸಗಳನ್ನು ಮಾಡುವುದರಿಂದ ಆ ಸಮಯದಲ್ಲಿ ಬೇಕಾದರೆ ಸಂತೋಷ ಸಿಗಬಹುದು. ಆದ–






ರೆ ಆ ಕೆಲಸಗಳನ್ನು ಮಾಡುವುದರಿಂದ ನಾವು ಸಮಯ ವ್ಯರ್ಥ ಮಾಡುತ್ತೇವೆ, ಅಷ್ಟೇ. ಬದ್ಧತೆ ಇರುವ ಜನರು ಯಾವಾಗಲೂ ಮೌಲ್ಯಯುತವಾದ ಕೆಲಸಗಳ ಕಡೆ ಮಾತ್ರ ಗಮನ ನೀಡುತ್ತಾರೆ. ಜೀವನದಲ್ಲಿ ಬೇರಾವುದೂ ಅವರಿಗೆ ಮುಖ್ಯವಲ್ಲವೆಂದು ತೋರುತ್ತದೆ. ಆದ್ದರಿಂದ ಅವರು ಅವುಗಳನ್ನು ಎಚ್ಚರಿಕೆಯಿಂದ ತಪ್ಪಿಸುತ್ತಾರೆ.

- ಕಚೇರಿ ಕೆಲಸ ಮತ್ತು ಆ ಕೆಲಸಕ್ಕೆ ಸಂಬಂಧಿಸಿದ ಒತ್ತಡವನ್ನು ಮನೆಯವರೆಗೂ ತರಬೇಡಿ ಎಂದು ಅನೇಕ ಜನರು ಸಲಹೆ ನೀಡುತ್ತಾರೆ. ಆದರೆ, ತಾವು ಮಾಡುವ ಕೆಲಸದಲ್ಲಿ ತಮ್ಮನ್ನು ಸಮರ್ಪಿಸಿಕೊಂಡಿರುವ ಜನರು ಮನೆಗೆ ಬಂದರೂ ಸುಮ್ಮನಿರಲು ಇಷ್ಟಪಡುವುದಿಲ್ಲ. ಅವರು ಮನೆಗೆ ಬಂದ ಮೇಲೂ ಕೆಲಸ ಮಾಡುವುದನ್ನು ಮುಂದುವರೆಸುತ್ತಾರೆ. ಕೆಲಸವೇ ಅವರಿಗೆ ಸರ್ವಸ್ವವಾಗಿರುತ್ತದೆ. ಏಕೆಂದರೆ ಅವರಿಗೆ ಅದು ಕೆಲಸವಲ್ಲ, ಜೀವನ!

- ಕೆಲವರಿಗೆ ಬೇರೆಯವರನ್ನು ಭೇಟಿಯಾದಾಗ ಮಾತನಾಡಲು ಸಾವಿರ ವಿಷಯಗಳು, ಸಾವಿರದೆಂಟು ಸಮಸ್ಯೆಗಳಿರುತ್ತವೆ. ಕೆಲವರು ಸಿನಿಮಾ ಮತ್ತು ರಾಜಕೀಯದ ಬಗ್ಗೆ ಆಸಕ್ತಿದಾಯಕವಾಗಿ ಮಾತನಾಡುತ್ತಾರೆ. ಅವರು ಉಕ್ರೇನ್ ಸಮಸ್ಯೆಗೆ ಅತಿ ಸುಲಭವಾಗಿ ಪರಿಹಾರವನ್ನು ಬೇಕಾದರೂ ತಿಳಿಸುತ್ತಾರೆ. ಆದರೆ, ತಮ್ಮ ಕೆಲಸಕ್ಕೆ ಬದ್ಧರಾಗಿರುವ ಜನರು ಈ ರೀತಿ ಅನವಶ್ಯಕವಾಗಿ ಮಾತನಾಡಲು ಇಷ್ಟಪಡುವುದಿಲ್ಲ. ಅವರು ಪತ್ರಿಕೆಯನ್ನು ಓದಿದರೂ ಸಹ, ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅದರಲ್ಲಿ ಹುಡುಕುತ್ತಾರೆ. ಅವರ ಗಮನ ಮತ್ತು ಮಾತು ಯಾವಾಗಲೂ ಅವರ ಕೆಲಸದ ಮೇಲೆಯೇ ಕೇಂದ್ರೀಕೃತವಾಗಿರುತ್ತದೆ.

- ಅನೇಕ ಜನರು ಯಾವುದೇ ಕೆಲಸ ಮಾಡಲು ಸ್ವತಃ ತಮಗೆ ತಾವೇ ಮಾನಸಿಕವಾಗಿ ಒಂದು ರೀತಿಯ ಅಡಚಣೆಯನ್ನು ಹೊಂದಿರುತ್ತಾರೆ. 'ಇದು ನನ್ನ ಮಿತಿ. ನನ್ನಿಂದ ಇಷ್ಟು ಮಾತ್ರವೇ ಮಾಡಲು ಸಾಧ್ಯ. ಇದನ್ನು ಮೀರಿ ನನ್ನಿಂದ ಬೇರೇನನ್ನೂ ಮಾಡಲು ಸಾಧ್ಯವಿಲ್ಲ' ಎಂದು ಅವರು ದೃಢವಾಗಿ ನಂಬುತ್ತಾರೆ. ಈ ಮಾನಸಿಕ ತಡೆಗೋಡೆಯೇ ಅನೇಕ ಕ್ರೀಡಾಪಟುಗಳು ಪ್ರಯತ್ನ ಮಾಡಿಯೂ ವಿಫಲರಾಗಲು ಕಾರಣ. 'ನನ್ನಿಂದ 100 ರನ್ ಕೂಡ ಗಳಿಸಲು ಸಾಧ್ಯವಿಲ್ಲ. ಅಷ್ಟರೊಳಗೆ ನಾನು ಔಟ್ ಆಗಿರುತ್ತೇನೆ' ಎಂದು ಭಯಪಡುವ ಕ್ರಿಕೆಟಿಗ ಖಂಡಿತವಾಗಿಯೂ ಔಟ್ ಆಗುತ್ತಾನೆ. "ನಾನು ಈಟಿಯನ್ನು ಇದಕ್ಕಿಂತ ಹೆಚ್ಚು ದೂರ ಎಸೆಯಲು ಸಾಧ್ಯವಿಲ್ಲ" ಎಂದು ಭಾವಿಸುವ ಆಟಗಾರ ಖಂಡಿತವಾಗಿಯೂ ಅದನ್ನು ಎಂದಿಗೂ ಹೆಚ್ಚು ದೂರ ಎಸೆಯಲು ಸಾಧ್ಯವಾಗುವುದಿಲ್ಲ. 'ಮಧ್ಯದಲ್ಲಿರುವ ಗುರಿಯತ್ತ ನಾನು ಗುಂಡು ಹಾರಿಸುವುದು ಅನುಮಾನಾಸ್ಪದ' ಎಂದು ನಂಬುವ ಶೂಟರ್ ಕೂಡ ಗೆಲ್ಲಲು ಸಾಧ್ಯವಾಗುವುದಿಲ್ಲ. ಆದರೆ, ಅರ್ಪಣಾ ಭಾವದಿಂದ ಇದರಲ್ಲಿ ತೊಡಗಿಕೊಳ್ಳುವ ಜನರಿಗೆ ಇಂತಹ ಮಾನಸಿಕ ಅಡೆತಡೆಗಳು ಇರುವುದಿಲ್ಲ. ಅವರು ಎಲ್ಲ ಮಿತಿಗಳನ್ನೂ ಮೀರಿ ಸಾಧಿಸುತ್ತಾರೆ.

- ಅರ್ಪಣಾ ಭಾವದಿಂದ ಕೆಲಸದಲ್ಲಿ ತೊಡಗುವ ಜನರು ಯಾವಾಗಲೂ ಭವಿಷ್ಯದ ಬಗ್ಗೆ ಸಕಾರಾತ್ಮಕವಾಗಿ ಯೋಚಿಸುತ್ತಾರೆ. ಅವರ ಪ್ರಸ್ತುತ ಪರಿಸ್ಥಿತಿ ಹೇಗೇ ಇರಲಿ, ಅವರು ಯಾವಾಗಲೂ 'ಮುಂದೇನು' ಎಂಬ ನಿರೀಕ್ಷೆಯನ್ನು ಹೊಂದಿರುತ್ತಾರೆ. ಅದನ್ನು ಸಾಧಿಸುವ ಯೋಜನೆಗಳು ಅವರ ಮನಸ್ಸಿನಲ್ಲಿ ಸ್ಪಷ್ಟವಾಗಿರುತ್ತವೆ. ಆದ್ದರಿಂದ, ಅವರು ಅನಿರೀಕ್ಷಿತ ಬಿಕ್ಕಟ್ಟುಗಳಲ್ಲಿ ಸಿಲುಕಿಕೊಳ್ಳುವುದಿಲ್ಲ.



## ಜೆಫ್ ಬೆಜೋಸ್!

ಪ್ರಪಂಚದಾದ್ಯಂತ ಹೆಚ್ಚಿನ ಮನೆಗಳನ್ನು ತಲುಪಿರುವ ನವೀನ ಈ–ಕಾಮರ್ಸ್ ಕಂಪೆನಿಯಾದ 'ಅಮೆಜಾನ್'ನ ಸಂಸ್ಥಾಪಕ ಜೆಫ್ ಬೆಜೋಸ್. ಅವರು ಸಂಪೂರ್ಣ ಬದ್ಧತೆಯಿಂದ ತೊಡಗಿಸಿಕೊಳ್ಳುವುದರ ಮೂಲಕ ಏನನ್ನಾದರೂ ಮಾಡಿ ಯಶಸ್ಸನ್ನು ಸಾಧಿಸುವ 10 ರಹಸ್ಯಗಳನ್ನು ಹಂಚಿಕೊಳ್ಳುತ್ತಾರೆ:

1. ಯಾವುದೇ ಪರಿಸ್ಥಿತಿಯಲ್ಲೂ ಹಿಂಜರಿಕೆಯಿಲ್ಲದೆ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳಿ.
2. ಗೆಲ್ಲುವ ಬಯಕೆ ನಿಮ್ಮಲ್ಲಿರಬೇಕು. ಅದಕ್ಕಾಗಿ, ವೇಗ ಮತ್ತು ಆಕ್ರಮಣ ಶೀಲತೆಯಿಂದ ವರ್ತಿಸಿ.
3. ನೀವು ಯಾವುದೇ ಕ್ಷೇತ್ರದಲ್ಲಿದ್ದರೂ ಮೊದಲು ನಿಮ್ಮ ಸುತ್ತಮುತ್ತಲಿನವರ ಗೌರವವನ್ನು ಗಳಿಸಿ.
4. ಸೋಮಾರಿತನ ಮತ್ತು ಹಿಂಜರಿಕೆ ವಿಜೇತರ ಲಕ್ಷಣಗಳಲ್ಲ. ಯಾವಾಗಲೂ ಚಟುವಟಿಕೆಯಿಂದ ವರ್ತಿಸಿ.
5. ಜೀವನದ ನೈಸರ್ಗಿಕ ಆನಂದಗಳನ್ನು ಕಳೆದುಕೊಳ್ಳುವಷ್ಟು ಕೆಲಸದಲ್ಲಿ ಮುಳುಗಬೇಡಿ. ನಂತರ, ನೀವು ಕೆಲಸ ಮಾಡಲು ಪ್ರೇರಣೆ ಕಳೆದುಕೊಳ್ಳುತ್ತೀರಿ.
6. ಕೇವಲ ಆಲೋಚನೆಗಳಿದ್ದರೆ ನೀವು ಎಲ್ಲಿಗೂ ಹೋಗಲು ಸಾಧ್ಯವಿಲ್ಲ. ನಿಮ್ಮ ಆಲೋಚನೆಗಳನ್ನು ಕಾರ್ಯರೂಪಕ್ಕೆ ತಿರುಗಿಸಿ.
7. ನಿಮ್ಮ ಕ್ಷೇತ್ರದಲ್ಲಿ ಯಾರನ್ನಾದರೂ ಮಾದರಿಯಾಗಿ ಭಾವಿಸಿ. ಅವರಂತೆ ಆಗಲು ನಿಮ್ಮಲ್ಲೂ ಆಸಕ್ತಿ ಮೂಡುತ್ತದೆ.
8. ನಿಮ್ಮ ಕೆಲಸ ಅಥವಾ ವೃತ್ತಿಯನ್ನು ನೀವು ಹೆಚ್ಚು ಇಷ್ಟಪಡುವ ಕೆಲಸವನ್ನಾಗಿ ಮಾಡಿಕೊಳ್ಳಿ. ಆಗ ಮನಸ್ಸಿನಲ್ಲಿ ಅನಗತ್ಯ ಆಲೋಚನೆಗಳು ಉದ್ಭವಿಸುವುದಿಲ್ಲ.
9. ಯಾರೂ ಯಾವುದೇ ಕೆಲಸವನ್ನು ಒಬ್ಬಂಟಿಯಾಗಿ ಮಾಡಲು ಸಾಧ್ಯವಿಲ್ಲ. ನೀವು ಈಗಿರುವ ಗುಂಪಿನೊಂದಿಗೆ ಆಪ್ತವಾಗಿರಿ.
10. ನೀವು ಯಾವುದೇ ಯೋಜನೆಯನ್ನು ಮಾಡಿದರೂ, ಅದು ದೀರ್ಘಾವಧಿಯದ್ದಾಗಿರಲಿ!

## ಜ್ಯಾಕ್ ಮಾ!

ಜ್ಯಾಕ್ ಮಾ, ಚೀನಾದ ಪ್ರಸಿದ್ಧ ಉದ್ಯಮಿ. ಯಾವುದೇ ಕೆಲಸವನ್ನಾಗಲೀ ಸಮರ್ಪಣಾ ಭಾವದಿಂದ ಮಾಡುವ ಮೂಲಕ ಯಶಸ್ಸನ್ನು ಸಾಧಿಸಲು ಅವರು 10 ಮಂತ್ರಗಳನ್ನು ಹೇಳುತ್ತಾರೆ:

1. ನೀವೇ ಎಲ್ಲಾ ತಪ್ಪುಗಳನ್ನೂ ಮಾಡುವ ಮೂಲಕವೇ ಎಲ್ಲವನ್ನೂ ನೀವು ಕಲಿಯಲು ಸಾಧ್ಯವಿಲ್ಲ, ಇತರರ ತಪ್ಪುಗಳಿಂದಲೂ ನಾವು ಕಲಿಯಬಹುದು.
2. ನೀವು ಏನೇ ಮಾಡಿದರೂ, ಸಂಖ್ಯೆಗಿಂತಲೂ ಗುಣಮಟ್ಟದ ಮೇಲೆ ಗಮನ ಹರಿಸಿ. ಒಮ್ಮೆ ನೀವು ಅದನ್ನು ರೂಢಿಸಿಕೊಂಡರೆ, ನೀವು ಇಷ್ಟಪಟ್ಟ ಸಂಖ್ಯೆಯಲ್ಲೂ ಉತ್ತಮ ಗುಣಮಟ್ಟದೊಂದಿಗೆ ಅದನ್ನು ಮಾಡಲು ಸಾಧ್ಯವಾಗುತ್ತದೆ.
3. ಏನನ್ನಾದರೂ ಸರಿ, ಹಿಂಜರಿಕೆಯಿಲ್ಲದೆ ಪ್ರಯತ್ನಿಸುವವರಲ್ಲಿ ನೀವು ಯಾವಾಗಲೂ ಮೊದಲಿಗರಾಗಿರಿ.
4. ಭವಿಷ್ಯಕ್ಕಾಗಿ ಈಗಲೇ ಯೋಜನೆ ಮಾಡಿ. ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ, ಏನು ಬೇಕಾದರೂ ಬಳಕೆಯಿಂದ ದೂರವಾಗಬಹುದು.
5. ನಿಮ್ಮ ಪ್ರತಿಸ್ಪರ್ಧಿಗಳನ್ನು ಗೌರವದಿಂದ ನಡೆಸಿಕೊಳ್ಳಿ. ಅವರನ್ನು ಸೋಲಿಸುವ ದಾರಿ ನಿಮಗೆ ಕಾಣಿಸುತ್ತದೆ.
6. ಯಾವುದೇ ಸವಾಲನ್ನಾಗಲೀ ಅದು ನಿಮಗೆ ದೊರೆತಿರುವ ಹೊಸ ಅವಕಾಶವೆಂದು ಭಾವಿಸಿ.
7. ಬೇರೆ ಯಾರೂ ನಿಮ್ಮನ್ನು ನಂಬದಿದ್ದರೂ ನಿಮ್ಮ ಮೇಲೆ ನೀವು ನಂಬಿಕೆ ಇಡಿ.
8. ನಿಮ್ಮ ಸುತ್ತಲೂ ಯಾವಾಗಲೂ ಅಮೂಲ್ಯ ಜನರು, ಅಮೂಲ್ಯ ವಸ್ತುಗಳು ಮತ್ತು ಅಮೂಲ್ಯವಾದ ಆಲೋಚನೆಗಳು ಸುತ್ತುವರೆದಿರಲಿ.
9. ಆರೋಗ್ಯ ತುಂಬಾ ಮುಖ್ಯ. ನೀವು ಎಷ್ಟೇ ಕೆಲಸ ಮಾಡಿದರೂ, ನಿಮ್ಮ ಆರೋಗ್ಯದ ಬಗ್ಗೆ ಗಮನ ಹರಿಸುವುದನ್ನು ಮರೆಯಬೇಡಿ.
10. ಕೆಲಸಗಳ ನಡುವೆ ರಿಲ್ಯಾಕ್ಸ್ ಇರಲಿ. ಇದಕ್ಕೆ ನಿಮ್ಮ ಹವ್ಯಾಸಗಳು ಮತ್ತು ನಿಮ್ಮೊಂದಿಗೆ ಸಮಯ ಕಳೆಯುವ ಸ್ನೇಹಿತರು ಕೂಡ ಮುಖ್ಯವಾಗುತ್ತಾರೆ.






## ಎಲಾನ್ ಮಸ್ಕ್!

"ನೀವು ಸಮರ್ಪಣಾ ಭಾವ ಮತ್ತು ಬದ್ಧತೆಯಿಂದ ಕೆಲಸದಲ್ಲಿ ತೊಡಗಿದರೆ, ನೀವು ಯಾವುದೇ ಕ್ಷೇತ್ರದಲ್ಲೂ ಯಶಸ್ವಿಯಾಗಬಹುದು" ಎಂದು ಎಲಾನ್ ಮಸ್ಕ್ ಹೇಳುತ್ತಾರೆ. ಇದಕ್ಕಾಗಿ ಅವರು ತಿಳಿಸುವ ಹತ್ತು ಸೂತ್ರಗಳು ಇದೋ ಇಲ್ಲಿವೆ:

1. ವೈಫಲ್ಯಗಳಿಂದ ನಿರುತ್ಸಾಹಗೊಳ್ಳಬೇಡಿ. ಹೊಸದನ್ನು ಪ್ರಯತ್ನಿಸುವವರು ಮಾತ್ರ ವೈಫಲ್ಯವನ್ನು ಎದುರಿಸುತ್ತಾರೆ. ಎಂದಿಗೂ ಪ್ರಯತ್ನಿಸದವರಿಗೆ ವೈಫಲ್ಯಗಳು ಬರುವುದಿಲ್ಲ.
2. ನೀವು ಈಗ ಮಾಡುತ್ತಿರುವುದಕ್ಕಿಂತ ಉತ್ತಮವಾಗಿ ಏನನ್ನಾದರೂ ಹೇಗೆ ಮಾಡಬಹುದು ಎಂಬುದರ ಕುರಿತು ಯಾವಾಗಲೂ ಯೋಚಿಸಿ.
3. ದೊಡ್ಡ ಕನಸು ಕಾಣುವವರು ದೊಡ್ಡ ಕೆಲಸಗಳನ್ನು ಮಾಡುತ್ತಾರೆ.
4. "ನನ್ನಿಂದ ಇದನ್ನು ಮಾತ್ರವೇ ಮಾಡಲು ಸಾಧ್ಯ" ಎಂದುಕೊಳ್ಳುವ ಮೂಲಕ ನಿಮ್ಮನ್ನು ನೀವೇ ಕಡಿಮೆ ಅಂದಾಜು ಮಾಡಿಕೊಳ್ಳಬೇಡಿ. ನೀವು ಯೋಚಿಸುವುದಕ್ಕಿಂತಲೂ ಹೆಚ್ಚಿನದನ್ನು ನೀವು ಕಲಿಯಬಹುದು ಮತ್ತು ಮಾಡಬಹುದು.
5. ನೀವು ನಿರಂತರ ಪ್ರಯತ್ನ ಮಾಡಿದರೆ ಬೇಗನೆ ಗೆಲ್ಲಬಹುದು.
6. ಹೊಸ ಸ್ಥಳಗಳು ಮತ್ತು ಹೊಸ ಪರಿಸರಗಳ ಬಗ್ಗೆ ಭಯಪಡಬೇಡಿ. ಅಲ್ಲಿಯೇ ಹೊಸ ಅವಕಾಶಗಳು ಕಾಣಿಸಬಹುದು.
7. ನಿಮಗೆ ಯಾವುದರಲ್ಲಿ ಆಸಕ್ತಿ ಮತ್ತು ಸಾಮರ್ಥ್ಯವಿದೆಯೋ ಆ ಕೆಲಸವನ್ನೇ ಮಾಡಿ.
8. ಯಾರ ಮೇಲಿನ ಕೋಪವನ್ನೂ ದೀರ್ಘ ಕಾಲ ಇಟ್ಟುಕೊಳ್ಳಬೇಡಿ. ಸೇಡಿನ ಭಾವನೆಯು ನಿಮ್ಮನ್ನು ನಾಶ ಮಾಡುತ್ತದೆ.
9. ಸಾಮಾನ್ಯ ಜನರು ಅಸಾಧಾರಣ ಕೆಲಸಗಳನ್ನು ಮಾಡಲು ಸಮರ್ಥರಾಗಿರುತ್ತಾರೆ. ಆದುದರಿಂದ ನಿಮ್ಮನ್ನಾಗಲೀ ಅಥವಾ ಬೇರೆಯವರನ್ನಾಗಲೀ ಕಡಿಮೆ ಅಂದಾಜು ಮಾಡಬೇಡಿ.
10. ನಿಮ್ಮನ್ನು ಪ್ರೋತ್ಸಾಹಿಸಲು ಯಾರೂ ಇಲ್ಲದಿದ್ದರೂ, ನಿಮ್ಮನ್ನು ನೀವೇ ಪ್ರೋತ್ಸಾಹಿಸಿಕೊಳ್ಳಿ.

## ಸ್ಟೀವ್ ಜಾಬ್ಸ್!



ಯಾವುದೇ ಕೆಲಸ, ವೃತ್ತಿ ಅಥವಾ ವ್ಯವಹಾರದಲ್ಲಿ ಯಶಸ್ಸನ್ನು ಸಾಧಿಸಲು ಸ್ಟೀವ್ ಜಾಬ್ಸ್ ಅವರು ನೀಡುವ 10 ಸೂಚನೆಗಳು ಇವು:

1. ಎಲ್ಲರಂತೆ ಸರಾಸರಿ ಜೀವನ ನಡೆಸುವುದರಲ್ಲೇ ತೃಪ್ತರಾಗಬೇಡಿ.
2. ನೀವು ಯಾವುದೇ ಕ್ಷೇತ್ರದಲ್ಲಿದ್ದರೂ, ಅದನ್ನು ಮಿತಿ ಮೀರಿ ಪ್ರೀತಿಸಿ.
3. ಇತರರಂತೆ ಕೆಲಸ ಮಾಡಬೇಡಿ, ನಿಮ್ಮದೇ ಆದ ವಿಶಿಷ್ಟತೆಯನ್ನು ಸೃಷ್ಟಿಸಿಕೊಳ್ಳಿ.
4. ನಿಮಗೆ ಸಹಾಯ ಬೇಕಾದರೆ, ಸರಿಯಾದ ಜನರನ್ನು ಕೇಳಲು ಹಿಂಜರಿಯಬೇಡಿ.
5. ಹಣಕ್ಕಾಗಿ ಏನನ್ನಾದರೂ ಮಾಡಬೇಡಿ. ನೀವು ಯಾವುದೇ ಕೆಲಸವನ್ನಾದರೂ ಪ್ರೀತಿಸಿ ಆನಂದದಿಂದ ಮಾಡಿದರೆ, ಪರಿಣಾಮವಾಗಿ ನಿಮಗೆ ಅಪಾರ ಹಣ ಸಿಗುತ್ತದೆ.
6. ನೀವು ಮಾಡುವ ಕೆಲಸದಲ್ಲಿ ಹೆಮ್ಮೆ ಪಡಿರಿ.
7. ನೀವು ಒಂದು ಉತ್ಪನ್ನವನ್ನು ತಯಾರಿಸುತ್ತಿದ್ದರೆ, ಅದನ್ನು ಉತ್ತಮ ಗುಣಮಟ್ಟದ್ದಾಗಿ ರೂಪಿಸಿ. ನೀವು ಕೆಲಸ ಮಾಡುತ್ತಿದ್ದರೆ ಅದರ ಫಲಿತಾಂಶಗಳು ಅತ್ಯುತ್ತಮವಾಗಿರಬೇಕು.
8. ನಿಮ್ಮ ಗ್ರಾಹಕರನ್ನು ಮತ್ತು ನಿಮ್ಮನ್ನು ಕೆಲಸಕ್ಕೆ ನೇಮಿಸಿಕೊಳ್ಳುವವರನ್ನು ಗೌರವಿಸಿ ಮತ್ತು ಪ್ರಶಂಸಿಸಿ.
9. ನೀವು ಸೃಷ್ಟಿಸುವ ಯಾವುದೇ ವಸ್ತುವೂ ಮೌಲ್ಯಯುತವಾಗಿದ್ದರೆ, ಅದರ ಮೌಲ್ಯವು ನಿಮ್ಮನ್ನು ಉನ್ನತೀಕರಿಸುತ್ತದೆ.
10. ಹಸಿವಿನಿಂದ ಇರಿ, ಅರಿವು ಇಲ್ಲದವರಾಗಿರಿ, ಎಲ್ಲವೂ ತಾನಾಗಿಯೇ ನಿಮ್ಮೆಡೆಗೆ ಬರುತ್ತವೆ.

# ಬದ್ಧತೆಯೊಂದೇ ಯಶಸ್ಸಿನ ಪರಮ ರಹಸ್ಯ

‘ನೀವು ಬದ್ಧತೆಯಿಂದ ಮತ್ತು ಪೂರ್ಣ ಅರ್ಪಣಾ ಮನೋಭಾವದಿಂದ ಮಾಡದ ಯಾವುದರಲ್ಲೂ ಯಶಸ್ವಿಯಾಗಲು ಸಾಧ್ಯವಿಲ್ಲ. ಸಂಪೂರ್ಣ ಬದ್ಧತೆಯಿಂದ ಏನನ್ನಾದರೂ ಮಾಡಿದರೆ ಅದರಲ್ಲಿ ಯಾವುದೇ ವೈಫಲ್ಯವಿರುವುದಿಲ್ಲ’. ಇದು ನಮ್ಮೆಲ್ಲರ ಪ್ರೀತಿಯ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರ ಪ್ರಸಿದ್ಧ ವಾಕ್ಯ!

ಆ ಒಳಗೊಳ್ಳುವಿಕೆ ಎಷ್ಟಿರಬೇಕು? ಅದಕ್ಕಾಗಿ ಇಲ್ಲಿ ಒಂದು ಕಥೆ ಇದೆ: ಒಂದು ದೇಶದ ರಾಜನೊಬ್ಬ ತನ್ನ ಅರಮನೆಯಲ್ಲಿ ಹುಂಜದ ಅತ್ಯುತ್ತಮ ಚಿತ್ರವೊಂದನ್ನು ಬಿಡಿಸಲು ಬಯಸಿದ. ವಿಶ್ವದ ಅತ್ಯಂತ ಸುಂದರವಾದ ಹುಂಜದ ಚಿತ್ರವನ್ನು ಬಿಡಿಸುವ ವ್ಯಕ್ತಿಗೆ ಬಹುಮಾನ ನೀಡುವುದಾಗಿ ಅವನು ಘೋಷಿಸಿದ. ಆ ದೇಶದ ಅನೇಕ ಕಲಾವಿದರು ತಾವು ರಚಿಸಿದ ವರ್ಣಚಿತ್ರಗಳೊಂದಿಗೆ ಅರಮನೆಗೆ ಬಂದರು. ರಾಜನಿಗೆ ಅವುಗಳಲ್ಲಿ ಯಾವುದರಿಂದಲೂ ಸಂಪೂರ್ಣವಾಗಿ ತೃಪ್ತಿಯಾಗಲಿಲ್ಲ.



ವಿದೇಶಿ ಕಲಾವಿದರು ಸಹ ಹುಂಜದ ಚಿತ್ರಗಳನ್ನು ರಚಿಸಿ ಕಳಿಸಬಹುದು ಎಂದು ರಾಜ ಅನೇಕ ದೇಶಗಳಿಗೆ ಸಂದೇಶ ಕಳುಹಿಸಿದ. ಅನೇಕ ದೇಶಗಳಿಂದ ಬಂದ ಎಲ್ಲಾ ವರ್ಣಚಿತ್ರಗಳನ್ನೂ ರಾಜನ ಮುಂದೆ ತಂದಿಡಲಾಯಿತು. ಇಂತಹ ನೂರಾರು ವರ್ಣಚಿತ್ರಗಳನ್ನು ನೋಡಿದಾಗ ಅವನಿಗೆ ಗೊಂದಲವಾಯಿತು. ತಾನು ಚಿಕ್ಕವನಿದ್ದಾಗ ಚಿತ್ರ ಬಿಡಿಸಲು ಕಲಿಸಿದ ಕಲಾ ಶಿಕ್ಷಕರನ್ನೇ ನ್ಯಾಯಾಧೀಶನನ್ನಾಗಿ ನೇಮಿಸಿ, ಅವರನ್ನೇ ಉತ್ತಮ ಚಿತ್ರವೊಂದನ್ನು ಆಯ್ಕೆ ಮಾಡಲು ಕೇಳಿಕೊಂಡ.

ಎಲ್ಲಾ ವರ್ಣಚಿತ್ರಗಳನ್ನೂ ನೋಡಿದ ಆ ಕಲಾ ಶಿಕ್ಷಕರು ತಮ್ಮ ತುಟಿಗಳನ್ನು ಬಿಗಿದುಕೊಂಡು, "ಈ ವರ್ಣಚಿತ್ರಗಳಲ್ಲಿ ಯಾವುದೂ ಯೋಗ್ಯವಾಗಿಲ್ಲ" ಎಂದು ಹೇಳಿದರು. ವಿದೇಶದಿಂದ ತಮ್ಮ ವರ್ಣಚಿತ್ರಗಳೊಂದಿಗೆ ಬಂದ ಕೆಲವು ಕಲಾವಿದರು ಇದನ್ನು ಕೇಳಿ ಕೋಪಗೊಂಡರು. "ನೀವು ಹಾಗೆ ಹೇಳಲು ಕಾರಣವೇನು?" ಎಂದು ಅವರು ಕೇಳಿದರು.

"ಈ ಎಲ್ಲಾ ವರ್ಣಚಿತ್ರಗಳನ್ನೂ ಒಂದು ಕೋಣೆಯಲ್ಲಿ ಇಟ್ಟು ಹೋರಾಟದ ಹುಂಜಗಳನ್ನು ಒಳಗೆ ಬಿಡುತ್ತೇವೆ. ಸಾಮಾನ್ಯವಾಗಿ, ಹುಂಜಗಳು ಮತ್ತೊಂದು ಹುಂಜವನ್ನು ನೋಡಿದಾಗ ಹೋರಾಡುತ್ತವೆ. ಇಲ್ಲಿರುವ ಯಾವುದಾದರೂ ವರ್ಣಚಿತ್ರವನ್ನು ನೋಡಿದಾಗ ಹುಂಜಗಳು ಅದರ ಜೊತೆ ಹೋರಾಡಲು ಹೋದರೆ, ಆ ಚಿತ್ರಕಲೆಯೇ ಅತ್ಯುತ್ತಮ ಚಿತ್ರಕಲೆ ಎಂದು ನಾವು ನಿರ್ಧರಿಸುತ್ತೇವೆ" ಎಂದು ಕಲಾ ಶಿಕ್ಷಕರು ಶಾಂತವಾಗಿ ಹೇಳಿದರು.

ಇದಕ್ಕೆ ರಾಜನೂ ಒಪ್ಪಿದ. ಅರಮನೆಯ ಒಂದು ಭವ್ಯ ಕೋಣೆಯಲ್ಲಿ ವರ್ಣಚಿತ್ರಗಳನ್ನು ಜೋಡಿಸಲಾಗಿತ್ತು. ಆ ಕೋಣೆಗೆ ಅನೇಕ ಕಾಳಗದ ಹುಂಜಗಳನ್ನು ತರುವಂತೆ ರಾಜ ಆದೇಶಿಸಿದ. ಅಲ್ಲಿಗೆ ಬಂದ ಹುಂಜಗಳು ಯಾವುದೇ ವರ್ಣಚಿತ್ರವನ್ನು ನೋಡಿ ಅದರ ಬಳಿ ಜಗಳವಾಡಲು ಹೋಗಲಿಲ್ಲ. ಶಾಂತಿಯುತವಾಗಿ ಎಲ್ಲವೂ ಸುಮ್ಮನೇ ಹೊರಗೆ ಹೋದವು.

ನೆರೆಯ ದೇಶಗಳ ಆ ವರ್ಣಚಿತ್ರಕಾರರು, "ನೀವು ನಮ್ಮ ವರ್ಣಚಿತ್ರಗಳನ್ನೆಲ್ಲ ತಿರಸ್ಕರಿಸುತ್ತಿದ್ದೀರಿ... ಕೋಳಿ ಕಾಳಗವನ್ನು ಪ್ರಚೋದಿಸುವಂತಹ ಒಂದು ವರ್ಣಚಿತ್ರವನ್ನು ನೀವೇ ಏಕೆ ಚಿತ್ರಿಸಬಾರದು?" ಎಂದು ಅವರು ಆ ಶಿಕ್ಷಕರಿಗೇ ಸವಾಲು ಹಾಕಿದರು. ಇದು ತನ್ನ ದೇಶಕ್ಕೇ ಹಾಕುತ್ತಿರುವ ಸವಾಲು ಎಂಬುದು ರಾಜನಿಗೆ ಅರ್ಥವಾಯಿತು. ಅವನು ತನ್ನ ಶಿಕ್ಷಕರ ಬಳಿ, ಅವರೇ ಅಂತಹ ಒಂದು ಚಿತ್ರ ಬಿಡಿಸುವಂತೆ ಹೇಳಿದ.

"ಸರಿ, ನಾನು ಆ ಚಿತ್ರ ಬಿಡಿಸುತ್ತೇನೆ, ನನಗೆ ಆರು ತಿಂಗಳು ಸಮಯ ಬೇಕು" ಎಂದರು ಆ ಕಲಾ ಶಿಕ್ಷಕರು. ರಾಜ ತಕ್ಷಣ, "ಈ ಸ್ಪರ್ಧೆಯು ಮುಂದಿನ ಆರು ತಿಂಗಳಲ್ಲಿ ಇದೇ ಸ್ಥಳದಲ್ಲಿ ನಡೆಯಲಿದೆ" ಎಂದು ಘೋಷಿಸಿದ.



ಆರು ತಿಂಗಳ ನಂತರ, ಎಲ್ಲಾ ವರ್ಣಚಿತ್ರಕಾರರೂ ಮತ್ತೆ ಅದೇ ಕೋಣೆಯಲ್ಲಿ ಒಟ್ಟುಗೂಡಿದರು. ಆ ಚಿತ್ರಕಲಾ ಶಿಕ್ಷಕರೂ ಅಲ್ಲಿಗೆ ಬಂದರು. ಆದರೆ, ಅವರು ತಮ್ಮ ಕೈಯಲ್ಲಿ ಯಾವುದೇ ವರ್ಣಚಿತ್ರವನ್ನು ತಂದಿರಲಿಲ್ಲ. ರಾಜ ಗಾಭರಿಯಿಂದ ಅವರನ್ನು ನೋಡಿದ. "ನಾನು ಕೆಲವು ನಿಮಿಷಗಳಲ್ಲಿ ಇಲ್ಲಿಯೇ ಒಂದು ಚಿತ್ರವನ್ನು ಚಿತ್ರಿಸುತ್ತೇನೆ" ಎಂದು ಅವರು ಹೇಳಿ, ಬೇಗ ಬೇಗ ಬಣ್ಣಗಳನ್ನು ತೆಗೆದು ಒಂದು ಹುಂಜದ ಚಿತ್ರವನ್ನು ಚಿತ್ರಿಸಿದರು. ಆ ಚಿತ್ರವನ್ನು ಇತರ ಚಿತ್ರಗಳ ಜೊತೆಯಲ್ಲಿ ಇರಿಸಲಾಯಿತು. ನಂತರ ಕಾಳಗದ ಹುಂಜಗಳನ್ನು ಆ ಕೋಣೆಯೊಳಗೆ ಬಿಡಲಾಯಿತು. ಅವರು ರಚಿಸಿದ್ದ ವರ್ಣ ಚಿತ್ರದಲ್ಲಿದ್ದ ಹುಂಜದ ಮೇಲೆ ಅನೇಕ ಕೋಳಿಗಳು ಹಾರಿ ಹೋರಾಡಲು ನೋಡಿದವು, ಅದನ್ನು ನಿಜವಾದ ಕೋಳಿ ಎಂದೇ ಅವೆಲ್ಲವೂ ಭಾವಿಸಿದವು.

ದೇಶದೇಶಗಳಿಂದ ಬಂದಿದ್ದ ವರ್ಣಚಿತ್ರಕಾರರೆಲ್ಲರೂ ಆಗ ಅವರ ಚಿತ್ರದ ಮಹತ್ವವನ್ನು ಅರ್ಥ ಮಾಡಿಕೊಂಡರು ಮತ್ತು ಅವರಲ್ಲಿ ಕ್ಷಮೆ ಯಾಚಿಸಿದರು. ರಾಜನಿಗೆ ಬಹಳ ಸಂತೋಷವಾಯಿತು. ಅವನು ತನ್ನ ಶಿಕ್ಷಕರನ್ನು ಕೇಳಿದ: "ನೀವು ಇದನ್ನು ಹೇಗೆ ಚಿತ್ರಿಸಲು ಸಾಧ್ಯವಾಯಿತು? ಇದಕ್ಕಾಗಿ ಆರು ತಿಂಗಳು ಏಕೆ ತೆಗೆದುಕೊಂಡಿರಿ? ಇಷ್ಟು ಸಮಯ ತೆಗೆದುಕೊಂಡ ನಂತರವೂ, ನೀವು ಏನನ್ನೂ ಮೊದಲೇ ಚಿತ್ರಿಸಿ ತೆಗೆದುಕೊಂಡು ಬರದೆ ಇಲ್ಲಿಗೆ ಬಂದಿದ್ದೀರಿ. ನೀವು ಇದನ್ನು ಆರು ತಿಂಗಳ ಹಿಂದೆಯೇ ಮಾಡಲು ಸಾಧ್ಯವಾಗಲಿಲ್ಲವೇ?" ಎಂದು ನಾನಾ ಪ್ರಶ್ನೆಗಳನ್ನು ಅವರ ಬಳಿ ಕೇಳಿದ.

"ಅರಸಾ, ಕಳೆದ ಆರು ತಿಂಗಳಿನಿಂದಲೂ ನಾನು ಈ ಕಾಳಗದ ಕೋಳಿಗಳೊಂದಿಗೇ ವಾಸಿಸುತ್ತಿದ್ದೇನೆ. ಅವು ವರ್ತಿಸುವ ರೀತಿಯಲ್ಲಿಯೇ ನಾನೂ ವರ್ತಿಸಿದ್ದೇನೆ. ನಾನು ಅವುಗಳ ಜೊತೆ ಮಲಗಿದ್ದೇನೆ, ಕಾಡು ಮೇಡುಗಳಲ್ಲಿ ಅವುಗಳ ಜೊತೆ ಅಲೆದಾಡಿದ್ದೇನೆ. ನಾನೂ ಬಹುತೇಕ ಆ ಕಾಳಗದ ಹುಂಜಗಳಂತೆಯೇ ಆಗಿದ್ದೇನೆ. ಅವುಗಳ ಜೊತೆ ವಾಸಿಸಿ ನಾನೂ ಹುಂಜದಂತೆಯೇ ಬದಲಾದ ನಂತರವೇ, ನಾನು ಈ ಚಿತ್ರವನ್ನು ಬಿಡಿಸಲು ಸಾಧ್ಯವಾದದ್ದು" ಎಂದು ಕಲಾ ಶಿಕ್ಷಕರು ಹೇಳಿದರು,

ಯಶಸ್ಸಿನ ಏಕೈಕ ರಹಸ್ಯ ಇದೇ! ಹೀಗೆ ಅದರಲ್ಲೇ ಸೇರಿಹೋಗುವ, ಅದೇ ಆಗಿ ಬದಲಾಗುವ ಇಂತಹ ಬದ್ಧತೆಯನ್ನು ಹೊಂದಬೇಕು. ಅದು ಕೆಲಸವಾಗಿರಲಿ, ವೃತ್ತಿ ಜೀವನವಾಗಿರಲಿ, ವ್ಯವಹಾರವಾಗಿರಲಿ ಅಥವಾ ಅಧ್ಯಯನವಾಗಿರಲಿ, ಆ ಚಟುವಟಿಕೆಗೆ ಬದ್ಧರಾಗಿರುವುದು ಬಹಳ ಮುಖ್ಯ. ಯಶಸ್ಸಿನ ರಹಸ್ಯ ಈ ಬದ್ಧತೆಯಲ್ಲೇ ಅಡಗಿದೆ.

ನೀವು ಆಧ್ಯಾತ್ಮಿಕ ವ್ಯಕ್ತಿಯಾಗಿದ್ದರೆ, ಇದನ್ನು ಒಂದು ಪ್ರಾರ್ಥನೆ ಎಂದು ಪರಿಗಣಿಸಬಹುದು. ಅನೇಕ ಜನರು ಪ್ರಾರ್ಥಿಸುವಾಗ ದೇವರೊಂದಿಗೆ ಒಂದಾಗುತ್ತಾರೆ. ತುಟಿಗಳು ಏನೋ ಗೊಣಗುತ್ತಿರುತ್ತವೆ, ಕಣ್ಣುಗಳು ದೇವರನ್ನು ನೋಡುತ್ತಿರುತ್ತವೆ, ಆಗ ಮನಸ್ಸು ಮಾತ್ರ ಬೇರೆಡೆ ಅಲೆದಾಡಿದರೆ, ಅದು ಪ್ರಾರ್ಥನೆಯಲ್ಲ. ಎಲ್ಲಾ ಇಂದ್ರಿಯಗಳು ಮತ್ತು ಮನಸ್ಸು ದೇವರೊಂದಿಗೇ ಒಂದಾಗಬೇಕು. ಅದು ವೃತ್ತಿಯಾಗಿರಲಿ, ವ್ಯವಹಾರವಾಗಿರಲಿ, ಮನೆಕೆಲಸವಾಗಿರಲಿ, ಕಚೇರಿ ಕೆಲಸವಾಗಿರಲಿ ಅಥವಾ ಅಧ್ಯಯನವಾಗಿರಲಿ, ನೀವು ವಹಿಸಿಕೊಂಡ ಕೆಲಸಕ್ಕೆ ಬದ್ಧರಾಗಿದ್ದರೆ, ಯಶಸ್ಸು ಖಚಿತ.


ನೀವು ಒಂದು ಚಟುವಟಿಕೆಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಾಗ, ನೀವು ಅದರ ಎಲ್ಲಾ ತಂತ್ರಗಳನ್ನೂ ಕಲಿಯುವಿರಿ. ಅದು ನಿಮ್ಮನ್ನು ಆ ಕ್ರಿಯೆಯನ್ನು ಆತ್ಮವಿಶ್ವಾಸದಿಂದ ಮಾಡುವಂತೆ ಮಾಡುತ್ತದೆ. ಆತ್ಮವಿಶ್ವಾಸವು ನಿಮ್ಮನ್ನು ಕಷ್ಟಪಟ್ಟು ಕೆಲಸ ಮಾಡುವಂತೆ ಮಾಡುತ್ತದೆ. ಇವು ಒಂದಾದಾಗ, ನಿಮ್ಮ ಯಶಸ್ಸನ್ನು ಯಾರೂ ತಡೆಯಲು ಸಾಧ್ಯವಿಲ್ಲ.

•

# ತೊಡಗಿಸಿಕೊಳ್ಳುವಿಕೆಯಿಂದ ಮೂಡುವ ಬಯಕೆ!

ಒಂದು ಸ್ವಂತ ಮನೆಯನ್ನು ಕಟ್ಟಿಕೊಂಡು ಅಲ್ಲಿಗೆ ಹೋಗುವುದು ನಿಮ್ಮ ಜೀವಮಾನದ ಕನಸಾಗಿರಬಹುದು. ಅದರಲ್ಲಿ ಏನೇನು ಇರಬೇಕೆಂದು ನೀವು ವರ್ಷಗಟ್ಟಲೆ ಯೋಜಿಸಿರುತ್ತೀರಿ. ನೀವು ಬೇರೆಲ್ಲವನ್ನೂ ಮರೆತು ಈ ಮನೆಯ ಬಗ್ಗೆಯೇ ಹೆಚ್ಚಾಗಿ ಯೋಚಿಸಿರಬಹುದು. ಕೊನೆಗೂ ಯಾವುದೋ ಒಂದು ದಿನ ನಿಮ್ಮ ಕನಸು ನನಸಾಗುವುದನ್ನು ಮತ್ತು ನೀವು ನಿಮ್ಮ ಮನೆಯನ್ನು ಕಟ್ಟಿ ಮುಗಿಸಿ ಅಲ್ಲಿಗೆ ಹೋಗುವುದನ್ನು ನೋಡುವುದು ಸಂತೋಷ ಮತ್ತು ತೃಪ್ತಿಯಲ್ಲವೇ? ನೀವು ಸಮರ್ಪಣಾ ಭಾವದಿಂದ ಏನೇ ಮಾಡಿದರೂ, ನಿಮಗೆ ಇಂತಹುದೇ ಭಾವನೆ ಬರುತ್ತದೆ.

ಆದರೆ ನೀವು ಹೊಸ ಮನೆಗೆ ಹೋದಾಗ ನಿಮಗೆ ಸಿಕ್ಕ ಸಂತೋಷ ಮತ್ತು ತೃಪ್ತಿ ಬೇಗನೆ ಮಾಯವಾಗಬಹುದು. ಏಕೆಂದರೆ ಅದರ ನಂತರ ಬೇರೊಂದು ದೊಡ್ಡ ಆಸೆ ನಿಮ್ಮ ಮುಂದೆ ಕಾಣಿಸಿಕೊಳ್ಳುತ್ತದೆ. ಬದ್ಧತೆಯಿಂದ ಸತತವಾಗಿ ಹೀಗೆ ವಿಭಿನ್ನ ಗುರಿಗಳನ್ನು ಸಾಧಿಸುವ ಜನರಿಗೆ ಮಾತ್ರ ಇಂತಹ ಬೆಳವಣಿಗೆ ಸಾಧ್ಯ.





# ಬದ್ಧತೆ ಮತ್ತು ಸೋಮಾರಿತನ !

ವಿಶ್ವವಿಖ್ಯಾತ ವಿಜ್ಞಾನಿ ಐನ್‌ಸ್ಟೈನ್‌ಗೆ ಒಮ್ಮೆ ಒಂದು ಪ್ರಶ್ನೆಯನ್ನು ಕೇಳಲಾಯಿತು. "ನೀವು ಕಂಡುಕೊಂಡ ಮಹಾನ್ ಸತ್ಯವೆಂದರೆ ಸಾಪೇಕ್ಷತಾ ಸಿದ್ಧಾಂತ. ನೀವು ಅದನ್ನು ಕಂಡು ಹಿಡಿಯದಿದ್ದರೆ ಜಗತ್ತು ಹೇಗಿರುತ್ತಿತ್ತು?" ಎಂದು. ಐನ್‌ಸ್ಟೈನ್ ನಗುತ್ತಾ ಹೇಳಿದರು, "ದೊಡ್ಡದಾಗಿ ಏನೂ ಸಂಭವಿಸುತ್ತಿರಲಿಲ್ಲ. ಮುಂದಿನ ಕೆಲವು ವಾರಗಳಲ್ಲಿ ಬೇರೆ ಯಾರಾದರೂ ಇದನ್ನು ಕಂಡುಹಿಡಿಯುತ್ತಿದ್ದರು" ಎಂದು!

ಇದು ನಿಜ. ಕಾರಣವೇನೆಂದರೆ, ಅದೇ ಸಮಯದಲ್ಲಿ, ಅನೇಕ ವಿಜ್ಞಾನಿಗಳು ಅನೇಕ ಕ್ಷೇತ್ರಗಳಲ್ಲಿ ಇದನ್ನು ಸಂಶೋಧಿಸುತ್ತಿದ್ದರು. ಆ ಅಧ್ಯಯನಗಳು ವಿಭಿನ್ನ ಹಂತಗಳಲ್ಲಿದ್ದವು. ಮೊದಲು ಯಾರು ಇದನ್ನು ಕಂಡು ಹಿಡಿಯುತ್ತಾರೆ ಎಂದು ವೈಜ್ಞಾನಿಕ ಜಗತ್ತು ಕಾಯುತ್ತಿತ್ತು. ಜರ್ಮನಿಯ ಒಬ್ಬ ವಿಜ್ಞಾನಿ ಕೂಡ ಸಾಪೇಕ್ಷತಾ ಸಿದ್ಧಾಂತದ ಹಲವು ಅಂಶಗಳನ್ನು ಅಧ್ಯಯನ ಮಾಡಿದ್ದರು. ಅವರು ಬಹುತೇಕ ಪರಿಹಾರವನ್ನು ಕಂಡುಕೊಂಡಿದ್ದರು. ಆದರೆ ಅವರು ಅದನ್ನು ಪೂರ್ಣಗೊಳಿಸಿ ಸಂಶೋಧನಾ ಪ್ರಬಂಧವನ್ನಾಗಿ ಪರಿವರ್ತಿಸುವುದನ್ನು ವಿಳಂಬ ಮಾಡಿದರು. ಅವರು ಸ್ವಲ್ಪ ಸೋಮಾರಿಯಾಗಿದ್ದುದರಿಂದ, ಎಲ್ಲಾ ಶ್ರೇಯಸ್ಸು ಐನ್‌ಸ್ಟೈನ್‌ಗೆ ಸಿಕ್ಕಿತು. ಐನ್‌ಸ್ಟೈನ್ ಅವರೆಲ್ಲರ ಸಂಶೋಧನೆಯನ್ನೂ ಗಮನದಲ್ಲಿಟ್ಟುಕೊಂಡೇ 'ಮುಂದಿನ ಕೆಲವು ವಾರಗಳು' ಎಂದು ಹೇಳಿದರು ಎಂದು ನಂಬಲಾಗಿದೆ.

ತಮ್ಮ ಸೋಮಾರಿತನದಿಂದಾಗಿ ಅನೇಕ ಜನರು ಹೀಗೆಯೇ ತಮಗೆ ಸಿಗಬಹುದಾದ ಖ್ಯಾತಿ ಮತ್ತು ಸಂಪತ್ತನ್ನು ಕಳೆದುಕೊಳ್ಳುತ್ತಾರೆ. "ಅದನ್ನು ನಂತರ ನೋಡಿಕೊಳ್ಳೋಣ... ನಂತರ ಮುಗಿಸೋಣ..." ಎಂದು ಮುಂದೂಡುವವರನ್ನು ಲೋಕ ತಿರಸ್ಕರಿಸುತ್ತದೆ, ಆದುದರಿಂದಲೇ ನೀವು ಆಯ್ಕೆ ಮಾಡಿಕೊಂಡಿರುವ ಚಟುವಟಿಕೆಯಲ್ಲಿ ಸೋಮಾರಿಯಾಗಿರಬಾರದು.







## ದಿಕ್ಕು ಬದಲಿಸದ ಬದ್ಧತೆ!

ಏನನ್ನಾದರೂ ಮಾಡುವಾಗ ಗಮನ ಬೇರೆಡೆ ಹರಿಯುವುದು ಅಥವಾ ಅದರಿಂದ ದೂರ ಸರಿಯುವುದು ಸಹಜ. ನೀವು ಆಯ್ಕೆ ಮಾಡಿದ ಮಾರ್ಗದಿಂದ ದೂರ ಸರಿಯಬೇಕಾದಾಗ ಅಥವಾ ಪರಿಚಿತ ರಸ್ತೆಯನ್ನು ಬಿಟ್ಟು ಬೇರೆ ತಿರುವಿನಲ್ಲಿ ಸಾಗಬೇಕಾಗಿ ಬಂದಾಗ, ಅದಕ್ಕಾಗಿ ಅಸಮಾಧಾನಗೊಳ್ಳಬೇಕಾದ ಅಥವಾ ಚಿಂತಿಸಬೇಕಾದ ಅಗತ್ಯವೇನೂ ಇಲ್ಲ. "ಅಯ್ಯೋ! ಹೇಗೋ ಏನೋ ತಪ್ಪಾಗಿ ಹೋಯಿತು!" ಎಂದು ನೀವು ನಿರುತ್ಸಾಹಗೊಂಡು ಅಲ್ಲೇ ನಿಂತು ಬಿಡಬಾರದು. ಅದರಿಂದ ಚೇತರಿಸಿಕೊಂಡು ಸರಿಯಾದ ಹಾದಿಗೆ ಮರಳುವುದು ಮುಖ್ಯ.

ನೀವು ಸಾಗಬೇಕಾದ ಹಾದಿಯಿಂದ ಬೇರೆಡೆಗೆ ಸಾಗುವುದು ಏಕೆ ಹೆಚ್ಚಾಗಿ ಸಂಭವಿಸುತ್ತದೆ? ನೀವು ಗುರಿ ತಪ್ಪುವುದರಿಂದ ಇದು ಸಂಭವಿಸುತ್ತದೆ. ಗುರಿಗಳಲ್ಲಿ ಆಸಕ್ತಿಯ ನಷ್ಟ ಇದಕ್ಕೆ ಕಾರಣವಾಗಿರುತ್ತದೆ. ಹೀಗಾದಾಗ ಗುರಿಗಳನ್ನು ಸಾಧಿಸಬಹುದೇ ಎಂಬ ಬಗ್ಗೆ ಸಂದೇಹವಿದೆ. ನಿಮ್ಮ ಗುರಿಗಳಲ್ಲಿ, ನಿಮ್ಮ ಕನಸಿನಲ್ಲಿ ನಂಬಿಕೆ ಇಡಿ. ಬದ್ಧತೆಯಿಂದ ಅದರ ಕಡೆಗೆ ಸಾಗುತ್ತಿರಿ. ನೀವಂದುಕೊಂಡದ್ದನ್ನು ಸಾಧಿಸುವಿರಿ!



## ಬೇಸರವನ್ನು ದೂರ ಮಾಡುವ ಬದ್ಧತೆ!

'ದಿನವೂ ಬೆಳಿಗ್ಗೆ ಎದ್ದು ಸಿದ್ಧವಾಗಿ, ಜನ ಸಂದಣಿ ತುಂಬಿರುವ ವಾಹನದಲ್ಲಿ ಪ್ರಯಾಣ ಮಾಡಿ, ಕಚೇರಿಗೆ ತಲುಪಿ, ದಿನದಿನವೂ ಒಂದೇ ಬಗೆಯ ಕೆಲಸವನ್ನು ಮಾಡಿ ಮನೆಗೆ ಹಿಂದಿರುಗಿ ಬಂದ ಮೇಲೆ ಸ್ವಲ್ಪ ಹೊತ್ತು ಟಿವಿ ನೋಡಿ, ನಂತರ ಊಟ ಮಾಡಿ ಮಲಗುತ್ತೇನೆ. ಮರುದಿನ ಮತ್ತೆ ಎಂದಿನಂತೆ ಬೆಳಿಗ್ಗೆ ಎದ್ದು, ಸಿದ್ಧವಾಗಿ ಮತ್ತೆ ಕಚೇರಿಗೆ ಹೋಗಿ ಬರುತ್ತೇನೆ' ಎಂದು ತುಂಬ ಜನ ಬೇಸರಿಸಿಕೊಳ್ಳುತ್ತಾರೆ. ಹೀಗೆಬೇಸರಗೊಂಡು, ಜೀವನ ಎಂದರೇನು? ಎಂದು ಯೋಚಿಸುತ್ತಾ, ಜೀವನವನ್ನೇ ದ್ವೇಷಿಸಲು ಪ್ರಾರಂಭಿಸಿದರೆ, ಕಡೆಗೆ ಆ ಬೇಸರವೇ ಜೀವನವನ್ನು ಸಂಕೀರ್ಣಗೊಳಿಸಿ ಬಿಡಬಹುದು.


ಇಂತಹ ಬೇಸರವನ್ನು ಹೋಗಲಾಡಿಸಲು ಏನು ಮಾಡಬೇಕೆಂದು ಅನೇಕ ಜನರಿಗೆ ತಿಳಿದಿಲ್ಲ. "ಒಂದೇ ರೀತಿಯ ಚಟುವಟಿಕೆಗಳನ್ನು ಪುನರಾವರ್ತಿಸುವುದರಿಂದ ಬೇಸರವಾಗುತ್ತದೆ. ಬದ್ಧತೆಯಿಂದ ನೀವು ಅದರಲ್ಲಿ ನಿಮ್ಮನ್ನು ತೊಡಗಿಸಿಕೊಂಡರೆ ನಿಮಗೆ ಬೇಸರವಾಗುವುದಿಲ್ಲ. ಆಗ ನೀವು ಒಂದೇ ಕೆಲಸವನ್ನು ಮತ್ತೆ ಮತ್ತೆ ಮಾಡಿದರೂ, ಪ್ರತಿದಿನವೂ ಹೊಸ ಅನುಭವವಾಗಿರುತ್ತದೆ."

## ಮರೆಯುವುದೂ ಬದ್ಧತೆ!

ಯಾವುದೇ ಕೆಲಸವನ್ನಾದರೂ ಸಂಪೂರ್ಣ ಆಸಕ್ತಿ ಮತ್ತು ಬದ್ಧತೆಯಿಂದ ಮಾಡಬೇಕಾದಲ್ಲಿ, ಉಳಿದೆಲ್ಲವನ್ನೂ ಮರೆತು ಬಿಡಬೇಕು. ಮಕ್ಕಳು ಪಾಠಗಳನ್ನು ಓದುವಾಗ, ಬಿಡುವಿನ ಸಮಯದಲ್ಲಿ ಕ್ರಿಕೆಟ್ ಆಡಿದ್ದನ್ನೋ, ತಾವು ನೋಡಿದ ಕಾರ್ಟೂನ್ ಚಿತ್ರಗಳನ್ನೋ ಕುರಿತು ಯೋಚಿಸುತ್ತಿದ್ದರೆ ಅವರು ಸರಿಯಾಗಿ ಓದಲು ಸಾಧ್ಯವಾಗುವುದಿಲ್ಲ. ಅವರ ತುಟಿಗಳು ಯಾಂತ್ರಿಕವಾಗಿ ಪಾಠಗಳನ್ನು ಉಚ್ಚರಿಸುತ್ತಿರುತ್ತವೆ, ಆದರೆ ಅವರ ಮನಸ್ಸು ಬೇರೆಲ್ಲೋ ಅಲೆದಾಡುತ್ತಿರುತ್ತದೆ. ಆಗ ಅವರು ಓದಿದ್ದು ಯಾವುದೂ ಅವರಿಗೆ ನೆನಪಿನಲ್ಲಿರುವುದಿಲ್ಲ.

ಸಾಧಿಸಲು ಬಯಸುವ ಒಬ್ಬ ವಿಜ್ಞಾನಿ, ತನ್ನ ಪ್ರಯೋಗಾಲಯದಲ್ಲಿರುವಾಗ ಹೊರ ಪ್ರಪಂಚವನ್ನು ಮರೆತು ಹೋಗುತ್ತಾನೆ. ಹೊರಗೆ ಮಳೆ ಸುರಿಯುತ್ತಿದೆಯಾ, ಕಡು ಬಿಸಿಲು ಸುಡುತ್ತಿದೆಯಾ, ಮಂಜು ಸುರಿಯುತ್ತಿದೆಯಾ ಎಂಬ ಯಾವುದೂ ಅವರ ಗಮನಕ್ಕೇ ಬರುವುದಿಲ್ಲ. ಅಷ್ಟೇ ಅಲ್ಲ, ಅದೇ ಪ್ರಯೋಗಾಲಯದಲ್ಲಿ ಇನ್ನೂ ಬೇರೆ ಬೇರೆ ಬಗೆಯ ಪ್ರಯೋಗಗಳೂ ಕೂಡ ನಡೆಯುತ್ತಿರಬಹುದು. ಅವ್ಯಾವುದನ್ನೂ ಅವರು ಗಮನಿಸುವುದೂ ಇಲ್ಲ. ತಮ್ಮ ಕೆಲಸದಲ್ಲಿ ಮಾತ್ರವೇ ಅವರ ಗಮನವೆಲ್ಲ ಇರುತ್ತದೆ. ಹೀಗೆ ತಾವು ಮಾಡುವ ಕೆಲಸದಲ್ಲಿ ಬದ್ಧತೆಯನ್ನು ತೋರಿಸುವವರೇ ತಮ್ಮ ಗುರಿಯಲ್ಲಿ ಯಶಸ್ಸನ್ನು ಗಳಿಸುತ್ತಾರೆ.


ನಿಮ್ಮ ದೈನಂದಿನ ಜೀವನದಲ್ಲಿ ಕೂಡ ಹೀಗೆ ಹಲವು ವಿಷಯಗಳನ್ನು ಮರೆಯುವುದೂ, ನೆನಪಿಸಿಕೊಳ್ಳುವುದೂ ನಡೆಯುತ್ತಲೇ ಇರುತ್ತದೆ. ಪ್ರತಿ ಕ್ಷಣವೂ ಕೆಲವು ವಿಷಯಗಳನ್ನು ಮರೆಯುತ್ತಲೇ ಇರುತ್ತೇವೆ. ಬೇರೆ ಕೆಲವು ಹೊಸ ವಿಷಯಗಳೂ ನೆನಪಿಗೆ ಬರುತ್ತಲೇ ಇರುತ್ತವೆ. ಕಛೇರಿಯೊಳಗೆ ಪ್ರವೇಶಿಸಿ ಕೆಲಸ ಮಾಡಲು ಆರಂಭಿಸಿದ ಕೂಡಲೇ ಅವರಿಗೆ ಮನೆಯ ಎಲ್ಲ ವಿಷಯಗಳೂ ಮರೆತು ಹೋಗುತ್ತವೆ. ಸಾಯಂಕಾಲ ಕಛೇರಿ ಮುಗಿಸಿದ ಮನೆಗೆ ಹಿಂದಿರುಗುತ್ತಿದ್ದಂತೆಯೇ ಹೆಂಡತಿ, ಮಕ್ಕಳ ನೆನಪು ಅವರಿಗೆ ಬರುತ್ತದೆ. ಜೀವನ ಹೀಗೆ ಒಂದನ್ನು ಮರೆಯುವುದೇ ಇನ್ನೊಂದನ್ನು ಬದ್ಧತೆಯಿಂದ ಮಾಡಲು ಇರುವ ದಾರಿ.





# ಬದ್ಧತೆಯ ನುಡಿಗಳು!

- ನೀವು ಬದ್ಧತೆಯಿಂದ ತೊಡಗಿಸಿಕೊಳ್ಳದ ಯಾವುದೇ ಚಟುವಟಿಕೆಯಲ್ಲೂ ಯಶಸ್ಸನ್ನು ಸಾಧಿಸಲು ಸಾಧ್ಯವಿಲ್ಲ. ಸಮರ್ಪಣಾಭಾವದಿಂದ ಮಾಡುವ ಯಾವುದರಲ್ಲೂ ಎಂದಿಗೂ ನೀವು ವಿಫಲರಾಗಲು ಸಾಧ್ಯವಿಲ್ಲ.
- ನೀವು ಯಶಸ್ವಿಯಾಗಲು ಬಯಸಿದರೆ, ನೀವು ಏನು ಮಾಡುತ್ತಿದ್ದೀರಿ ಎಂಬುದನ್ನು ಅರ್ಥ ಮಾಡಿಕೊಂಡು ಮಾಡಿ. ನೀವು ಮಾಡುವುದನ್ನು ಬದ್ಧತೆ ಮತ್ತು ಆತ್ಮವಿಶ್ವಾಸದಿಂದ ಮಾಡಿ.
- ಜೀವನದಲ್ಲಿ ನೀವು ಬಯಸಿದ್ದನ್ನು ಸಾಧಿಸುವ ಮೊದಲ ಹೆಜ್ಜೆ ನಿಮಗೆ ಬೇಕಾದುದನ್ನು ನಿರ್ಧರಿಸುವುದು ಮತ್ತು ಎರಡನೇ ಹೆಜ್ಜೆ ಅದನ್ನು ಸಾಧಿಸಲು ಶ್ರಮಿಸುವುದು.
- ಯಶಸ್ವಿ ವ್ಯಕ್ತಿ ಮತ್ತು ಇತರರ ನಡುವಿನ ವ್ಯತ್ಯಾಸ ಶಕ್ತಿಯ ಕೊರತೆ–ಯೂ ಅಲ್ಲ, ಜ್ಞಾನದ ಕೊರತೆಯೂ ಅಲ್ಲ. ಬದಲಾಗಿ, ಅದು ಬದ್ಧತೆಯ ಕೊರತೆ.
- ತನ್ನನ್ನು ತಾನು ತಿಳಿದುಕೊಳ್ಳಲು ಉತ್ತಮ ಮಾರ್ಗವೆಂದರೆ, ಕ್ರಿಯೆಯ ಮೂಲಕ ನಿಮ್ಮ ಕೆಲಸವನ್ನು ಪೂರ್ಣ ಬದ್ಧತೆಯಿಂದ ಪೂರ್ಣಗೊಳಿಸಿ. ನಿಮ್ಮ ಅರ್ಹತೆಗಳು ಮತ್ತು ಮಿತಿಗಳು ಏನೆಂದು ನೀವೇ ಕಂಡುಕೊಳ್ಳುವಿರಿ.
- ಜೀವನವು ಬದ್ಧತೆಯ ಪರಿಣಾಮವಾಗಿರುತ್ತದೆ. ಆಸಕ್ತಿರಹಿತ ಚಟುವಟಿಕೆಗಳನ್ನು ಮಾಡುವವರಿಗೆ ಉತ್ತಮ ಜೀವನ ಇರುವುದಿಲ್ಲ.
- ಪ್ರತಿಯೊಂದು ಕ್ರಿಯೆಯನ್ನೂ ಬದ್ಧತೆಯಿಂದ ಮಾಡಿದಾಗ ಬೆಳವಣಿಗೆ ತಾನಾಗಿಯೇ ಬರುತ್ತದೆ.
- ನೀವು ನಂಬುವ ಕೆಲಸವನ್ನು ಉತ್ಸಾಹ ಮತ್ತು ಆಸಕ್ತಿಯಿಂದ ಮಾಡಿ. ನೀವು ಅದನ್ನು ಪ್ರಾಮಾಣಿಕವಾಗಿ ಮತ್ತು ನಿರ್ಭಯವಾಗಿ ಮಾಡಿದಾಗ, ನೀವು ಯಶಸ್ವಿಯಾಗುವುದನ್ನು ಯಾರೂ ತಡೆಯಲು ಸಾಧ್ಯವಿಲ್ಲ.
- ಕೆಲವರು, ಏನನ್ನಾದರೂ ಹೇಳಿಕೊಟ್ಟು ಕಲಿಸಿದರೆ ಅದನ್ನು ಮರೆತುಬಿಡಬಹುದು. ಆದರೆ ಅದನ್ನು ಮಾಡಿ ತೋರಿಸಿದರೆ, ಅವರು ಅದನ್ನು ನೆನಪಿಸಿಕೊಳ್ಳಬಹುದು. ನೀವು ಅವರನ್ನು ಕಾರ್ಯದಲ್ಲಿ ತೊಡಗಿಸಿಕೊಂಡರೆ, ಅವರು ಖಂಡಿತವಾಗಿಯೂ ಅದನ್ನು ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಅದನ್ನು ಮುಂದುವರಿಸುತ್ತಾರೆ.
- ಒಂದು ಚಟುವಟಿಕೆಯಲ್ಲಿ ನೀವು ಎಷ್ಟರ ಮಟ್ಟಿಗೆ ತೊಡಗಿಸಿಕೊಳ್ಳಬಹುದು ಎಂಬುದನ್ನು ನೀವೇ ನಿರ್ಧರಿಸಿ. ನಿಮ್ಮ ಎಲ್ಲೆಗಳನ್ನು ಮಿತಿಗೊಳಿಸಬೇಡಿ.
- ನಿಮಗೆ ಯಾವ ಕೆಲಸ ಮಾಡಲು ಇಷ್ಟವಿಲ್ಲವೋ ಅದನ್ನು ಪ್ರತಿದಿನ ಸ್ವಲ್ಪ ಹೊತ್ತು ಮಾಡಿ. ಇಂತಹ ಒಂದು ಅಥವಾ ಎರಡು ಕೆಲಸಗಳನ್ನು ದಿವನೂ ಮಾಡಲು ಅಭ್ಯಾಸ ಮಾಡಿಕೊಳ್ಳಿ. ಕಾಲಾನಂತರದಲ್ಲಿ, ಅಂತಹ ಕ್ರಿಯೆಗಳ ಬಗ್ಗೆ ನಿಮ್ಮಲ್ಲೂ ಆಸಕ್ತಿ ಮೂಡುತ್ತದೆ. ಇದು ನಿಮ್ಮ ಕರ್ತವ್ಯಗಳನ್ನು ಬದ್ಧತೆಯಿಂದ ನಿರ್ವಹಿಸಲು ಸಹಾಯ ಮಾಡುತ್ತದೆ.
- ಧೈರ್ಯ, ಕಠಿಣ ಪರಿಶ್ರಮ ಮತ್ತು ಬದ್ಧತೆ ನಿಮ್ಮ ಜೀವನದಲ್ಲಿ ಸಂತೋಷವನ್ನು ಸೃಷ್ಟಿಸುವ ಮತ್ತು ಉಳಿಸಿಕೊಳ್ಳುವ ಮೂರು ಅಂಶಗಳಾಗಿವೆ.
- ನೀವು ಬದ್ಧತೆಯಿಂದ ಮಾಡಲು ಸಾಧ್ಯವಾಗದ ಕೆಲಸದಲ್ಲಿ 100 ಪ್ರತಿಶತ ಪ್ರಯತ್ನ ಮತ್ತು ಸಮರ್ಪಣೆಯನ್ನು ಹಾಕಲು ಸಾಧ್ಯವಿಲ್ಲ. ಕೊನೆಯಲ್ಲಿ, ಫಲಿತಾಂಶವು ನಿಮಗೆ ನಿರಾಶಾದಾಯಕವಾಗಿರುತ್ತದೆ.
- ಜೀವನದ ಮಾಧುರ್ಯವನ್ನು ಅನುಭವಿಸುವ ಏಕೈಕ ಮಾರ್ಗವೆಂದರೆ ಎಲ್ಲದರಲ್ಲೂ ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದು.
- ನಾವು ಏನನ್ನೂ ಮಾಡದಿದ್ದಾಗ, ನಾವು ಶಕ್ತಿಹೀನರೆಂದು ಭಾವಿಸುತ್ತೇವೆ. ಆದರೆ, ನಾವು ಬದ್ಧತೆಯಿಂದ ಏನನ್ನಾದರೂ ಮಾಡಲು ಪ್ರಾರಂಭಿಸಿದರೆ, ನಾವು ಯಾವುದೇ ರೀತಿಯ ಬದಲಾವಣೆಯನ್ನಾದರೂ ತರಬಲ್ಲೆವು ಎಂಬ ವಿಶ್ವಾಸ ನಮ್ಮಲ್ಲಿ ರುತ್ತದೆ. ●






The Brand Trust Report - India Study 2021
Power of Trust
India's Most Trusted
Dhotis Brands
RAMRAJ
ACHARYA
PANCHAKACHAM DHOTIS
Traditonal
Panjakacham Dhotis
Shop Online @ www.ramrajcotton.in



The Brand Trust Report - India Study 2021
Power of Trust
India's Most Trusted
Dhotis Brands
Culture India™
TRADITIONAL KURTAS • DHOTIS
BY
RAMRAJ
CULTURAL
Vibe
CULTURE WITH
A MODERN TWIST
Shop Online @ www.ramrajcotton.in

The Brand Trust Report - India Study 2021
Power of Trust
India's Most Trusted Dhotis Brands

RAMRAJ ©

# LITTLE STARS®

## KIDS DHOTIS • SHIRTS • KURTAS




Kokhila®
WOMEN'S INNERWEARS
BY
RAMRAJ
SOFT.
Stylish.
STRONG.
Experience the feather-light
touch of Kokhila innerwear,
crafted with premium cotton for
unmatched comfort every day.
Designed to move with you,
it's the perfect blend of
elegance and style.
SCAN QR CODE
FOR STORE LOCATION
Available at company showroom &
All leading Textile Shop Shop online at

ನಿಮ್ಮ ಮನೆಗೇ ಬರಬೇಕೇ?

# ಬಿಳುಪು

## ಚಂದಾದಾರರಾಗಿ!



'ಉನ್ನತವಾದ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯ ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

**ವಾರ್ಷಿಕ ಚಂದಾ ರೂ. 200**
**ದ್ವೈವಾರ್ಷಿಕ ಚಂದಾ ರೂ. 380**

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No: 1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

**ವಿಳಾಸ :** Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.

**ಫೋನ್ : 0421-4304106, 9842274137.**

## ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಫೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.

**ಬ್ಯಾಂಕ್ ಖಾತೆಯ ವಿವರ Venmaii**
**A/C No: 1809135000000299**
**Karur Vysya Bank,Tirupur SR Nagar Branch**
**IFSC Code: KVBL0001809.**



## ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

| | ವಾರ್ಷಿಕ ಚಂದಾ | ದ್ವೈವಾರ್ಷಿಕ ಚಂದಾ | |
|---|---|---|---|
| ರೂ.~~200~~ | ರೂ.125 ಮಾತ್ರ | ರೂ.~~380~~ | ರೂ.250 ಮಾತ್ರ |



## ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

| | ವಾರ್ಷಿಕ ಚಂದಾ | ದ್ವೈವಾರ್ಷಿಕ ಚಂದಾ | |
|---|---|---|---|
| ರೂ.~~200~~ | ರೂ.125 ಮಾತ್ರ | ರೂ.~~380~~ | ರೂ.250 ಮಾತ್ರ |

**ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.**



# ಅರ್ಪಣಾಭಾವ ಮತ್ತು ಪ್ರಾರ್ಥನೆ!

ಪ್ರತಿಯೊಂದು ಕ್ರಿಯೆಯನ್ನೂ ಸಮರ್ಪಣಾ ಭಾವದಿಂದ ನಿರ್ವಹಿಸುವಂತೆಯೇ, ದೇವರ ಸ್ಮರಣೆಯಲ್ಲಿ ಮಾಡುವ ಪ್ರಾರ್ಥನೆಯೂ ಸಹ ಸಮರ್ಪಣಾ ಭಾವದಿಂದ ಇರಬೇಕು. ಗಾಂಧೀಜಿ ಪ್ರಾರ್ಥನೆಯನ್ನು 'ದೇವರೊಂದಿಗೆ ಮಾತನಾಡುವ ಸಮಯ' ಎಂದು ಬಣ್ಣಿಸುತ್ತಿದ್ದರು. ಒಮ್ಮೆ ಗಾಂಧೀಜಿ ತಮ್ಮ ಸ್ನೇಹಿತರೊಬ್ಬರ ಮನೆಗೆ ಹೋಗಿದ್ದರು. ಆ ಸಮಯದಲ್ಲಿ ಅವರ ಸ್ನೇಹಿತರು ಪ್ರಾರ್ಥನೆಯಲ್ಲಿ ಮುಳುಗಿದ್ದರು. ಗಾಂಧಿ ಬಂದಿದ್ದಾರೆಂದು ತಿಳಿದಾಗ, ಅವರು ಬೇಗನೆ ತಮ್ಮ ಪ್ರಾರ್ಥನೆಯನ್ನು ಮುಗಿಸಿ ಎದ್ದು ಬಂದರು.

"ನೀವು ಹೀಗೇಕೆ ಮಾಡಿದಿರಿ?" ಎಂದು ಅದಕ್ಕೆ ಗಾಂಧಿ ವಿಷಾದ ವ್ಯಕ್ತಪಡಿಸಿದರು. "ನೀವು ಒಬ್ಬ ಪ್ರಮುಖ ಮತ್ತು ಮಹಾನ್ ವ್ಯಕ್ತಿ. ನೀವು ನನ್ನ ಜೊತೆ ಮಾತಾಡಬೇಕು ಎಂದು ಬಂದಿರುವುದರಿಂದ ನಾನು ನನ್ನ ಪ್ರಾರ್ಥನೆಯನ್ನು ಬೇಗ ಮುಗಿಸಿದೆ" ಎಂದು ಅವರು ಹೇಳಿದರು. "ದೇವರು ನನಗಿಂತ ಮುಖ್ಯನಲ್ಲವೇ? ಅವನಿಗೆ ಹೋಲಿಸಿದರೆ ನಾನು ಸಾಮಾನ್ಯ ಮನುಷ್ಯ. ನೀವು ಅವನೊಂದಿಗೆ ಮಾತನಾಡುತ್ತಿರುವಾಗ ನಾನು ಕಾಯಬೇಕು, ಇದೇ ಸರಿಯಾದುದು" ಎಂದರು ಮಹಾತ್ಮ ಗಾಂಧೀಜಿ.

ಗಾಂಧಿಯವರ ಪ್ರಕಾರ ಪ್ರಾರ್ಥನೆ ಎಂಬುದು ಕೇವಲ ಒಂದು ಆಚರಣೆಯಲ್ಲ; ದೇವರೊಂದಿಗೆ ಮಾತನಾಡುವ ಸಮಯ ಅದು. ನಾವು ದೇವರೊಂದಿಗೆ ಮಾತನಾಡುತ್ತಾ, ಭಕ್ತಿಯಿಂದ ಪ್ರಾರ್ಥಿಸುತ್ತಾ ಕಳೆಯುವ ಸಮಯವು ಭಾವಪೂರ್ಣವಾಗಿರಬೇಕು. ಕೇವಲ ಮಂತ್ರಗಳನ್ನು ಪಠಿಸುವುದು, ಗಂಟೆ ಬಾರಿಸುವುದು, ಕೂಗುವುದು ಅಥವಾ ಹಾಡುವುದು ಪ್ರಾರ್ಥನೆಯಲ್ಲ, ಅದು ಹೃದಯದಿಂದ ಬರಬೇಕು. ದೇವರೊಂದಿಗೆ ಚೌಕಾಸಿ ವ್ಯವಹಾರ ಮಾಡಬಾರದು. "ನೀನು ನನ್ನ ಬೇಡಿಕೆಯನ್ನು ಪೂರೈಸಿದರೆ ನಾನು ನಿನ್ನ ದೇವಸ್ಥಾನಕ್ಕೆ ಬರುತ್ತೇನೆ ಅಥವಾ ನಾನು ಹುಂಡಿಯಲ್ಲಿ ಹಣ ಹಾಕುತ್ತೇನೆ ಅಥವಾ ನನ್ನ ತಲೆ ಬೋಳಿಸಿಕೊಳ್ಳುತ್ತೇನೆ" ಮುಂತಾದ ಒಪ್ಪಂದಗಳನ್ನು ದೇವರೊಂದಿಗೆ ಮಾಡಿಕೊಳ್ಳಬಾರದು. ಇದು ಸಂಪೂರ್ಣವಾಗಿ ತಪ್ಪು ಎಂದು ನಾನು ಹೇಳುತ್ತಿಲ್ಲ. ಇದಕ್ಕೂ ಮೀರಿದ ಪ್ರಾರ್ಥನೆ ಮಾಡುವುದು ಇನ್ನೂ ಹೆಚ್ಚು ಆನಂದದಾಯಕವಾಗಿರುತ್ತದೆ. ನಮಗಾಗಿ ಏನನ್ನಾದರೂ ಮಾಡಿದ್ದಕ್ಕೆ ಪ್ರತಿಯಾಗಿ ಏನನ್ನಾದರೂ ನಿರೀಕ್ಷಿಸುವ ಸ್ವಭಾವ ದೇವರಿಗಿಲ್ಲ. ಭಕ್ತಿ ಮತ್ತು ಕೃತಜ್ಞತೆಯ ಭಾವನೆಯು ಹೃದಯದಿಂದ ಸ್ವಾಭಾವಿಕವಾಗಿ ಹುಟ್ಟಬೇಕು.

ಒಂದು ಕಥೆ ಇದೆ... ಒಬ್ಬ ಸನ್ಯಾಸಿ ದಟ್ಟವಾದ ಕಾಡಿನಲ್ಲಿ ಮರದ ಕೆಳಗೆ ಕುಳಿತು ಧ್ಯಾನದಲ್ಲಿ ಮುಳುಗಿದ್ದ. ಸೂರ್ಯ ಮುಳುಗುತ್ತಿದ್ದಂತೆ ಕತ್ತಲಾಗಲು ಪ್ರಾರಂಭಿಸಿತ್ತು. ಆಗ ಒಬ್ಬ ಹಳ್ಳಿಗ ತುಂಬಾ ಗಾಬರಿಯಿಂದ ಇತ್ತ ಕಡೆ ಓಡಿ ಬಂದ. ಆ ಮರಕ್ಕೆ ಅಂಟಿಕೊಂಡಂತಿದ್ದ ದಾರಿಯಲ್ಲಿ ಕಾಡಿನೊಳಗೆ ಅವನು ಓಡಿ ಹೋದ...

"ಮಗನೇ... ಕಂದಾ... ಎಲ್ಲಿದ್ದೀಯಪ್ಪಾ?" ಎಂದು ಜೋರಾಗಿ ಕೂಗುತ್ತಾ ಅವನು ಓಡಿದ. ಶಾಂತವಾಗಿದ್ದ ಕಾಡಿನಲ್ಲಿ ಒಣಗಿದ ತರಗೆಲೆಗಳ ಮೇಲೆ ಅವನು ವೇಗವಾಗಿ ಓಡುವ ಶಬ್ದ ಮತ್ತು ಅವನು ಜೋರಾಗಿ ಕೂಗುತ್ತಿದ್ದ ಧ್ವನಿಯು ಸನ್ಯಾಸಿಯ ಧ್ಯಾನವನ್ನು ಭಂಗಗೊಳಿಸಿತು. ಸನ್ಯಾಸಿ ಕೋಪದಿಂದ ಎದ್ದು ನಿಂತುದನ್ನೂ ಕೂಡ ಅವನು ಗಮನಿಸದೆ, ಅವನ ಮುಂದಿನಿಂದಲೇ ಕಾಡಿನ ಕಡೆ ನೋಡುತ್ತಾ ಆ ಸನ್ಯಾಸಿಯನ್ನು ದಾಟಿಕೊಂಡು ಅವನು ಹೊರಟು ಹೋದ. ಸನ್ಯಾಸಿಯ ಕೋಪವು ಜ್ವಾಲಾಮುಖಿಯಂತೆ ಉಕ್ಕಿತು. 'ಎಷ್ಟು ಹೊತ್ತಾದರೂ ಅವನು ಇದೇ ದಾರಿಯಲ್ಲಿ ತಾನೇ ಹಿಂದಿರುಗಿ ಬರಬೇಕು, ಬೇರೆ ದಾರಿ ಯಾವುದೂ

ಇಲ್ಲವಲ್ಲ... ಅವನು ಬರಲಿ, ಆಮೇಲೆ ನೋಡಿಕೊಳ್ಳುತ್ತೇನೆ!' ಎಂದುಕೊಂಡು ಸನ್ಯಾಸಿಯು ಅವನು ಹಿಂದಿರುಗುವುದನ್ನೇ ಕಾಯುತ್ತಿದ್ದ.

ಸ್ವಲ್ಪ ಸಮಯದ ನಂತರ, ಆ ವ್ಯಕ್ತಿ ಒಬ್ಬ ಚಿಕ್ಕಹುಡುಗನನ್ನು ಹೆಗಲ ಮೇಲೆ ಹೊತ್ತುಕೊಂಡು ಆ ಹಾದಿಯಲ್ಲೇ ಹಿಂದಿರುಗಿ ಬಂದ. ಅವನನ್ನು ತಡೆದ ಸನ್ಯಾಸಿ ಕೋಪದಿಂದ ಅವನನ್ನು ಕೇಳಿದ: "ನಿನ್ನಲ್ಲಿ ತಾಳ್ಮೆ ಎಂಬುದು ಇದೆಯೋ ಇಲ್ಲವೋ? ನಾನು ಧ್ಯಾನ ಮಾಡುತ್ತಿರುವುದು ನಿನಗೆ ಕಾಣಿಸಲಿಲ್ಲವೇ? ಅಷ್ಟು ಜೋರಾಗಿ ಕೂಗುತ್ತಾ, ಶಬ್ದ ಮಾಡಿ ನೀನು ನನ್ನ ಧ್ಯಾನಕ್ಕೆ ಭಂಗ ತಂದು ಬಿಟ್ಟೆ!" ಎಂದು ಕೋಪದಿಂದ ಕೇಳಿದ.

ಸನ್ಯಾಸಿ ಹೇಳಿದ್ದನ್ನು ಕೇಳಿ ಅವನು ಭಯದಿಂದ ನಡುಗಿ ಹೋದ. ನಂತರ ನಿಧಾನವಾಗಿ ಸುಧಾರಿಸಿಕೊಂಡು ಸನ್ಯಾಸಿಗೆ ವಿನಮ್ರವಾಗಿ ನಮಸ್ಕರಿಸಿ, "ಕ್ಷಮಿಸಿ. ನೀವು ಅಲ್ಲಿ ಕುಳಿತಿರುವುದನ್ನು ನಾನು ಗಮನಿಸಲಿಲ್ಲ" ಎಂದ. ಆ ಸನ್ಯಾಸಿಗೆ ಕೋಪ ಇನ್ನೂ ಹೆಚ್ಚಾಯಿತು "ಏನು? ನಾನು ಇಲ್ಲಿ ಕುಳಿತಿರುವುದನ್ನು ನೀನು ಗಮನಿಸಲಿಲ್ಲವೇ? ನೀನಗೇನು ಕುರುಡೇ?" ಎಂದು ಮತ್ತೆ ಸಿಟ್ಟಿನಿಂದ ಹೇಳಿದ.

ಆ ವ್ಯಕ್ತಿ ಶಾಂತವಾಗಿ ಹೇಳಿದ: "ಇಲ್ಲ ಸ್ವಾಮಿ! ನನ್ನ ಮಗ ತನ್ನ ಸ್ನೇಹಿತರೊಂದಿಗೆ ಆಟವಾಡಲು ಕಾಡಿಗೆ ಹೋಗಿದ್ದಾನೆ. ಅವನೊಂದಿಗೆ ಹೋದವರೆಲ್ಲರೂ ಸಾಯಂಕಾಲವಾದ ಮೇಲೆ ಮನೆಗೆ ಹಿಂತಿರುಗಿದ್ದಾರೆ. ಇವನು ಮಾತ್ರ ಬರಲಿಲ್ಲ. ಇವನು ಯಾವುದಾದರೂ ಕೊಳಕ್ಕೆ ಬಿದ್ದಿರಬಹುದು ಅಥವಾ ಅಪಾಯಕಾರಿ ಪ್ರಾಣಿಗಳ ಕೈಗೆ ಸಿಕ್ಕಿಹಾಕಿಕೊಂಡಿರಬಹುದು ಎಂದು ಭಯಪಟ್ಟು ನಾನು ಕಾಡಿನೊಳಗೆ ಓಡಿದೆ. ನನ್ನ ಎಲ್ಲಾ ಆಲೋಚನೆಗಳೂ ಅವನ ಮೇಲೆಯೇ ಇದ್ದುದರಿಂದ ನಾನು ನಿಮ್ಮನ್ನಾಗಲೀ ಬೇರೇನನ್ನಾಗಲೀ ಗಮನಿಸಲಿಲ್ಲ" ಎಂದು ಹೇಳಿ ಮತ್ತೆ ಕ್ಷಮೆ ಯಾಚಿಸಿದ.

ಸನ್ಯಾಸಿ ಅವನು ಹೇಳಿದ ಯಾವುದನ್ನೂ ಒಪ್ಪಲು ಸಿದ್ಧವಿರಲಿಲ್ಲ. "ಕಾರಣ ಏನೇ ಇರಲಿ, ನಾನು ದೇವರನ್ನು ಧ್ಯಾನಿಸುತ್ತಿರುವಾಗ ನನಗೆ ತೊಂದರೆ ನೀಡಿದ್ದು ತಪ್ಪು" ಎಂದು ಅವನು ಹೇಳಿದ.

ಹಳ್ಳಿಗ ಶಾಂತವಾಗಿ ಸನ್ಯಾಸಿಯನ್ನು ನೋಡಿ, "ಧ್ಯಾನದಲ್ಲಿ ಮುಳುಗಿದ್ದ ನಿಮಗೆ ನಾನು ಓಡಿ ಬಂದದ್ದು, ಕೂಗಿದ್ದು ಎಲ್ಲವೂ ತಿಳಿಯಿತು. ಅದರಿಂದಾಗಿ ನಿಮ್ಮ ಧ್ಯಾನವೂ ಭಂಗವಾಯಿತು. ಆದರೆ ನನ್ನ ಮಗನನ್ನು ಹುಡುಕುತ್ತಾ ಓಡುತ್ತಿದ್ದ ನನಗೆ ನನ್ನ ಕಣ್ಣ ಮುಂದೆ ಇದ್ದ ಯಾವುದೂ ಕಾಣಿಸಲಿಲ್ಲ, ನಿಮ್ಮನ್ನೂ ಕೂಡ ನಾನು ಗಮನಿಸಲಿಲ್ಲ. ನನಗೆ ನನ್ನ ಮಗನ ಬಗ್ಗೆ ಮಾತ್ರ ಗಮನ ಇತ್ತು. ಅದಕ್ಕಾಗಿಯೇ ನನ್ನ ಕಣ್ಣುಗಳಿಗೆ ಬೇರೇನೂ ಕಾಣಲಿಲ್ಲ. ಆದರೆ ನಾನು ಮಾಡಿದ ಸಾಮಾನ್ಯ ಧ್ವನಿಯೇ ನಿಮ್ಮ ಧ್ಯಾನಕ್ಕೆ ತೊಂದರೆ ತಂದಿತು ಎಂದರೆ ಅದು ಹೇಗೆ? ನನ್ನ ಮಗುವಿನ ಬಗ್ಗೆ ನನಗಿರುವಷ್ಟು ಅರ್ಪಣಾ ಭಾವವೂ ನಿಮಗೆ ದೇವರ ಬಗ್ಗೆ ಇಲ್ಲವಲ್ಲಾ! ಆಸಕ್ತಿ ಇಲ್ಲದ ಈ ಧ್ಯಾನದಿಂದ ನಿಮಗೆ ಏನು ಪ್ರಯೋಜನ?" ಎಂದು ಕೇಳಿದ.

ಆಗ ಆ ಸನ್ಯಾಸಿಗೆ ತನ್ನ ತಪ್ಪಿನ ಅರಿವಾಯಿತು. ತನಗೆ ಬುದ್ಧಿ ಹೇಳಿದ ಆ ಗ್ರಾಮದ ವ್ಯಕ್ತಿಗೆ ನಮಸ್ಕರಿಸಿ ಹೊರಟುಹೋದ.

ನೀವು ಯಾವುದೇ ಕೆಲಸ ಮಾಡಿದರೂ, ಅದಕ್ಕೆ ನೀವು ಸಂಪೂರ್ಣವಾಗಿ ಬದ್ಧರಾಗಿರಬೇಕು. ಹಾಗೆ ಅದರಲ್ಲಿ ಪೂರ್ಣವಾಗಿ ಮುಳುಗುವವರು ಮಾತ್ರ ಗೆಲ್ಲುತ್ತಾರೆ. ಪ್ರಾರ್ಥನೆ ಕೂಡ ಹೀಗೆ–ಯೇ! ಅನೇಕ ಜನರು ತಮ್ಮ ನಿರ್ದಿಷ್ಟ ಅಗತ್ಯಗಳಿಗಾಗಿ ದೇವರನ್ನು ಕುರಿತು ಪ್ರಾರ್ಥಿಸುತ್ತಾರೆ. 'ನನ್ನ ಮುಂದೆ ಈ ಕ್ಷಣವೇ 12ಬಿ ನಂಬರಿನ ಬಸ್ ತಕ್ಷಣ ಬರಲಿ' ಎಂದು ಪ್ರಾರ್ಥಿಸುತ್ತಾ ಬಸ್ ನಿಲ್ದಾಣದಲ್ಲಿ ಅಸಹನೆಯಿಂದ ನಿಂತಿರುವ ಒಬ್ಬ ವ್ಯಕ್ತಿಯ ಮುಂದೆ ದೇವರು ಪ್ರತ್ಯಕ್ಷನಾಗಿ "ನಿನಗೆ ಯಾವ ವರ ಬೇಕು?" ಎಂದು ಕೇಳಿದರೆ, ಅವನು, "ದಯವಿಟ್ಟು ಆ ಬಸ್ಸನ್ನು ತಕ್ಷಣ ಇಲ್ಲಿ ಬರುವಂತೆ ಮಾಡು... ಅದು ಬಿಟ್ಟು ನಿನ್ನನ್ನು ಇಲ್ಲಿ ಬಾ ಎಂದು ಕರೆದವರು ಯಾರು?" ಎಂದು ಹೇಳಿದರೂ ಹೇಳಬಹುದೇನೋ!

ದೇವರು ಹಾಗೇನಾದರೂ ನಮ್ಮ ಮುಂದೆ ಕಾಣಿಸಿಕೊಂಡು ನಗುತ್ತಾ "ನಿನಗೆ ಏನು ಬೇಕು?" ಎಂದೇನಾದರೂ ಕೇಳಿದರೆ, ದೇವರಿಗೆ ನಮಸ್ಕರಿಸಿ, "ನನಗೆ ನೀನು ಬೇಕು! ನಿನಗಿಂತ ಉತ್ತಮವಾದದ್ದು ಯಾವುದೂ ಇಲ್ಲ. ನಿನಗಿಂತಲೂ ಕಡಿಮೆಯಾದುದನ್ನು ನಾನು ನಿನ್ನ ಬಳಿ ಕೇಳಬಹುದೇ?" ಎಂದು ನಾವು ಹೇಳುವಂತಿರಬೇಕು! ಇದೇ ನಿಜವಾದ ಅರ್ಪಣಾ ಭಾವದ ಪ್ರಾರ್ಥನೆ! ●


# ಬಿಳುಪು

ಭಾವನೆಗಳು

**ಸಂಚಿಕೆ 8 ಸಂಪುಟ 2**
**ಜುಲೈ 2025**

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು
**ಕೆ.ಆರ್. ನಾಗರಾಜನ್**

ಲೇಖಕರು
**ತ.ಸೆ. ಜ್ಞಾನವೇಲ್**

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ
**ಡಾ. ತಮಿಳ್ ಸೆಲ್ವಿ**
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ರಚನೆ ಮತ್ತು ವಿನ್ಯಾಸ
**ತರು ಮೀಡಿಯಾ (ಪ್ರೈ) ಲಿ.,**
10/55, ರಾಜು ಸ್ಟ್ರೀಟ್
ವೆಸ್ಟ್ ಮಾಂಬಳಂ
ಚೆನ್ನೈ 600 033



ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್‌ಜಾಲ ತಾಣಗಳಲ್ಲಿ ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.



Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604.
Ph: 0421-4304106

# ಸಂಪೂರ್ಣ ಬದ್ಧತೆಯಿಂದ ಕನಸು ಕಾಣಿರಿ!

ಪಂದ್ಯಗಳಲ್ಲಿ ಭಾಗವಹಿಸುವ ಕುದುರೆಗಳಿಗೆ ತರಬೇತು ನೀಡುವ ಒಬ್ಬ ಕುದುರೆ ತರಬೇತುದಾರನಿಗೆ ಮಗನಾಗಿ ಜನಿಸಿದವನೇ ಮಾಂಟಿ ರಾಬರ್ಟ್ಸ್. ಅವನ ಅಪ್ಪ ಅಮೆರಿಕದ ಪ್ರತಿಯೊಂದು ನಗರಕ್ಕೂ ಪ್ರಯಾಣ ಮಾಡಿ, ಅಲ್ಲಿ ಕುದುರೆಗಳಿಗೆ ತರಬೇತಿ ನೀಡುತ್ತಿದ್ದರು. ಅವರು ಕುದುರೆಗಳನ್ನು ಸಾಕುವ ಅದರ ಮಾಲೀಕರಿಗೆ ತನ್ನ ಕೌಶಲ್ಯಗಳ ಬಗ್ಗೆ ವಿವರಿಸುತ್ತಿದ್ದರು ಮತ್ತು ಅವರ ಲಾಯದಲ್ಲಿರುವ. ಕುದುರೆಗಳಿಗೆ ಪಂದ್ಯದಲ್ಲಿ ಓಡಲು ತರಬೇತಿ ನೀಡುತ್ತಿದ್ದರು.

ಅವರೊಬ್ಬ ನುರಿತ ಕೋಚ್ ಆಗಿದ್ದರು. ಲಾಯದಲ್ಲಿರುವ ಕುದುರೆಗಳಲ್ಲಿ ಯಾವುವು ಪಂದ್ಯದಲ್ಲಿ ಭಾಗವಹಿಸಲು ಸೂಕ್ತವಾದವು ಎಂಬುದನ್ನು ಅವರು ಒಂದು ಅಥವಾ ಎರಡು ದಿನಗಳಲ್ಲೇ ಕಂಡುಹಿಡಿದು ಬಿಡುತ್ತಿದ್ದರು. ಅವುಗಳನ್ನು ಪ್ರತ್ಯೇಕವಾಗಿ ಇರಿಸಿ ಅವುಗಳಿಗೆ ಪರಿಪೂರ್ಣವಾಗಿ ತರಬೇತಿ ನೀಡುತ್ತಿದ್ದರು. ಕೆಲವು ತಿಂಗಳ ತರಬೇತಿಯ ನಂತರ, ಅವು ಪಂದ್ಯದಲ್ಲಿ ಗೆಲ್ಲುವ ಸಾಮರ್ಥ್ಯವನ್ನು ಹೊಂದುತ್ತಿದ್ದವು ಮತ್ತು ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಗೆಲ್ಲಲು ಪ್ರಾರಂಭಿಸುತ್ತಿದ್ದವು. ಕುದುರೆಗಳ ಮಾಲೀಕರು ತುಂಬಾ ಚಾಣಾಕ್ಷರು. ಅವರು ತಮ್ಮ ಕೆಲಸಗಾರರಿಗೆ ಮಾಂಟಿ ರಾಬರ್ಟ್ಸ್ ಅವರ ತಂದೆ ಕುದುರೆಗಳಿಗೆ ಹೇಗೆಲ್ಲಾ ತರಬೇತಿ ನೀಡುತ್ತಾರೆ ಎಂಬುದನ್ನು ನೋಡಿ ಕಲಿತುಕೊಳ್ಳುವಂತೆ ತಾಕೀತು ಮಾಡುತ್ತಿದ್ದರು. ಅದರ ನಂತರ ಅವರು ಇವರನ್ನು ಅಲ್ಲಿಂದ ಕಳಿಸಿ ಬಿಡುತ್ತಿದ್ದರು.


ಇದೆಲ್ಲದರ ಪರಿಣಾಮವಾಗಿ, ಮಾಂಟಿ ರಾಬರ್ಟ್ಸ್ ಹತ್ತನೇ ತರಗತಿ ಮುಗಿಸುವ ಹೊತ್ತಿಗೆ ಹಲವಾರು ಊರುಗಳಲ್ಲಿ ಹಲವು ಶಾಲೆಗಳಿಗೆ ಸ್ಥಳಾಂತರಗೊಂಡಿದ್ದರು. ಒಂದು ಶಾಲೆಯಲ್ಲಿ ಅಲ್ಲಿನ ಎಲ್ಲಾ ವಿದ್ಯಾರ್ಥಿಗಳಿಗೂ ಶಿಕ್ಷಕರು ಒಂದು ಹೋಂವರ್ಕ್ ನೀಡಿದ್ದರು. 'ನೀವು ಬೆಳೆದು ದೊಡ್ಡವರಾದ ಮೇಲೆ ಏನಾಗಲು ಬಯಸುತ್ತೀರಿ? ನಿಮ್ಮ ಕನಸು ಏನು? ಅದನ್ನು ವಿವರಿಸಿ ಪ್ರಬಂಧವನ್ನು ಬರೆದು ತರಬೇಕು' ಎಂದು ಅವರು ಹೇಳಿದ್ದರು.

ರಜಾದಿನಗಳಲ್ಲಿ ಮಾಂಟಿ ತನ್ನ ತಂದೆಯೊಂದಿಗೆ ಕುದುರೆ ತರಬೇತಿ ಲಾಯಗಳಿಗೆ ಹೋಗುತ್ತಿದ್ದ. ಅವನಿಗೂ ಕುದುರೆಗಳೆಂದರೆ ಪ್ರಾಣ. ಕುದುರೆಗಳು ತಮ್ಮ ದೇಹವನ್ನು ಅತ್ತಿತ್ತ ಆಡಿಸಿ, ತಮ್ಮದೇ ಆದ ಬಾಡಿ ಲಾಂಗ್ವೇಜ್ ಮೂಲಕ ಪರಸ್ಪರ ಸಂವಹನ ನಡೆಸುತ್ತವೆ ಎಂಬುದನ್ನು ಅವನು ಕಂಡುಕೊಂಡ. ಭಯ, ಗೊಂದಲ, ಪ್ರೀತಿ, ಆನಂದ ಇತ್ಯಾದಿ ಭಾವನೆಗಳನ್ನು ಅವು ಹೇಗೆ ಪರಸ್ಪರ ವ್ಯಕ್ತಪಡಿಸಿಕೊಳ್ಳುತ್ತವೆ ಎಂಬುದನ್ನು ಅವನು ಸೂಕ್ಷ್ಮವಾಗಿ ಗಮನಿಸಿ ಅರ್ಥ ಮಾಡಿಕೊಳ್ಳತೊಡಗಿದ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವನಿಗೆ ಕುದುರೆಗಳ ಭಾಷೆ ತಿಳಿಯತೊಡಗಿತು. ಅಷ್ಟು ಚಿಕ್ಕ ವಯಸ್ಸಿನಲ್ಲೇ ಅವನು ಕುದುರೆಗಳೊಂದಿಗೆ ಮಾತನಾಡಲು ಮತ್ತು ಅವುಗಳನ್ನು ಪಳಗಿಸಲು ಕಲಿತಿದ್ದ. ಅವನ ಕನಸು ತನ್ನ ತಂದೆಗಿಂತಲೂ ತಾನು ಉತ್ತಮ ಕುದುರೆ ತರಬೇತುದಾರನಾಗಬೇಕು ಎಂಬುದೇ ಆಗಿತ್ತು.

'ನಿಮ್ಮ ಕನಸಿನ ಬಗ್ಗೆ ವಿವರವಾಗಿ ಬರೆದು ತನ್ನಿ' ಎಂದು ಶಿಕ್ಷಕರು ಹೇಳಿದ ರಾತ್ರಿ ಅವನು ತನ್ನ ಕನಸನ್ನು ವಿವರಿಸಿ ಸುಮಾರು ಏಳು ಪುಟಗಳ ವಿವರಣಾತ್ಮಕ ಪ್ರಬಂಧವನ್ನು ಬರೆದು ತೆಗೆದುಕೊಂಡು ಹೋದ. ಒಂದು ದೊಡ್ಡ ಕುದುರೆ ಲಾಯದ ಮಾಲೀಕನಾಗಿ, ಅಲ್ಲಿರುವ ಕುದುರೆಗಳಿಗೆ ತರಬೇತಿ ನೀಡುವ ಮತ್ತು ಅನೇಕ ಪಂದ್ಯಗಳಲ್ಲಿ ಅವು ಗೆಲ್ಲುವ ತನ್ನ ಕನಸನ್ನು ಅವನು ಭಾವಪೂರ್ಣವಾಗಿ ವಿವರಿಸಿ ಬರೆದಿದ್ದ. ಆ ಕನಸು ಎಷ್ಟು ಸುಂದರವಾಗಿತ್ತೆಂದರೆ, ಆ ಪ್ರಬಂಧದ ಕೊನೆಯಲ್ಲಿ ಅವನು ತನ್ನ ಕುದುರೆ ಸಾಕಣೆ ಕೇಂದ್ರದ ಸುಂದರ ಚಿತ್ರವನ್ನೂ ಬಿಡಿಸಿದ್ದ. ಅದು ಎಲ್ಲವನ್ನೂ ಹೊಂದಿತ್ತು. 200 ಎಕರೆ ಭೂಮಿಯಲ್ಲಿ ಒಂದು ಕುದುರೆ ಲಾಯ, ಅಶ್ವಶಾಲೆಗಳು, ಕುದುರೆಗಳು ಓಡುವ ತರಬೇತಿ ಪಡೆಯುವ ರನ್ನಿಂಗ್ ಟ್ರ್ಯಾಕ್‌ಗಳು, ಕುದುರೆಗಳನ್ನು ಸ್ನಾನ ಮಾಡಿಸುವ ಕೊಳಗಳು ಹೀಗೆ ಸಕಲವೂ ಆ ಚಿತ್ರದಲ್ಲಿದ್ದವು. ಆ ಕುದುರೆ ಲಾಯದ ನಡುವೆ 4000 ಚದುರ ಅಡಿಗಳ ಒಂದು ಸುಂದರವಾದ ಮನೆಯನ್ನೂ ಅವನು ತನ್ನ ವಾಸಕ್ಕಾಗಿ ಎಂದು ಬಿಡಿಸಿದ್ದ! 'ಇದೇ ನನ್ನ ಕನಸಿನ ಕುದುರೆ ಲಾಯ!' ಎಂದು ಅದಕ್ಕೆ ಶೀರ್ಷಿಕೆಯನ್ನೂ ನೀಡಿದ್ದ!

ಎರಡು ದಿನಗಳ ನಂತರ ತರಗತಿಯ ಶಿಕ್ಷಕರು ಅವನನ್ನು ಕರೆದು, 'ನಿನಗೆ ನಾನು ಸೊನ್ನೆ ಅಂಕಗಳನ್ನು ಕೊಡುತ್ತೇನೆ' ಎಂದರು. ಅದನ್ನು ಕೇಳಿ ಅವನಿಗೆ ತೀವ್ರ ನಿರಾಶೆಯಾಯಿತು. ಏಕೆ?' ಎಂದು ಪ್ರಶ್ನಿಸಿದ. 'ನಿನ್ನ ಕನಸು ನಂಬಲರ್ಹವಾಗಿಲ್ಲ. ನಿನ್ನ ಬಳಿ ಹಣ ಇಲ್ಲ, ಒಂದು ಬಡ ಕುಟುಂಬದಲ್ಲಿ ಜನಿಸಿರುವವನು ನೀನು. ನಿನ್ನ ತಂದೆಗೆ ಯಾವುದೇ ಆಸ್ತಿಯೂ ಇಲ್ಲ. ನಿಮಗೆ ವಾಸಿಸಲು ಸ್ವಂತ ಮನೆ ಕೂಡ ಇಲ್ಲ. ಒಂದು ಕುದುರೆ ಲಾಯವನ್ನು ನಿರ್ಮಿಸಬೇಕಾದರೆ ಅದಕ್ಕೆ ತುಂಬಾ ಹಣ ಇರಬೇಕು. ಮೊದಲು ವಿಶಾಲವಾದ ಜಾಗವನ್ನು ಕೊಳ್ಳಬೇಕು. ಒಳ್ಳೆಯ ಜಾತಿಯ ಉತ್ತಮವಾದ ಕುದುರೆಗಳಿಗೆ ತುಂಬ ಹಣ ನೀಡಿ ಅವುಗಳನ್ನು ಕೊಳ್ಳಬೇಕು. ಅವು ಪಂದ್ಯಗಳಲ್ಲಿ ಭಾಗವಹಿಸಲು ಅವುಗಳಿಗೆ ಲೈಸೆನ್ಸ್ ಕೂಡ ಪಡೆದುಕೊಳ್ಳಬೇಕು. ಇವೆಲ್ಲವನ್ನೂ ಯೋಚಿಸಿ ನೋಡಿದರೆ ಇವು ನಿಜವಾಗಿಯೂ ನಡೆಯಲು ಸಾಧ್ಯವೇ ಎನ್ನಿಸುತ್ತದೆ. ಆದ್ದರಿಂದ ಈ ಪ್ರಬಂಧವನ್ನು ನಿನಗೇ ಹಿಂದಿರುಗಿ





ಕೊಡುತ್ತೇನೆ. ನಿನ್ನ ಸಾಮರ್ಥ್ಯಕ್ಕೆ ತಕ್ಕಂತಹ ನಂಬಲರ್ಹವಾದ ಬೇರೊಂದು ಪ್ರಬಂಧವನ್ನು ಬರೆದು ತೆಗೆದುಕೊಂಡು ಬಾ!' ಎಂದು ಹೇಳಿ ಅದನ್ನು ಅವನಿಗೇ ಹಿಂದಿರುಗಿಸಿದರು.

ಮಾಂಟಿ ಅದನ್ನು ತೆಗೆದುಕೊಂಡು ದುಃಖದಿಂದ ಮನೆಗೆ ಹಿಂದಿರುಗಿದ. ಅವನು ತನ್ನ ತಂದೆಯ ಬಳಿ ನಡೆದ ಸಂಗತಿಯನ್ನೆಲ್ಲ ಹೇಳಿದ. "ಇದು ತುಂಬಾ ಮುಖ್ಯವಾದ ವಿಷಯ. ಯಾವುದಕ್ಕೂ ಆತುರಪಡಬೇಡ! ಇದು ನಿನ್ನ ಭವಿಷ್ಯದ ಬಗೆಗಿನ ಕನಸು. ನೀನು ಏನಾಗಬೇಕೆಂಬುದನ್ನು ನೀನೇ ನಿರ್ಧರಿಸ ಬೇಕು" ಎಂದು ಅಪ್ಪ ಹೇಳಿದರು.

ಮಾಂಟಿ ರಾತ್ರಿಯಿಡೀ ಯೋಚಿಸಿ ಮರುದಿನ ಸ್ಪಷ್ಟ ನಿರ್ಧಾರದಿಂದ ಶಾಲೆಗೆ ಹೋದ. ಅವನು ಅದೇ ಕನಸಿನ ಪ್ರಬಂಧವನ್ನು ಶಿಕ್ಷಕರಿಗೆ ಕೊಟ್ಟು, "ನಿಮ್ಮ ಅಂಕಗಳನ್ನು ನೀವೇ ಇಟ್ಟುಕೊಳ್ಳಿ, ನಾನು ನನ್ನ ಕನಸನ್ನು ಉಳಿಸಿಕೊಳ್ಳುತ್ತೇನೆ" ಎಂದು ಅವರಿಗೆ ಹೇಳಿದ.

ಮಾಂಟಿಯ ಕನಸು 20 ವರ್ಷಗಳಲ್ಲಿ ನನಸಾಯಿತು. ಅವನು ಬಿಡಿಸಿದ ಆಕಾರದಲ್ಲೇ ಕುದುರೆ ಲಾಯವನ್ನು ಅವನು ನಿರ್ಮಿಸಿದ. ಅದರ ಮಧ್ಯದಲ್ಲಿ ಒಂದು ಸುಂದರವಾದ ಮಹಲನ್ನು ನಿರ್ಮಿಸಿ ಅಲ್ಲಿಯೇ ವಾಸಿಸತೊಡಗಿದ. ಒಂದು ದಿನ ಅವನು ತಾನು ಓದಿದ ಆ ಶಾಲೆಗೆ ಹೋಗಿ, ತನ್ನ ಕನಸಿನ ಪ್ರಬಂಧವನ್ನು ಹುಡುಕಿ ತೆಗೆದುಕೊಂಡು ಬಂದು, ಅದಕ್ಕೆ ಸುಂದರವಾಗಿ ಫ್ರೇಮ್ ಹಾಕಿಸಿ ತನ್ನ ಮನೆಯ ಹಾಲ್‌ನ ನಡುವೆ ಅದನ್ನು ತೂಗು ಹಾಕಿದ.

ಕೆಲವು ತಿಂಗಳುಗಳ ನಂತರ, ಅವನ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಈ ಕುದುರೆ ಲಾಯವನ್ನು ತೋರಿಸಲು ಕರೆತಂದರು. ಮಾಂಟಿ ಯಾವುದೇ ಕಹಿ ಭಾವವೂ ಇಲ್ಲದೆ ಅವರನ್ನು ಸ್ವಾಗತಿಸಿದ. "ಕ್ಷಮಿಸು ಮಾಂಟಿ! ನಿನ್ನಂತಹ ಅನೇಕ ಮಕ್ಕಳ ಕನಸುಗಳನ್ನು ನಾನು ಛಿದ್ರಗೊಳಿಸಿದ್ದೇನೆ. ನಾನು ಎಷ್ಟು ಜನರ ಕನಸುಗಳನ್ನು ಛಿದ್ರಗೊಳಿಸಿದ್ದೇನೆಂದು ನನಗೆ ತಿಳಿದಿಲ್ಲ. ಅದೃಷ್ಟವಶಾತ್, ನೀನು ನಿನ್ನ ಕನಸಿಗೆ ತುಂಬಾ ಬದ್ಧನಾಗಿದ್ದೆ. ಹಾಗಾಗಿ ನಾನು ಅದನ್ನು ಛಿದ್ರಗೊಳಿಸಲು ಸಾಧ್ಯವಾಗಲಿಲ್ಲ" ಎಂದು ಆ ಶಿಕ್ಷಕರು ಹೇಳಿದರು.

"ಯಾರು ಏನೇ ಹೇಳಿದರೂ ಪರವಾಗಿಲ್ಲ, ನಿಮ್ಮ ಹೃದಯದ ಮಾತನ್ನು ಆಲಿಸಿ. ನಿಮ್ಮ ಕನಸುಗಳನ್ನು ಯಾರೂ ನಾಶ ಮಾಡಲು ಬಿಡಬೇಡಿ" ಎಂದು ಈಗ ವಿಶ್ವವಿಖ್ಯಾತ ಕುದುರೆ ತರಬೇತುದಾರನಾಗಿರುವ ಮಾಂಟಿ ಹೇಳುತ್ತಾರೆ. ಅನೇಕ ದೇಶಗಳ ಅಧ್ಯಕ್ಷರು ಅವರನ್ನು ಭೇಟಿಯಾಗುವುದನ್ನು ಗೌರವವೆಂದು ಪರಿಗಣಿಸುತ್ತಾರೆ.

'ಪ್ರತಿಯೊಬ್ಬ ವ್ಯಕ್ತಿಗೂ ಸಾವಿರಾರು ಕನಸುಗಳಿರುತ್ತವೆ ಮತ್ತು ಪ್ರತಿಯೊಂದನ್ನೂ ಸಾಧಿಸಲು ಅವರು ಏನು ಬೇಕಾದರೂ ಮಾಡಬಹುದು. ಅವುಗಳಲ್ಲಿ ನೀವು ಒಂದನ್ನು ಸಾಧಿಸಿದರೂ, ನಿಮ್ಮ ಮನಸ್ಸು ಇನ್ನೊಂದನ್ನು ಹುಡುಕುತ್ತಾ ಓಡುತ್ತಲೇ ಇರುತ್ತದೆ'. ಇವು ಪ್ರಸಿದ್ಧ ಉರ್ದು ಕವಿ ಮಿರ್ಜಾ ಸುಲೇಮಾನ್ ಬರೆದ ಪ್ರಸಿದ್ಧ ಸಾಲುಗಳು. ಇದು ಎಲ್ಲರಿಗೂ ಅನ್ವಯಿಸುತ್ತದೆ. ಒಬ್ಬ ಯಶಸ್ವಿ ಕ್ರೀಡಾಪಟು, ಒಂದು ಸ್ಪರ್ಧೆಯ ನಂತರ, ಮರುದಿನವೇ ಮತ್ತೊಂದು ಸ್ಪರ್ಧೆಗಾಗಿ ತರಬೇತಿಯನ್ನು ಪ್ರಾರಂಭಿಸುತ್ತಾನೆ. ಆತ ಎಲ್ಲಿಯೂ ನಿಂತ ನೀರಾಗುವುದಿಲ್ಲ. ಮಗುವಿನಂತೆ ಕನಸು ಕಾಣಿರಿ, ನದಿಯಂತೆ ಹರಿಯುತ್ತಲೇ ಇರಿ!



# ಮಗುವಿನಂತೆ ಅರ್ಪಣಾಭಾವ ತೋರಿಸಿ!

ಯಾವುದೇ ವಿಷಯದಲ್ಲಾದರೂ ಆಸಕ್ತಿ ತೋರಿಸುವ ಮನಸ್ಸು ಯಾವ ವಯಸ್ಸಿನಲ್ಲಿ ಮೂಡುತ್ತದೆ? ಇದನ್ನು ತಿಳಿದುಕೊಳ್ಳುವುದಕ್ಕಾಗಿ ಅಮೆರಿಕದಲ್ಲಿ ಒಂದು ಪ್ರಯೋಗವನ್ನು ಮಾಡಿದರು. ಅಲ್ಲಿನ ಪ್ರಸಿದ್ಧ ಪತ್ರಿಕೆಯಾದ 'ವಾಷಿಂಗ್ಟನ್ ಪೋಸ್ಟ್' ಈ ಪ್ರಯೋಗವನ್ನು ನಡೆಸಿತು. ಈ ಪ್ರಯೋಗಕ್ಕೆ ಸಹಾಯ ಮಾಡಿದ ವ್ಯಕ್ತಿ ಜೋಶುವಾ ಬೆಲ್ ಎಂಬ ಸಂಗೀತಗಾರ.

ಜೋಶುವಾ, ಪ್ರಸಿದ್ಧ ಪಿಟೀಲು ವಾದಕ. ಆತ ಒಂದು ಸಭಾಂಗಣದಲ್ಲಿ ಸಂಗೀತ ಪ್ರದರ್ಶನ ನೀಡಲಿರುವುದು ತಿಳಿದರೆ, ಅನೇಕ ಜನರು ಟಿಕೆಟ್ ಖರೀದಿಸಲು ಪೈಪೋಟಿ ನಡೆಸುತ್ತಿದ್ದರು. ಸಭಾಂಗಣ ಭರ್ತಿಯಾಗಿರುತ್ತಿತ್ತು. ಬೋಸ್ಟನ್ ನಗರದ ಒಂದು ಸಭಾಂಗಣದಲ್ಲಿ ಅವರು ನಡೆಸಿದ ಸಂಗೀತ ಕಚೇರಿಯ ಟಿಕೆಟ್‌ನ ಬೆಲೆ 100 ಡಾಲರ್‌ಗಳು. ಎಲ್ಲಾ ಟಿಕೆಟ್‌ಗಳೂ ಮಾರಾಟವಾಗಿದ್ದವು ಮತ್ತು ಜನಸಂದಣಿ ತುಂಬಾ ಹೆಚ್ಚಾಗಿದ್ದರಿಂದ ಸಭಾಂಗಣದಲ್ಲಿ ಕುಳಿತುಕೊಳ್ಳಲು ಸ್ಥಳವಿರಲಿಲ್ಲ.

ಈ ಸಂಗೀತ ಕಛೇರಿ ನಡೆದ ಎರಡು ದಿನಗಳ ನಂತರ ಅವರು ತಮ್ಮ ಪ್ರಯೋಗವನ್ನು ನಡೆಸಿದರು. ಜೋಶುವಾ ಬೆಲ್ ತನ್ನ ಗುರುತು ಹಿಡಿಯಲಾಗದಂತೆ ರೂಪ ಮರೆಸಿಕೊಂಡು, ಮುಖವನ್ನು ಭಾಗಶಃ ಮುಚ್ಚುವಂತಹ ಟೋಪಿ ಧರಿಸಿ, ವಾಷಿಂಗ್ಟನ್‌ನ ಮೆಟ್ರೋಪಾಲಿಟನ್ ರೈಲು ಹತ್ತಿದರು. ಅವರು ರೈಲಿನ ಒಂದು ಸಬ್‌ವೇ ಬಳಿ ಪಿಟೀಲು ನುಡಿಸಲು ಬಂದಿದ್ದರು. ಎಲ್ಲರೂ ಅವಸರದಿಂದ ಕೆಲಸಕ್ಕೆ ಹೋಗುತ್ತಿದ್ದ ಬೆಳಗ್ಗಿನ ಸಮಯ ಅದು.

ಅನಿರೀಕ್ಷಿತ ಸ್ಥಳಗಳಲ್ಲಿ ನಾವು ಕಾಣುವ ಸೌಂದರ್ಯವನ್ನು ಆರಾಧಿಸುತ್ತೇವೆಯೇ? ನಾವು ಎಲ್ಲೇ ಕೇಳಿದರೂ ಒಳ್ಳೆಯ ಸಂಗೀತವನ್ನು ಆನಂದಿಸುತ್ತೇವೆಯೇ? ಅಥವಾ ಸ್ಥಳ ಮತ್ತು ಕಾಲಕ್ಕೆ ಅನುಗುಣವಾಗಿ ನಮ್ಮ ಅಭಿರುಚಿಗಳು ಬದಲಾಗುತ್ತವೆಯೇ? ಎಂಬುದನ್ನು ಕಂಡುಹಿಡಿಯಲು ಅವರು ಈ ಪರೀಕ್ಷೆಯನ್ನು ಮಾಡಿದರು.

ಆ ದಿನ ಜೋಶುವಾ ಸಬ್‌ವೇ ದಾರಿಯಲ್ಲಿ ಕುಳಿತು ಪಿಟೀಲು ನುಡಿಸಿದರು, ತಾವು ಸಾಮಾನ್ಯವಾಗಿ ನುಡಿಸುವ ಅದೇ 35 ಲಕ್ಷ ಡಾಲರ್‌ನ ಗ್ರ್ಯಾಂಡ್ ಪಿಟೀಲು ಬಳಸಿ. ಅದು ಪ್ರತಿಷ್ಠಿತ ಸ್ಥಳವಾಗಿರಲಿಲ್ಲ. ಅವರು ರೈಲ್ವೆ ಸುರಂಗದ ಒಂದು ಬದಿಯಲ್ಲಿ ಕುಳಿತು ಪಿಟೀಲು ನುಡಿಸುತ್ತಿದ್ದರು. ಕೆಲವು ಭಿಕ್ಷುಕರು ಸಾಮಾನ್ಯವಾಗಿ ಹೀಗೆ ಅಲ್ಲಿ ಮಾಡುತ್ತಿದ್ದುದುಂಟು. ಅಂದು ಜೋಶುವಾ, ಮಹಾನ್ ಸಂಗೀತ ಪ್ರತಿಭೆ 'ಬಾಚ್' ಅವರ ಪ್ರಸಿದ್ಧ ಗೀತ ಸಂಕಲನದ ಸಂಯೋಜನೆಗಳನ್ನು

45 ನಿಮಿಷಗಳ ಕಾಲ ನುಡಿಸಿದರು. ಆ ಅದ್ಭುತ ಸಂಗೀತವನ್ನು ಕೇಳಲು ಅನೇಕ ಜನರು ಸಂಗೀತ ಕಚೇರಿಗಳಲ್ಲಿ ಮುಂಗಡವಾಗಿ ಟಿಕೆಟ್‌ಗಳನ್ನು ಖರೀದಿಸುತ್ತಾರೆ. ಆದರೆ ಇಂದು ಅಲ್ಲಿ ಅವರು ಅವುಗಳನ್ನು ಸುಮ್ಮನೆ ನುಡಿಸುತ್ತಿದ್ದರು.

ಸಾವಿರಾರು ಜನರು ಆ ಸುರಂಗದ ಮೂಲಕ ಹಾದು ಹೋದರು. ಜೋಶುವಾ ನುಡಿಸಲು ಪ್ರಾರಂಭಿಸಿದ ಮೂರು ನಿಮಿಷಗಳ ನಂತರ, ಅಂತಹ ಸಂಗೀತವೊಂದನ್ನು ಇಲ್ಲಿ ನುಡಿಸಲಾಗುತ್ತಿದೆ ಎಂಬುದನ್ನು ಅವರು ಅರಿತುಕೊಂಡರು. ಆಗ ಒಬ್ಬನೇ ಒಬ್ಬ ಮಧ್ಯವಯಸ್ಕ ವ್ಯಕ್ತಿ ತನ್ನ ವೇಗವನ್ನು ಸ್ವಲ್ಪ ನಿಧಾನಗೊಳಿಸಿದನು ಮತ್ತು ಜೋಶುವಾ ಕಡೆಗೆ ತಿರುಗಿ ನೋಡಿದನು. ತಕ್ಷಣ ಆತ ತನ್ನ ಗಡಿಯಾರವನ್ನು ನೋಡಿಕೊಂಡು, ಮತ್ತೆ ವೇಗವಾಗಿ ನಡೆಯತೊಡಗಿದ. ಒಂದು ನಿಮಿಷದ ನಂತರ, ಒಬ್ಬ ಮಹಿಳೆ ತನ್ನ ನಡಿಗೆಯನ್ನು ನಿಧಾನಗೊಳಿಸಲಿಲ್ಲ, ನಿಲ್ಲಿಸಲೂ ಇಲ್ಲ, ಜೋಶುವಾ ಮುಂದೆ ನಡೆದು ಬರುತ್ತಿದ್ದಂತೆ, ಅವರ ಮುಂದಿದ್ದ ಕಾರ್ಪೆಟ್ ಮೇಲೆ ಒಂದು ಡಾಲರ್ ಅನ್ನು ಬೀಳಿಸಿ ಹಾಗೇ ಮುಂದೆ ಸಾಗಿದರು. ಕೆಲವು ನಿಮಿಷಗಳ ನಂತರ ಇನ್ನೂ ಯಾರೋ ಒಬ್ಬ ಬಂದ. ಆತ ಅಲ್ಲಿದ್ದ ಗೋಡೆಗೆ ಒರಗಿ ನಿಂತುಕೊಂಡು ಒಂದು ನಿಮಿಷ ಈ ಸಂಗೀತವನ್ನು ಆಲಿಸಿದ. ನಂತರ ತನ್ನ ಗಡಿಯಾರವನ್ನು ನೋಡಿಕೊಂಡ ಮತ್ತು ಬಹುತೇಕ ಓಡಲು ಪ್ರಾರಂಭಿಸಿದ.

ಆಶ್ಚರ್ಯಕರವಾದ ವಿಷಯವೆಂದರೆ, ಅಂದು ಜೋಶುವಾ ಅವರ ಸಂಗೀತವನ್ನು ನಿಜವಾಗಿಯೂ ಆಸ್ವಾದಿಸಿದ್ದು ಮಕ್ಕಳು. ಮೂರು ವರ್ಷದ ಒಬ್ಬ ಹುಡುಗ ತನ್ನ ತಾಯಿಯ ಕೈಯನ್ನು ಒದರಿ ಬಿಟ್ಟು ಓಡಿ ಬಂದು, ಜೋಶುವಾ ಅವರ ಮುಂದೆ ನಿಂತು ಅವರ ಸಂಗೀತವನ್ನು ಆನಂದಿಸಿದ. ಅವನ ತಾಯಿ ಬಹುತೇಕ ಅವನನ್ನು ಎಳೆದುಕೊಂಡು ಹೋಗಬೇಕಾಯಿತು. ಅವನಂತೆಯೇ ಉಳಿದ ಮಕ್ಕಳೂ ಕೂಡ ಸುರಂಗದ ಕೊನೆಯವರೆಗೂ ಹಿಂತಿರುಗಿ ನೋಡುತ್ತಾ ನಿಲ್ಲುತ್ತಿದ್ದರು. ಆ ಮಕ್ಕಳ ಪೋಷಕರು ಅವರನ್ನು ಬೆದರಿಸಿ ಎಳೆದೊಯ್ದರು.

45 ನಿಮಿಷಗಳ ಪಿಟೀಲು ವಾದನದಲ್ಲಿ ಕೇವಲ 6 ಜನರು ಮಾತ್ರ ನಿಂತು ಅದನ್ನು ಆಲಿಸಿದರು. 20 ಜನರು ಹಣ ನೀಡಿದರು.



ಸಾಮಾನ್ಯವಾಗಿ ಜೋಶುವಾ ಅವರು ಸಭಾಂಗಣದಲ್ಲಿ ಸಂಗೀತ ಕಾರ್ಯಕ್ರಮವನ್ನು ಮುಗಿಸಿದಾಗ, ಅಲ್ಲಿ ಚಪ್ಪಾಳೆ ಕಿವಿಗಡಚಿಕ್ಕುತ್ತದೆ. ಇಲ್ಲಿ ಅವರು ನುಡಿಸಿ ಮುಗಿಸಿದಾಗ ಯಾರೂ ಚಪ್ಪಾಳೆ ತಟ್ಟಲಿಲ್ಲ.

ಇದಕ್ಕೆ ಕಾರಣವೇನು? ಕೆಲಸ, ಪರಿಸರ ಇತ್ಯಾದಿಗಳನ್ನು ಅವಲಂಬಿಸಿ ನಮ್ಮ ಒಳಗೊಳ್ಳುವಿಕೆ ಬದಲಾಗುತ್ತದೆ ಆದರೆ, ಮಕ್ಕಳು ಯಾವುದೇ ಪರಿಸರದಲ್ಲೂ ಅವು ಒಂದೇ ಆಗಿರುತ್ತವೆ. ಅದಕ್ಕೇ, ನಾವು ತೊಡಗಿಸಿಕೊಳ್ಳುವಲ್ಲಿ ಮಗುವಿನಂತಿರಬೇಕು ಎಂದು ಹೇಳುವುದು.

ಮಕ್ಕಳು ಬೆಳೆದು ಹದಿಹರೆಯಕ್ಕೆ ಬಂದ ನಂತರವೂ ಸಾಮಾನ್ಯವಾಗಿ ಮಗುವಿನ ಹಾಗೆಯೇ ಇರುತ್ತಾರೆ. ಜಪಾನ್‌ನಲ್ಲಿ ಒಂದು ಪ್ರಯೋಗವನ್ನು ನಡೆಸಿ ಇದನ್ನು ಸಾಬೀತುಪಡಿಸಲಾಯಿತು. ಒಬ್ಬ ತಂದೆ ಮತ್ತು ಅವನ ಹದಿಹರೆಯದ ಮಗ ಉದ್ಯಾನವನದ ಬೆಂಚ್ ಮೇಲೆ ಕುಳಿತಿದ್ದರು. ಅವರನ್ನು ಪರೀಕ್ಷಿಸುವುದಕ್ಕಾಗಿ ಅವರ ಪಕ್ಕದಲ್ಲಿ ಒಬ್ಬ ತಾಯಿ ಮತ್ತು ಅವಳ ಚಿಕ್ಕಮಗ ಬಂದು ಕುಳಿತರು.

ಬಂದ ಕ್ಷಣದಿಂದಲೂ ಅಮ್ಮ, ‘ನೀನು ನಿನ್ನ ಅಣ್ಣನ ಹಾಗೆ ಒಳ್ಳೆಯ ಹುಡುಗನಲ್ಲ, ಚೆನ್ನಾಗಿ ಓದುವುದಿಲ್ಲ’ ಎಂದು ಬೈಯ್ಯುತ್ತಲೇ ಇದ್ದಳು. ಹುಡುಗ ತಲೆ ತಗ್ಗಿಸಿ ಸುಮ್ಮನೆ ಕುಳಿತಿದ್ದ. "ಗಣಿತದಲ್ಲಿ ಎಷ್ಟು ಮಾರ್ಕ್ ಬಂದಿದೆ?" ಎಂದು ತಾಯಿ ಕೇಳಿದಾಗ ಆ ಹುಡುಗ ತಲೆ ತಗ್ಗಿಸಿಕೊಂಡೇ “88 ಅಂಕಗಳು” ಎಂದ. "ಯಾಕೆ? ನಿನ್ನ ಅಣ್ಣನಂತೆ 100 ಮಾರ್ಕ್ಸ್ ತೆಗೆದುಕೊಳ್ಳಲು ಸಾಧ್ಯವಿಲ್ಲವೇ? ನಿನ್ನ ಬಗ್ಗೆ ಯೋಚಿಸಲೂ ನನಗೆ ನಾಚಿಕೆಯಾಗುತ್ತಿದೆ" ಎಂದು ತಾಯಿ ಬೈದಳು.

ಇದನ್ನು ಕಂಡ ತಂದೆಯ ಪಕ್ಕದಲ್ಲಿ ಕುಳಿತಿದ್ದ ಹದಿಹರೆಯದ ಬಾಲಕ ಆ ತಾಯಿಯನ್ನು ಪ್ರಶ್ನಿಸಲು ಮುಂದಾದ. ತಂದೆ ಅವನ ತೋಳುಗಳನ್ನು ಹಿಡಿದು, ‘ಬೇಡ, ಇದರಲ್ಲಿ ನೀನು ಹಸ್ತಕ್ಷೇಪ ಮಾಡುವುದು ಸರಿಯಲ್ಲ’ ಎಂದು ಕಣ್ಣಲ್ಲೇ ಅವನನ್ನು ಎಚ್ಚರಿಸಿದರು.

ಆದರೆ ತಾಯಿ ಆ ಚಿಕ್ಕ ಹುಡುಗನನ್ನು ತುಂಬಾ ಹೊತ್ತು ಹೀಗೆ ಗದರಿಸುತ್ತಲೇ ಇದ್ದಳು. ‘ನೀನು ನಿಷ್ಪ್ರಯೋಜಕ ಮತ್ತು ವಿಫಲ ಮನುಷ್ಯ’ ಎಂದು ಬೈದಾಗ ಈ ಯುವಕನಿಗೆ ಇನ್ನು ತಡೆದುಕೊಳ್ಳಲು ಸಾಧ್ಯವಾಗದೆ ಅಸಹನೆಯಿಂದ ಹೇಳಿದ: "ನೋಡಿ, ಮಗುವನ್ನು ಹೀಗೆ ಬೈಯುವುದು ಸರಿಯಲ್ಲ! ನೀವು ಅವನಿಗೆ ಬೆಂಬಲವಾಗಿ ನಿಲ್ಲಬೇಕು. ಅವನನ್ನು ಹೀಗೆ ನೋಯಿಸುವುದು ಎಂದರೆ ಏನು?" ಎಂದು ಕೇಳಿದ.

"ನಮ್ಮ ಕೌಟುಂಬಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡಲು ನೀವು ಯಾರು?" ತಾಯಿ ಸಿಟ್ಟಿನಿಂದ ಕೇಳುತ್ತಿದ್ದಂತೆ, ‘ಮಕ್ಕಳನ್ನು ಯಾರೇ ಅವಮಾನ ಮಾಡಿದರೂ ಪ್ರಶ್ನಿಸುತ್ತೇನೆ’ ಎಂದು ಯುವಕ ಹೇಳಿದ. ತಾಯಿ ಕೋಪದಿಂದ ಎದ್ದು ಅಲ್ಲಿಂದ ಹೊರಟಳು. ಆದರೆ ಹುಡುಗ ಇನ್ನೂ ಅಲ್ಲೇ ಕುಳಿತಿದ್ದ. ಯುವಕ ಆ ಹುಡುಗನ ಹತ್ತಿರ ಬಂದು "ನೀನು ಸೋತವನಲ್ಲ, ನೀನೂ ಗೆಲ್ಲಬಹುದು. ನಿನ್ನನ್ನು ನೀನು ಮೊದಲು ನಂಬು. ಅಮ್ಮ ನಿನ್ನ ಮೇಲಿನ ಕಾಳಜಿಯಿಂದ ಈ ರೀತಿ ಮಾತನಾಡ್ತಿದ್ದಾಳೆ, ತಪ್ಪು ತಿಳಿಯಬೇಡ" ಎಂದು ಸಾಂತ್ವನ ಹೇಳಿದ.

ಈ ಪ್ರಯೋಗದಲ್ಲಿ ಅನೇಕ ಯುವಕರು ಇದೇ ರೀತಿ ವರ್ತಿಸಿದರು. ಜೀವನದ ಬಿಕ್ಕಟ್ಟುಗಳು ನಂತರದ ದಿನಗಳಲ್ಲಿ ಅವರ ಇಂತಹ ಅರ್ಪಣಾ ಭಾವವನ್ನು ಕಡಿಮೆ ಮಾಡುತ್ತವೆ!




# ನಿಮ್ಮ ವಿಧಿಯನ್ನು ಬದಲಾಯಿಸುವ ಸಮರ್ಪಣಾಭಾವ!

ಒಬ್ಬ ವ್ಯಕ್ತಿ ರೈಲಿನಲ್ಲಿ ಭಿಕ್ಷೆ ಬೇಡುತ್ತಿದ್ದ. ಅವನು ಜನರು ಕಿಕ್ಕಿರಿದಿದ್ದ ಕಂಪಾರ್ಟ್‌ಮೆಂಟ್‌ನೊಳಗೆ ಹತ್ತಿ, ಎಲ್ಲರಿಗೂ ಕೇಳಿಸುವಂತೆ ಜೋರಾಗಿ ಮತ್ತು ಕಣ್ಣೀರು ತುಂಬಿದ ಧ್ವನಿಯಲ್ಲಿ ಕರುಣೆ ಮೂಡುವಂತೆ ಭಿಕ್ಷೆ ಬೇಡುತ್ತಿದ್ದ. ಮುಂದಿನ ನಿಲ್ದಾಣ ಬರುತ್ತಿದ್ದಂತೆ ಎಚ್ಚರಿಕೆಯಿಂದ ಇಳಿದು ಬಿಡುತ್ತಿದ್ದ. ಇಲ್ಲದಿದ್ದರೆ ಟಿಕೆಟ್ ನಿರೀಕ್ಷಕರ ಕಣ್ಣಿಗೆ ಬಿದ್ದು ಸಮಸ್ಯೆಯಾಗುತ್ತಿತ್ತು. ಇಷ್ಟೆಲ್ಲಾ ಸಮಸ್ಯೆಗಳ ನಡುವೆಯೂ ಅವನು ಭಿಕ್ಷೆ ಬೇಡಿದಾಗ, ರೈಲು ಬೋಗಿಯಲ್ಲಿರುವ ಸುಮಾರು 100 ಜನರಲ್ಲಿ ನಾಲ್ಕು ಅಥವಾ ಐದು ಜನರು ಮಾತ್ರ ಸಣ್ಣ ಚಿಲ್ಲರೆ ಹಣವನ್ನು ಕೊಡುತ್ತಿದ್ದರು. ಆ ಹಣದಿಂದ ಕೆಲವೊಮ್ಮೆ ಮಾತ್ರ ಏನಾದರೂ ಕೊಂಡು ತಿನ್ನಲು ಸಾಧ್ಯವಾಗುತ್ತಿತ್ತು. ಕೆಲವು ಸಲ ಕೇವಲ ಚಹಾ ಕುಡಿಯಲು ಮಾತ್ರ ಆ ಹಣ ಸಾಕಾಗುತ್ತಿತ್ತು. "ಈ ಲೋಕದಲ್ಲಿ ನನ್ನಷ್ಟು ದುಃಖಿತ ವ್ಯಕ್ತಿ ಬೇರೆ ಯಾರೂ ಇಲ್ಲ" ಎಂದು ಯೋಚಿಸುತ್ತಾ ಬೇಸರದಿಂದ ಅವನು ದಿನಗಳನ್ನು ಕಳೆಯುತ್ತಿದ್ದ.

ಒಂದು ದಿನ ರೈಲಿನಲ್ಲಿ ಭಿಕ್ಷೆ ಬೇಡುತ್ತಿದ್ದಾಗ, ಹೊಳೆಯುವ ಬಿಳಿ ಬಟ್ಟೆಗಳನ್ನು ಧರಿಸಿದ್ದ ಒಬ್ಬ ದೊಡ್ಡ ವ್ಯಕ್ತಿಯನ್ನು ಅವನು ನೋಡಿದ. 'ಈ ವ್ಯಕ್ತಿ ತುಂಬಾ ಶ್ರೀಮಂತನಾಗಿರಬೇಕು, ಇವರನ್ನು ಕೇಳಿದರೆ ಖಂಡಿತವಾಗಿಯೂ ನನಗೆ ಹಣ ಕೊಡುತ್ತಾನೆ'ಎಂದು ಭಾವಿಸಿ, ಅವರ ಬಳಿಗೆ ಹೋಗಿ ಭಿಕ್ಷೆ ಬೇಡಿದ. ಆ ದೊಡ್ಡ ಮನುಷ್ಯ ಇವನನ್ನು ನೋಡಿ, "ನೀನು ಯಾವಾಗಲೂ ಭಿಕ್ಷೆ ಬೇಡ್ತಾ ಇರುತ್ತೀಯಲ್ಲ, ಎಂದಾದರೂ ಯಾರಿಗಾದರೂ ಏನನ್ನಾದರೂ ಕೊಟ್ಟಿದ್ದೀಯಾ?" ಎಂದು ಕೇಳಿದ. ಇವನು ಹತಾಶೆಯಿಂದ, "ಸಾರ್, ನಾನೇ ಭಿಕ್ಷುಕ. ನನ್ನಿಂದ ಭಿಕ್ಷೆ ಬೇಡುವುದಕ್ಕಷ್ಟೇ ಸಾಧ್ಯ. ನನ್ನಿಂದ ಹೇಗೆ ಯಾರಿಗಾದರೂ ಏನಾದರೂ ಕೊಡಲು ಸಾಧ್ಯ ಹೇಳಿ?" ಎಂದು ಕೇಳಿದ. "ನೀನು ಯಾರಿಗೂ ಏನನ್ನೂ ನೀಡಲು ಸಾಧ್ಯವಾಗದಿದ್ದಾಗ, ಇತರರಿಂದ ಏನನ್ನೂ ಕೇಳುವ ಹಕ್ಕು ಕೂಡ ನಿನಗಿಲ್ಲ" ಎಂದು ಆ ವ್ಯಕ್ತಿ ದೃಢವಾಗಿ ಹೇಳಿದ.

ಇವನು ಮುಂದಿನ ನಿಲ್ದಾಣದಲ್ಲಿ ಇಳಿದು ಯೋಚಿಸಲು ಪ್ರಾರಂಭಿಸಿದ. ಆ ಮಾತುಗಳು ಇವನೊಳಗೆ ಏನೋ ಮಾಡಿದವು. 'ನಾನು ಯಾರಿಗೂ ಏನನ್ನೂ ಕೊಡಲು ಸಾಧ್ಯವಿಲ್ಲದ ಕಾರಣ, ನಾನು

ಭಿಕ್ಷೆ ಬೇಡಿದಾಗ ನನಗೆ ಹೆಚ್ಚು ಹಣ ಸಿಗುವುದಿಲ್ಲ. ನಾನು ಯಾರಿಗೂ ಏನನ್ನೂ ಕೊಡಲು ಅರ್ಹನಲ್ಲದಿರುವಾಗ ಇತರರಿಂದ ನಾನು ಏಕೆ ತೆಗೆದುಕೊಳ್ಳಬೇಕು? ನಾನು ಯಾರಿಗೂ ಏನನ್ನೂ ಕೊಡದೆ ಎಷ್ಟು ದಿನ ಹೀಗೆ ಜನರ ಬಳಿ ಕೇಳುತ್ತಲೇ ಇರುವುದು? ಜನರು ನನಗೆ ದಾನ ಮಾಡಿದಾಗ, ಪ್ರತಿಯಾಗಿ ನಾನೂ ಏನನ್ನಾದರೂ ನೀಡಬೇಕಲ್ಲವೇ?" ಎಂದು ಅವನು ಯೋಚಿಸಿದ.

ಏನು ನೀಡುವುದು? ಈ ಪ್ರಶ್ನೆಗೆ ಅವನ ಬಳಿ ಉತ್ತರವಿರಲಿಲ್ಲ. ಅವನು ಒಬ್ಬ ವೃದ್ಧ ಮಹಿಳೆ ಹೂವಿನ ಬುಟ್ಟಿಯೊಂದಿಗೆ ರೈಲನ್ನು ಹತ್ತುವುದನ್ನು ನೋಡಿದ. ಅವನಿಗೆ ತಕ್ಷಣ ಒಂದು ಉಪಾಯ ಹೊಳೆಯಿತು. ತಾನು ಭಿಕ್ಷೆ ಬೇಡಿ ಬಂದಿದ್ದ ಹಣವನ್ನೆಲ್ಲ ಆ ವೃದ್ಧೆಗೆ ಕೊಟ್ಟು ಅವಳ ಬಳಿ ಇದ್ದ ಗುಲಾಬಿಗಳನ್ನು ಕೊಂಡುಕೊಂಡ. ಅವನು ಆ ಅಜ್ಜಿಯ ಹಳೆಯ ಬೆತ್ತದ ಬುಟ್ಟಿಯನ್ನು ಎರವಲು ಪಡೆದು, ಅದರಲ್ಲಿ ಆ ಗುಲಾಬಿ ಹೂವುಗಳನ್ನು ಇಟ್ಟುಕೊಂಡು, ಮತ್ತೆ ರೈಲು ಹತ್ತಿ ಭಿಕ್ಷೆ ಬೇಡಿದ. ತನಗೆ ಚಿಲ್ಲರೆ ನಾಣ್ಯ ನೀಡಿದ ಪ್ರತಿಯೊಬ್ಬ ಪ್ರಯಾಣಿಕನಿಗೂ ಅವನು ಧನ್ಯವಾದ ಹೇಳಿ, ಒಂದೊಂದು ಗುಲಾಬಿ ಹೂವನ್ನು ನೀಡಿದ. ಕೆಲವರು ನಿರಾಕರಿಸಿದರು; ಕೆಲವರು ಆಶ್ಚರ್ಯದಿಂದ ತೆಗೆದುಕೊಂಡರು; ಕೆಲವರು ಎರಡು ಹೂವುಗಳನ್ನು ಸಹ ಆರಿಸಿಕೊಂಡರು. ಅವನು ಎಲ್ಲವನ್ನೂ ನಗುನಗುತ್ತಾ ಸ್ವೀಕರಿಸಿದ. ಆ ದಿನ, ಅವನು ಭಿಕ್ಷೆ ಬೇಡುವ ಮೂಲಕ ಎಂದಿಗಿಂತ ಹೆಚ್ಚಿನ ಹಣವನ್ನು ಸಂಗ್ರಹಿಸಿರುವುದನ್ನು ಗಮನಿಸಿದ.

ಮುಂದಿನ ದಿನಗಳಲ್ಲಿ ಅವನು ಇದನ್ನೇ ಮುಂದುವರೆಸಿದ. 'ಚಿಲ್ಲರೆ ನಾಣ್ಯ ಕೊಟ್ಟರೆ ಹೂವು ಕೊಡುವ ವಿಚಿತ್ರ ಭಿಕ್ಷುಕ' ಎಂದು ರೈಲಿನಲ್ಲಿ ಅವನು ಪ್ರಸಿದ್ಧನಾದ. ಈಗ ಅವನಿಗೆ ಮೊದಲಿಗಿಂತ ಹೆಚ್ಚು ಹಣ ಸಿಗತೊಡಗಿತು. ಈಗ ಅವನಿಂದ ದಿನವೂ ಚೆನ್ನಾಗಿ ಊಟ ಮಾಡಲು ಸಾಧ್ಯವಾಗುತ್ತಿತ್ತು. ಒಂದು ದಿನ ಅವನು ರೈಲಿನಲ್ಲಿ ಭಿಕ್ಷೆ ಬೇಡುತ್ತಿದ್ದಾಗ ಅದೇ ದೊಡ್ಡ ಮನುಷ್ಯ ರೈಲಿನಲ್ಲಿ ಕುಳಿತಿರುವುದನ್ನು ನೋಡಿದ. ಅವರ ಬಳಿ ಹೋಗಿ, "ಇಂದು ನಿಮಗೆ ಕೊಡಲು ನನ್ನ ಬಳಿ ಹೂವುಗಳಿವೆ" ಎಂದು ಹೇಳಿ ಹೂವುಗಳನ್ನು ಅವರ ಮುಂದೆ ಹಿಡಿದ.

ಆ ದೊಡ್ಡ ಮನುಷ್ಯ ಹಣ ಕೊಟ್ಟು ಎರಡು ಹೂವುಗಳನ್ನು ತೆಗೆದುಕೊಂಡು, "ನೀನು ಇನ್ನೂ ಯಾಕೆ ಭಿಕ್ಷೆ ಬೇಡುತ್ತಿದ್ದೀಯಾ? ನಾನು ಕೊಡುವ ಹಣಕ್ಕೆ ಪ್ರತಿಯಾಗಿ ನೀನು ಹೂವು ಕೊಡುತ್ತಿದ್ದೀಯ. ಈಗ ನೀನೂ ನನ್ನಂತೆ ವ್ಯಾಪಾರಿಯಾಗಿರುವೆ" ಎಂದು ಹೇಳಿದ. ಆ ದಿನ, ಆ ಭಿಕ್ಷುಕ ತನ್ನ ಬದುಕಿನಲ್ಲಿ ಏನೋ ಸ್ವಲ್ಪ ಬೆಳಕು ಕಾಣಿಸಿದಂತಹ ಭಾವನೆಯೊಂದಿಗೆ ರೈಲಿನಿಂದ ಇಳಿದ. ತನ್ನ ಜೀವನವನ್ನು ಬದಲಾಯಿಸಬಲ್ಲ ಯಶಸ್ಸಿನ ಹಾದಿ ತೆರೆದಿದೆ ಎಂದು ಅವನು ಭಾವಿಸಿದ.

ಐದು ವರ್ಷಗಳ ನಂತರ, ಆ ದೊಡ್ಡ ಮನುಷ್ಯ ಅದೇ ರೈಲಿನಲ್ಲಿ ಪ್ರಯಾಣಿಸುತ್ತಿದ್ದ. ಉತ್ತಮ ಗುಣಮಟ್ಟದ ಬಿಳಿಯ ಧೋತಿ ಶರ್ಟ್ ಧರಿಸಿದ್ದ ಒಬ್ಬ ವ್ಯಕ್ತಿ ಬಂದು ಅವರ ಪಕ್ಕದಲ್ಲಿ ಬಂದು ಕುಳಿತ. ಪಕ್ಕದಲ್ಲಿದ್ದ ಇವರನ್ನು ನೋಡಿ ಆಶ್ಚರ್ಯಪಟ್ಟು, ಎದ್ದು ನಿಂತು ಕೈಗಳನ್ನು ಜೋಡಿಸಿ ನಮಸ್ಕರಿಸಿ, "ನೀವು ನನ್ನನ್ನು ಗುರುತಿಸಬಲ್ಲಿರಾ?" ಎಂದು ಕೇಳಿದ. ಆ ದೊಡ್ಡ ಮನುಷ್ಯರು ತುಟಿಗಳನ್ನು ಬಿಗಿದುಕೊಂಡು, "ನಾನು ನಿಮ್ಮನ್ನು ನೋಡುತ್ತಿರುವುದು ಇದೇ ಮೊದಲು" ಎಂದು ಹೇಳಿದರು.

"ಇಲ್ಲ ಸಾರ್! ಇದು ಮೂರನೇ ಬಾರಿ" ಎಂದು ಆ ಹಳೆಯ ಭಿಕ್ಷುಕ ಹೇಳಿದ. ಹಳೆಯ ಘಟನೆಗಳನ್ನು ನೆನಪಿಸಿ, "ಅಂದು ನಾನು ವ್ಯಾಪಾರಿಯಾದೆನೆಂದು ನೀವು ಹೇಳಿದಿರಿ. ಅದರಂತೆಯೇ ಇಂದು ನಾನು ದೊಡ್ಡ ಹೂವಿನ ವ್ಯಾಪಾರಿಯಾಗಿದ್ದೇನೆ. ನಾನು ಹಳ್ಳಿಹಳ್ಳಿಗೆ ಹೋಗಿ, ಹೂವುಗಳನ್ನು ಖರೀದಿಸಿ ಮಾರುಕಟ್ಟೆಗಳಿಗೆ ಕಳುಹಿಸುತ್ತೇನೆ. ಈಗ ನನ್ನ ಬಳಿ 100 ಜನರು ಕೆಲಸ ಮಾಡುತ್ತಿದ್ದಾರೆ. ನೀವು ಹೇಳಿದ್ದರಿಂದಲೇ ಈ ಎಲ್ಲಾ ಬದಲಾವಣೆಗಳೂ ಸಂಭವಿಸಿದವು. ನಾನು ನನ್ನನ್ನು ಭಿಕ್ಷುಕ ಎಂದು ಭಾವಿಸುವವರೆಗೂ ನಾನು ಭಿಕ್ಷುಕನಾಗಿಯೇ ಇದ್ದೆ. ನಾನು ವ್ಯಾಪಾರಿ ಎಂದು ಅರಿತುಕೊಂಡ ಕ್ಷಣದಿಂದ ನನ್ನ ಜೀವನ ಬದಲಾಯಿತು" ಎಂದು ಹೇಳಿದ. ದೊಡ್ಡ ಮನುಷ್ಯ ಪರಮಾನಂದದಿಂದ, "ನಾವು ಏನನ್ನು ನಂಬುತ್ತೇವೋ ಅದೇ ಆಗುತ್ತೇವೆ..." ಎಂದು ಇವನ ಕೈಕುಲುಕಿದರು.

ನಾವು ಸಮರ್ಪಣಾ ಭಾವದಿಂದ ಏನೇ ಮಾಡಿದರೂ, ಅದೇ ನಾವು ಆಗುತ್ತೇವೆ. ಪೂರ್ಣ ಸಮರ್ಪಣಾ ಭಾವದಿಂದ ನಮ್ಮ ವಿಧಿಯನ್ನೇ ಸಕ್ರಿಯವಾಗಿ ಬದಲಾಯಿಸಲು ಕೆಲವು ಮಾರ್ಗಗಳು ಇಲ್ಲಿವೆ:


❖ ಸಮುದ್ರವು ನೀರಿನಿಂದ ತುಂಬಿದ್ದರೂ, ಅದರ ಮೇಲೆ ಸಾಗುವ ಹಡಗು ಅನುಮತಿಸಿದರೆ ಮಾತ್ರವೇ ಸಮುದ್ರದ ನೀರು ಅದರೊಳಗೆ ಪ್ರವೇಶಿಸಬಹುದು. ಹಾಗೆಯೇ ನಮ್ಮ ಚಿಂತೆಗಳು ಮತ್ತು ಗೊಂದಲಗಳು ನಮ್ಮ ಅನುಮತಿಯಿಲ್ಲದೆ ನಮ್ಮ ಮನಸ್ಸಿನಲ್ಲಿ ಬಂದು ಕುಳಿತುಕೊಳ್ಳಲು ಸಾಧ್ಯವಿಲ್ಲ. ಬಿಕ್ಕಟ್ಟು ಎಷ್ಟೇ ಭೀಕರವಾಗಿದ್ದರೂ, ವೈಫಲ್ಯ ಎಷ್ಟೇ ಕೆಟ್ಟದ್ದಾಗಿದ್ದರೂ, ಅದಕ್ಕಾಗಿ ಚಿಂತಿಸಬಾರದು.

❖ ವೈಫಲ್ಯದಿಂದ ಬೇಸರ ಹೊಂದಬೇಕಾಗಿಲ್ಲ. ಏಕೆಂದರೆ ವೈಫಲ್ಯಗಳಿಲ್ಲದೆ ಯಾವುದೇ ಯಶಸ್ಸು ಸಾಧ್ಯವಿಲ್ಲ. ನಿಮ್ಮ ಮನಸ್ಸನ್ನು ಸದಾ ಹೊಸ ಚೈತನ್ಯದಿಂದ ಇರಿಸಿಕೊಳ್ಳಿ. ಏನು ಬೇಕಾದರೂ ಸಾಧಿಸಬಹುದು. ಜೀವನದಲ್ಲಿ ಯಾವುದೂ ಅಸಾಧ್ಯವಲ್ಲ. ನಂಬಿಕೆ ಇರಲಿ. ಆತ್ಮವಿಶ್ವಾಸವಿದ್ದರೆ ಏನು ಬೇಕಾದರೂ ಸಾಧಿಸಬಹುದು.

❖ ಆಲೋಚನೆಗಳು ಸಕಾರಾತ್ಮಕವಾಗಿರಬೇಕು. ಗುರಿಗಳು ಉನ್ನತವಾಗಿರಬೇಕು. ಕೇವಲ ಆಲೋಚನೆಯಿಂದ ಯಶಸ್ಸು ಸಿಗುವುದಿಲ್ಲ. ಅದನ್ನು ಸಾಧಿಸಲು ನೀವು ಯೋಜನೆ ರೂಪಿಸಬೇಕು. ನಿರಂತರ ಪ್ರಯತ್ನಗಳನ್ನು ಮಾಡಬೇಕು.

❖ ನೀವು ಒಂದು ಚಟುವಟಿಕೆಯಲ್ಲಿ ಆಸಕ್ತಿ ಹೊಂದಿದ್ದರೆ, ಆ ಪ್ರಯತ್ನವು ತಾನಾಗಿಯೇ ಬರುತ್ತದೆ. ಅದರೊಂದಿಗೆ ಕಠಿಣ ಪರಿಶ್ರಮವೂ ಇರಬೇಕು. ಪ್ರಯತ್ನ ಮತ್ತು ಕಠಿಣ ಪರಿಶ್ರಮದಿಂದ ಪ್ರಗತಿ ನಿಶ್ಚಿತ.

❖ ನಾವು ಆಗಾಗ್ಗೆ ಗೊಂದಲಕ್ಕೊಳಗಾಗಬಾರದು ಮತ್ತು "ಬೇರೆ ಏನಾದರೂ ಮಾಡುವುದರಿಂದ ನಾವು ವೇಗವಾಗಿ ಗೆಲ್ಲಬಹುದು" ಎಂದು ಯೋಚಿಸಿ ದಾರಿ ತಪ್ಪಬಾರದು. ಸ್ಪಷ್ಟವಾಗಿ ಯೋಜಿಸಿ ಗುರಿಯನ್ನು ಮೊದಲೇ ನಿರ್ಣಯಿಸಿಕೊಳ್ಳಬೇಕು. ನಿಮ್ಮ ಗುರಿ ಸಾಧಿಸುವವರೆಗೆ ನೀವು ತಾಳ್ಮೆಯಿಂದಿರಬೇಕು. ತಮ್ಮ ಗುರಿಗಳನ್ನು ಬಿಟ್ಟು ಕೊಡದವರು ಖಂಡಿತವಾಗಿಯೂ ಮೇಲೇರುತ್ತಾರೆ. ●





## ದೌರ್ಬಲ್ಯಗಳು ನೋಯಿಸುವುದಿಲ್ಲ!

ಏನನ್ನಾದರೂ ಮಾಡಲು ಬದ್ಧನಾಗಿರುವ ವ್ಯಕ್ತಿಯ ಯಶಸ್ಸನ್ನು ಯಾವುದೇ ದೌರ್ಬಲ್ಯವೂ ತಡೆಯಲು ಸಾಧ್ಯವಿಲ್ಲ. ಪ್ರಸಿದ್ಧ ಸಂಗೀತ ಪ್ರತಿಭೆ ಬೀಥೋವನ್ ಹುಟ್ಟು ಕಿವುಡರಾಗಿದ್ದರು. "ಸಂಗೀತ ಜ್ಞಾನವೇ ಇಲ್ಲದ ವ್ಯಕ್ತಿ" ಎಂದು ಎಲ್ಲರೂ ಚಿಕ್ಕ ವಯಸ್ಸಿನಲ್ಲಿಯೇ ಅವರನ್ನು ಅಪಹಾಸ್ಯ ಮಾಡುತ್ತಿದ್ದರು. ಆದರೆ ಮುಂದೆ ಅವರನ್ನು ವಿಶ್ವದ ಶ್ರೇಷ್ಠ ಸಂಗೀತದ ಸೃಷ್ಟಿಕರ್ತ ಎಂದು ಗುರುತಿಸಲಾಯಿತು. ಅಂತೆಯೇ, ಫ್ರಾಂಕ್ಲಿನ್ ರೂಸ್ವೆಲ್ಟ್ ಅವರನ್ನು ಅಮೆರಿಕದ ಶ್ರೇಷ್ಠ ಅಧ್ಯಕ್ಷರಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ. ಅವರು ತಮ್ಮ ಅಧಿಕಾರದ ಅವಧಿಯಲ್ಲಿ ಅನಾರೋಗ್ಯಕ್ಕೆ ಒಳಗಾದರು ಮತ್ತು ಗಾಲಿ ಕುರ್ಚಿಯಲ್ಲಿ ಕುಳಿತೇ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದರು. ಇಷ್ಟಾಗಿಯೂ ಅವರು ಎರಡನೇ ಮಹಾಯುದ್ಧದಲ್ಲಿ ಅಮೇರಿಕನ್ ಪಡೆಗಳನ್ನು ಮುನ್ನಡೆಸಿದರು ಮತ್ತು ಅದರಲ್ಲಿ ಗೆಲುವನ್ನು ಸಾಧಿಸಿದರು.

## ಬಿಟ್ಟುಕೊಡದೆ ಮುಂದುವರೆಯಿರಿ!

ಈಜು ಕಲೆಯನ್ನು ಮೊದಲು ಕಲಿತ ವ್ಯಕ್ತಿಯ ಬಗ್ಗೆ ಯೋಚಿಸಿ. ಎಲ್ಲರಂತೆ ಅವನಿಗೂ ಸಮುದ್ರ ಮತ್ತು ನದಿಗಳೆಂದರೆ ಭಯವಿರುತ್ತಿತ್ತು. ಅವನು ಕೊಳಕ್ಕೆ ಇಳಿದಾಗ, 'ನಾವು ಮುಳುಗಬಹುದು' ಎಂದು ಭಾವಿಸಿ ಹೆದರಿ ನಡುಗುತ್ತಾ ಹಿಂದೆ ಸರಿದಿರಬಹುದು. ಆದರೆ ನೀರಿನ ಮೇಲೆ ಈಜುವ ಪಕ್ಷಿಗಳು ಮತ್ತು ಕೆಲವು ಜೀವಿಗಳನ್ನು ನೋಡಿದಾಗ ಅವನಲ್ಲಿ ಆತ್ಮವಿಶ್ವಾಸ ಬಂದಿರಬೇಕು. ಅವನು ಮತ್ತೆ ಮತ್ತೆ ಅದನ್ನೇ ಪ್ರಯತ್ನಿಸಿರಬಹುದು. ಪ್ರತಿದಿನ ವಿಭಿನ್ನವಾಗಿ ಮುಂದುವರೆದ ಆ ಪ್ರಯತ್ನಗಳು ಅವನಿಗೆ ಒಂದು ಹಂತದಲ್ಲಿ ಯಶಸ್ಸನ್ನು ತಂದುಕೊಟ್ಟಿರಬೇಕು. ಏಕೆಂದರೆ ಅದು ಅವನು ತನ್ನ ಪೂರ್ಣ ಹೃದಯ ಮತ್ತು ಆತ್ಮದಿಂದ ಮಾಡಿದ ಪ್ರಯತ್ನವಾಗಿತ್ತು.

ಎಲ್ಲರೂ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಆದರೆ, ಸಾಮಾನ್ಯ ಜನರು ಮತ್ತು ಬದ್ಧತೆಯಿಂದ ಕೆಲಸ ಮಾಡುವ ಜನರ ನಡುವೆ ಒಂದು ಸಣ್ಣ ವ್ಯತ್ಯಾಸವಿರುತ್ತದೆ. ಕಷ್ಟಪಟ್ಟು ಪ್ರಯತ್ನಿಸುವ ಬದ್ಧತೆ, ತಾಳ್ಮೆ ಮತ್ತು ಪರಿಶ್ರಮದಿಂದ ಪ್ರಯತ್ನಿಸುತ್ತಲೇ ಇದ್ದರೆ, ಆ ಕಷ್ಟಗಳನ್ನೆಲ್ಲ ನಿವಾರಿಸಿಕೊಳ್ಳಬಹುದು ಮತ್ತು ಅದರಲ್ಲಿ ಗೆಲ್ಲಬಹುದು ಎಂದು ಎಂದು ಅವರು ನಂಬುತ್ತಾರೆ. ಕಷ್ಟಗಳು ಮತ್ತು ಸಮಸ್ಯೆಗಳು ಜೀವನದ ಒಂದು ಭಾಗ. ಅವುಗಳನ್ನು ಉತ್ಸಾಹದಿಂದ ಎದುರಿಸಿ ಚೇತರಿಸಿಕೊಳ್ಳಬೇಕು ಎಂದು ಅವರಿಗೆ ಅನಿಸುತ್ತದೆ.



## ವಿಧಿಯನ್ನು ಬದಲಾಯಿಸೋಣ!



ಯಾವುದೇ ಕೆಲಸವನ್ನು ಬದ್ಧತೆ ಇಲ್ಲದೆ ಸುಮ್ಮನೆ ಬೇಕಾಬಿಟ್ಟಿಯಾಗಿ ಮಾಡುವವರು, ತಾವು ಮಾಡಿದ ಕೆಲಸ ವಿಫಲವಾದರೆ ವಿಧಿಯನ್ನು ದೂಷಿಸುತ್ತಾರೆ. ತಮ್ಮ ತಪ್ಪುಗಳಿಗೆ ಬೇರೆಯವರನ್ನು, ಕೆಲವೊಮ್ಮೆ ದೇವರನ್ನೂ ದೂಷಿಸುವ ಈ ಮನೋಭಾವ ಅಸಂಬದ್ಧವಾದುದು. ಬದ್ಧತೆ ಇದ್ದರೆ ವಿಧಿಯ ಯಾವುದೇ ನಿಯಮವನ್ನು ಕೂಡ ಬದಲಾಯಿಸಬಹುದು. ಉದಾಹರಣೆಗೆ ಇಸ್ಪೀಟ್ ಕಾರ್ಡ್ ಆಡುವುದು ತಪ್ಪು. ಅದರೆ ಅದರಲ್ಲೂ ಒಂದು ನ್ಯಾಯವಿದೆ.

ಇಸ್ಪೀಟೆಲೆಗಳ ಆಟದಲ್ಲಿ ಒಬ್ಬ ವ್ಯಕ್ತಿಗೆ 13 ಎಲೆಗಳನ್ನು ನೀಡಲಾಗುತ್ತದೆ. ಆ 13 ಕಾರ್ಡ್‌ಗಳು ಆ ರೀತಿ ಬೀಳುವುದು ವಿಧಿಯಾಗಿರುತ್ತದೆ. ಆದರೆ ಅವರು ಅವುಗಳನ್ನಿಟ್ಟುಕೊಂಡು ಹೇಗೆ ಆಟವಾಡುತ್ತಾರೆ ಮತ್ತು ಅದರಲ್ಲಿ ಗೆಲ್ಲುತ್ತಾರೆ ಎಂಬುದು ಅವರ ಅರಿವಿಗೆ ಸಂಬಂಧಿಸಿದ ವಿಷಯವಾಗಿದೆ. ನಿಮ್ಮಲ್ಲಿ ಪ್ರತಿಭೆ ಮತ್ತು ಬದ್ಧತೆ ಇದ್ದರೆ ನೀವು ನಿಮ್ಮ ಅದೃಷ್ಟವನ್ನು ಬದಲಾಯಿಸಬಹುದು.



## ಸಮರ್ಪಿತ ಕೆಲಸಗಾರ!

ಅಮೆರಿಕದಲ್ಲಿ ಒಂದು ಮನೆಗೆ ಬೆಂಕಿ ಹೊತ್ತಿಕೊಂಡಿದೆ ಎಂದು ಕರೆ ಬಂದಾಗ, ಅಗ್ನಿಶಾಮಕ ವಾಹನವೊಂದು ಸ್ಥಳಕ್ಕೆ ಧಾವಿಸಿತು. ಮನೆ ಸಮೀಪಿಸುತ್ತಿದ್ದಂತೆ ವಾಹನದಿಂದ ಕೆಳಗಿಳಿದ ಅಗ್ನಿಶಾಮಕ ಜೆಫ್ ಕ್ಲಾರ್ಕ್. ಅವನು ಮನೆಯೊಳಗೆ ಓಡಿದ. ಇತರ ಕೆಲಸಗಾರರು ಹೊರಗಿನಿಂದ ಬೆಂಕಿಯನ್ನು ನಂದಿಸತೊಡಗಿದರು. ಹೇಗಾದರೂ ಮನೆಯೊಳಗೆ ಹೋಗಿ ಅಲ್ಲಿ ಯಾರಾದರೂ ಒಳಗೆ ಸಿಲುಕಿಕೊಂಡಿದ್ದಾರೆಯೇ ಎಂದು ನೋಡುವುದು ಅವನ ಕರ್ತವ್ಯವಾಗಿತ್ತು.

ಅವನು ಕಿಟಕಿ ಒಡೆದು ಮನೆಯೊಳಗೆ ಹಾರಿದ. ಹೊಗೆಯಿಂದ ಕಣ್ಣುಗಳಿಗಾದ ಕಿರಿಕಿರಿಯನ್ನು ಸಹಿಸಿಕೊಳ್ಳುತ್ತಾ ಅವನು ಸುತ್ತಲೂ ನೋಡಿದ. ಒಳಗೆ, ಭಯಾನಕವಾಗಿ ಕಾಣುವ ನಾಯಿಯೊಂದು ಮಾರಣಾಂತಿಕ ಭಯದಿಂದ ಬೊಗಳುತ್ತಾ ನಿಂತಿತ್ತು. ಅದರ ಎತ್ತರ ಮತ್ತು ನೋಟವನ್ನು ನೋಡಿದಾಗ ಅವನಿಗೆ ಭಯವಾಯಿತು. ಎಷ್ಟೊಂದು ಜನರನ್ನು ಉಳಿಸಿದ್ದ ಅವನಿಗೆ, ನಾಯಿಯನ್ನು ಎದುರಿಸುವುದು ಹೊಸದು.

'ನಾನು ಇದನ್ನು ಎತ್ತಿಕೊಳ್ಳಲು ಹೋದರೆ, ನಾನು ಅದನ್ನು ಉಳಿಸುತ್ತಿದ್ದೇನೆ ಎಂದು ಅದಕ್ಕೆ ಅರ್ಥವಾಗುತ್ತದೆಯೇ ಅಥವಾ ಅದು ನನ್ನನ್ನು ಕಚ್ಚಬಹುದೇ?' ಎಂದು ಅವನು ಯೋಚಿಸಿದ. 'ಏನೇ ಆದರೂ ಆಗಲಿ, ಪರವಾಗಿಲ್ಲ. ಬೆಂಕಿಯಲ್ಲಿ ಸಿಲುಕಿರುವ ಈ ಜೀವವನ್ನು ಉಳಿಸುವುದು ನನ್ನ ಕರ್ತವ್ಯ" ಎಂದು ಅವನು ಅದರ ಬಳಿಗೆ ಹೋದ. ಅವನು ಅದನ್ನು ಹಿಡಿದು ಎತ್ತಿಕೊಂಡು, ಕಿಟಕಿಯಿಂದ ಹೊರಗೆ ಹಾರಿದ. ಅದನ್ನು ಸುರಕ್ಷಿತವಾಗಿ ಒಂದೆಡೆ ಇಟ್ಟು ಬೆಂಕಿಯನ್ನು ನಂದಿಸುವ ಕಾರ್ಯದಲ್ಲಿ ಇತರರೊಂದಿಗೆ ಸೇರಿಕೊಂಡ.

ಬೆಂಕಿ ಸಂಪೂರ್ಣವಾಗಿ ನಂದಿಸಿದ ನಂತರವೇ ಕ್ಲಾರ್ಕ್‌ಗೆ ಮತ್ತೆ ನಾಯಿಯ ನೆನಪಾದದ್ದು. ಅವನು ಅದರತ್ತ ನೋಡಿದ. ನಾಯಿ ಅವನ ಕಡೆಗೆ ಓಡಿ ಬಂತು. ಇತರ ಕೆಲಸಗಾರರು ಆತಂಕದಿಂದ ನೋಡುತ್ತಿದ್ದಂತೆ, ನಾಯಿ ಓಡಿ ಬಂದು ಕ್ಲಾರ್ಕ್‌ನ ಮುಖಕ್ಕೆ ಪ್ರೀತಿಯಿಂದ ಮುತ್ತಿಟ್ಟಿತು. ಪ್ರಾಣಿಗಳು ಸಹ ಭಾವನೆಗಳನ್ನು ಮತ್ತು ಪ್ರೀತಿಯನ್ನು ವ್ಯಕ್ತಪಡಿಸಬಹುದು ಎಂಬುದಕ್ಕೆ ಈ ದೃಶ್ಯವು ವಿಶ್ವಪ್ರಸಿದ್ಧ ಸಾಕ್ಷಿಯಾಗಿದೆ.

## ಕನಸನ್ನು ನನಸಾಗಿಸಿದ ಬದ್ಧತೆ!

ಮೈಕೆಲ್ ಫ್ಯಾರಡೆ ಅವರನ್ನು ಆಧುನಿಕ ಕಾಲದ ಶ್ರೇಷ್ಠ ವಿಜ್ಞಾನಿ ಮತ್ತು ಸಂಶೋಧಕ ಎಂದು ಪರಿಗಣಿಸಲಾಗಿದೆ. ವಿದ್ಯುತ್ ಮತ್ತು ವಿದ್ಯುತ್ಕಾಂತೀಯತೆಯ ಕುರಿತಾದ ಅವರ ಸಂಶೋಧನೆಯು ಇಂದು ವಾಹನಗಳು ಮತ್ತು ರೈಲುಗಳು ಕಾರ್ಯ ನಿರ್ವಹಿಸಲು ಮೂಲಭೂತ ಕಾರಣವಾಗಿದೆ. ಅವರು ರಚಿಸಿದ ಆವಿಷ್ಕಾರಗಳನ್ನು ಸ್ಮಾರ್ಟ್‌ಫೋನ್‌ಗಳಿಂದ ಹಿಡಿದು ದೂರದರ್ಶನದವರೆಗೆ ಎಲ್ಲದರಲ್ಲೂ ಬಳಸಲಾಗುತ್ತದೆ.

ಫ್ಯಾರಡೆ ಲಂಡನ್‌ನ ಕೊಳಕು ಉಪನಗರವೊಂದರಲ್ಲಿ ಒಂದು ಬಡ ಕುಟುಂಬದಲ್ಲಿ ಜನಿಸಿದರು ಮತ್ತು ಕುಟುಂಬದ ಬಡತನ ಮತ್ತು ಅವರ ಮಾತಿನ ದೋಷವು ಅವರನ್ನು ಶಿಕ್ಷಣದಿಂದ ವಂಚಿತಗೊಳಿಸಿತು. ತಮ್ಮ 13ನೇ ವಯಸ್ಸಿನಲ್ಲಿ ಅವರು ಮುದ್ರಣಾಲಯವೊಂದರಲ್ಲಿ ಕೆಲಸಕ್ಕೆ ಸೇರಿಕೊಂಡರು. ಆಗ ಅವರು ವೈಜ್ಞಾನಿಕ ಪುಸ್ತಕಗಳನ್ನು ಓದುವುದನ್ನು ಆರಂಭಿಸಿದರು. ಅವರಿಗೆ ವಿಜ್ಞಾನದ ಬಗ್ಗೆ ತುಂಬಾ ಒಲವು.

ಅದರಲ್ಲೂ ವಿಶೇಷವಾಗಿ ವಿದ್ಯುತ್ ಬಗೆಗಿನ ಪುಸ್ತಕಗಳನ್ನು ಓದುತ್ತಿದ್ದ ಅವರಿಗೆ, ಆಗಿನ ಪ್ರಸಿದ್ಧ ವಿಜ್ಞಾನಿ ಹಂಫ್ರಿ ಡೇವಿ ಅವರ ಬಳಿ ಸಹಾಯಕರಾಗಿ ಕೆಲಸ ಮಾಡುವುದು ಜೀವಮಾನದ ಕನಸಾಗಿತ್ತು. ಪ್ರಾಥಮಿಕ ಅರ್ಹತೆಗಳ ಕೊರತೆಯಿದ್ದ ಫ್ಯಾರಡೆಗೆ ಹಂಫ್ರಿ ಡೇವಿಯ ಪ್ರಯೋಗಾಲಯದಲ್ಲಿ ಕೆಲಸವನ್ನು ನಿರಾಕರಿಸಲಾಯಿತು. ಹಲವಾರು ಬಾರಿ ಪ್ರಯತ್ನಿಸಿ, ಕೊನೆಗೂ ತನ್ನ ಪ್ರತಿಭೆಯನ್ನು ಸಾಬೀತುಪಡಿಸಿ ಡೇವಿಯ ತಂಡವನ್ನು ಅವರು ಸೇರಿಕೊಂಡರು. ನಂತರ ಅವರಿಬ್ಬರೂ ಒಟ್ಟಿಗೆ ಸೇರಿ ವಿದ್ಯುತ್‌ನ ಸಹಾಯದಿಂದ ಚಲಿಸುವ ಮೋಟಾರ್ ಅನ್ನು



ಕಂಡು ಹಿಡಿದರು. ಇದರಿಂದ ಒಂದೇ ದಿನದಲ್ಲಿ ಅವರು ವಿಶ್ವದಾದ್ಯಂತ ಖ್ಯಾತಿಯನ್ನು ಗಳಿಸಿದರು.

ಪ್ರಯೋಗಾಲಯದಲ್ಲಿ ಅನೇಕ ವಿಜ್ಞಾನಿಗಳು ಇದ್ದರೂ ಮುಂದೆ ಡೇವಿಯ ಮರಣದ ನಂತರ ಫ್ಯಾರಡೆ ಅದರ ನಾಯಕತ್ವವನ್ನು ವಹಿಸಿಕೊಂಡರು. ನಂತರ ಅವರು ಡೈನಮೋ ಸೇರಿದಂತೆ ಅನೇಕ ಆವಿಷ್ಕಾರಗಳನ್ನು ಮಾಡಿದರು. ನೀವು ಒಂದು ವಿಷಯಕ್ಕೆ ಬದ್ಧರಾಗಿದ್ದರೆ ಯಾವುದೇ ಸವಾಲನ್ನೂ ಎದುರಿಸಬಹುದು ಮತ್ತು ಅವಕಾಶಗಳನ್ನು ಸಾಧಿಸಬಹುದು ಎಂಬುದಕ್ಕೆ ಫ್ಯಾರಡೆ ಒಂದು ಉತ್ತಮ ಉದಾಹರಣೆ. ●

# ಅಚಲವಾದ ಅರ್ಪಣಾ ಭಾವದಿಂದ ಬದುಕೋಣ!

ಆರಂಭದ ದಿನಗಳಲ್ಲಿ ಕಾರು ಒಂದು ವಿಚಿತ್ರ ಆಕಾರದಲ್ಲಿತ್ತು. ನಾಲ್ಕು ಸೈಕಲ್ ಚಕ್ರಗಳನ್ನು ಒಟ್ಟಿಗೆ ಜೋಡಿಸಿ ಅವುಗಳಿಗೆ ಎಂಜಿನ್ ಜೋಡಿಸುವ ಮೂಲಕ ಕಾರನ್ನು ನಿರ್ಮಿಸಲಾಗಿತ್ತು. ಅದು ವೇಗವಾಗಿಯೇನೂ ಚಲಿಸುತ್ತಿರಲಿಲ್ಲ. ಅದಕ್ಕಿಂತ ಕುದುರೆಗಳು ವೇಗವಾಗಿ ಓಡುತ್ತಿದ್ದರಿಂದ ಅನೇಕ ಜನರು ಕುದುರೆ ಬಂಡಿಗಳಲ್ಲಿ ಪ್ರಯಾಣ ಮಾಡುವುದನ್ನೇ ಇಷ್ಟಪಡುತ್ತಿದ್ದರು.

ಆದರೆ ಕಾರುಗಳ ಸಂಶೋಧಕ ಹೆನ್ರಿ ಫೋರ್ಡ್, ಇದು ಪ್ರಪಂಚದ ಭವಿಷ್ಯದ ಅತ್ಯಂತ ಪ್ರಮುಖ ಸಾರಿಗೆ ಸಾಧನವಾಗಲಿದೆ ಎಂದು ಅರಿತುಕೊಂಡರು. ಆದ್ದರಿಂದ ಕಷ್ಟಪಟ್ಟು ಕೆಲಸ ಮಾಡಿ ಕಾರುಗಳ ವಿನ್ಯಾಸವನ್ನು ಬದಲಾಯಿಸಲು ಪ್ರಯತ್ನಿಸಿದರು.

ಕಾರುಗಳು ಎಲ್ಲರೂ ಖರೀದಿಸಿ ಬಳಸಬಹುದಾದ ವಾಹನಗಳಾಗಬೇಕೆಂದು ಫೋರ್ಡ್ ಬಯಸಿದರು. ಅವರ ಸ್ನೇಹಿತರು ಅವರಿಗೆ ಎರಡು ಸಲಹೆಗಳನ್ನು ನೀಡಿದರು. "ಅಗ್ಗದ ವಸ್ತುಗಳನ್ನು ಮತ್ತು ಅತ್ಯುತ್ತಮ ಉದ್ಯೋಗಿಗಳನ್ನು ಬಳಸಿ ಕಡಿಮೆ ಸಮಯದಲ್ಲಿ ಕಾರನ್ನು ನಿರ್ಮಿಸಿ" ಎಂದು ಅವರು ಫೋರ್ಡ್‌ಗೆ ಹೇಳಿದರು.

ಫೋರ್ಡ್ ಎರಡೂ ಆಲೋಚನೆಗಳನ್ನು ತಿರಸ್ಕರಿಸಿದರು. ಅಗ್ಗದ ವಸ್ತುಗಳನ್ನು ಬಳಸಿದರೆ, ಕಾರಿನ ಗುಣಮಟ್ಟ ಕಡಿಮೆಯಾಗುತ್ತದೆ. ಉತ್ತಮ ಉದ್ಯೋಗಿಗಳನ್ನು ಮಾತ್ರ ಬಳಸಿಕೊಂಡರೆ, ಕಂಪನಿಯು ಕೆಲವರನ್ನು ಮಾತ್ರ ಅವಲಂಬಿಸಿಕೊಳ್ಳಬೇಕಾಗುತ್ತದೆ.

ಆದ್ದರಿಂದ ಅವರು ಅಸೆಂಬ್ಲಿ ಲೈನ್ ವ್ಯವಸ್ಥೆಯನ್ನು ಪರಿಚಯಿಸಿದರು. ಅಂದರೆ, ಒಂದೊಂದು ಭಾಗವನ್ನೂ ಒಂದೊಂದು ಸ್ಥಳದಲ್ಲಿ ಕೆಲವು ಜನರು ಒಟ್ಟಿಗೆ ಸೇರಿ ನಿರ್ಮಿಸುತ್ತಾರೆ. ನಂತರ ಅವುಗಳನ್ನೆಲ್ಲ ಒಟ್ಟಿಗೆ ಸಂಪರ್ಕಿಸಲಾಗುತ್ತದೆ ಹಾಗೂ ಕೊನೆಯದಾಗಿ ಸಂಪೂರ್ಣ ಕಾರು ಸಿದ್ಧವಾಗುತ್ತದೆ. ಇದು ಕಾರುಗಳನ್ನು ವೇಗವಾಗಿ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸಲು ಅವಕಾಶ ಮಾಡಿಕೊಟ್ಟಿತು. ಅದನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲು ಕೂಡ ಸಾಧ್ಯವಾಯಿತು. ಇಂದಿಗೂ ಹಲವು ಕಾರ್ಖಾನೆಗಳಲ್ಲಿ ಬಳಸುತ್ತಿರುವ ಈ ಕ್ರಮ ಅತಿ ದೊಡ್ಡ ಪ್ರಕ್ರಿಯೆಯಾಗಿದೆ. ಫೋರ್ಡ್ ಅವರು ತಾವು ಸ್ವೀಕರಿಸಿದ ವೃತ್ತಿಯಲ್ಲಿ ಹೊಂದಿದ್ದ ಸಮರ್ಪಣೆಯೇ ಅವರ ಈ ಸಾಧನೆಗೆ ಕಾರಣವಾಯಿತು.

ಅರ್ಥಪೂರ್ಣ ಹಾಗೂ ತೃಪ್ತಿದಾಯಕ ಜೀವನವನ್ನು ನಡೆಸುವುದು ಒಂದು ದೀರ್ಘ ಪ್ರಯಾಣ. ಅದಕ್ಕೆ ತಾಳ್ಮೆ ಮತ್ತು ಬದ್ಧತೆ ಬೇಕು. ಅನೇಕ ಜನರು ತಮ್ಮ ಜೀವನದಲ್ಲಿ ಹತಾಶೆಯನ್ನು ಅನುಭವಿಸುತ್ತಾರೆ. "ಹೇಗಿದ್ದೀರಿ?" ಎಂದು ಕೇಳಿದರೆ? ಅವರು ದುಃಖದಿಂದ "ಏನೋ ಹೀಗೇ ಜೀವನ ನಡೆಯುತ್ತಿದೆ" ಎಂದು ಹೇಳುತ್ತಾರೆ. ಅವರು ಯಾವುದೇ ಅರ್ಪಣಾಭಾವವೂ ಇಲ್ಲದೆ ತಮ್ಮ ಕೆಲಸಗಳನ್ನು ಯಾಂತ್ರಿಕವಾಗಿ ಮಾಡುತ್ತಿರುತ್ತಾರೆ. ಜೀವನದಲ್ಲಿ ಪ್ರತಿಯೊಬ್ಬರೂ ಬದ್ಧತೆಯಿಂದ ತೊಡಗಿಸಿಕೊಳ್ಳಬೇಕು. ಸಂಬಂಧಗಳೊಂದಿಗೆ ಸಂವಹನ ನಡೆಸುವಲ್ಲಿಯೂ ಬದ್ಧತೆ ಇರಬೇಕು. ನೀವು ಏನೇ ಮಾಡಿದರೂ... ಅದು ಅಧ್ಯಯನ, ಕೆಲಸ, ವೃತ್ತಿ ಅಥವಾ ವ್ಯವಹಾರವಾಗಿರಲಿ ನೀವು ಅದರಲ್ಲಿ ಸಂಪೂರ್ಣ ಅರ್ಪಣಾ ಭಾವದಿಂದ ಭಾಗಿಯಾಗಬೇಕು. ಹೀಗೆ ನಡೆದುಕೊಳ್ಳಲು ಕೆಲವು ಮಾರ್ಗಗಳು ಇದೋ ಇಲ್ಲಿವೆ.

- ಪ್ರತಿಯೊಬ್ಬರ ಜೀವನಕ್ಕೂ ಒಂದು ಅರ್ಥವಿದೆ. ಜನರಿಗೆ ಪ್ರಯೋಜನಕಾರಿಯಾದ ಆವಿಷ್ಕಾರಗಳನ್ನು ಮಾಡುವುದು ವಿಜ್ಞಾನಿಗಳ ಕೆಲಸ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು ಶಿಕ್ಷಕರ ಕೆಲಸ. ಕಲ್ಯಾಣ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸುವುದು ಸರ್ಕಾರಿ ಅಧಿಕಾರಿಯ ಕೆಲಸ. ಹಾಗೆಯೇ ನಿಮ್ಮ ಕೆಲಸದ ಅರ್ಥವೇನು ಎಂಬುದನ್ನು ಕಂಡುಹಿಡಿಯಿರಿ. ನಿಮ್ಮ ಸಾಮರ್ಥ್ಯಗಳೇನು, ನಿಮ್ಮ ಉತ್ಸಾಹಗಳೇನು ಮತ್ತು ನಿಮಗೆ ಸಂತೋಷ ಮತ್ತು ತೃಪ್ತಿಯನ್ನು ತರುವುದು ಯಾವುದು, ಜೀವನದಲ್ಲಿ ನೀವು ಏನನ್ನು ಗೌರವಿಸುತ್ತೀರಿ ಎಂಬುದನ್ನು ನಿರ್ಧರಿಸಿ.
- ನಿಮ್ಮ ಕೆಲಸ ಅಥವಾ ಪ್ರಯತ್ನವು ಯಾವ ರೀತಿಯ ಪರಿಣಾಮವನ್ನು ಬೀರಬೇಕು ಎಂದು ನೀವು ಭಾವಿಸುತ್ತೀರಿ? ಅದರ ಆಧಾರದಲ್ಲಿ ನಿಮ್ಮ ಗುರಿಗಳನ್ನು ಯೋಜಿಸಿಕೊಳ್ಳಿ. ಕೆಲಸವನ್ನೂ ದಾಟಿ ನೀವು ಇಷ್ಟಪಡುವ ಯಾವುದಾದರೂ ಇನ್ನೊಂದು ವಿಷಯವನ್ನು ಕೂಡ ಜೀವನದಲ್ಲಿ ಅಳವಡಿಸಿಕೊಳ್ಳಿ. ಅದು ನಿಮ್ಮ ಇಷ್ಟದ ಹವ್ಯಾಸವಾಗಿರಬಹುದು, ಇನ್ನೊಂದು ಅರೆಕಾಲಿಕ ಕೆಲಸವಾಗಿರಬಹುದು ಅಥವಾ ಸಮಾಜಸೇವೆಯಾಗಿರಬಹುದು. ನೀವು ಮಾಡುವ ಯಾವುದೇ ಕೆಲಸವಾಗಿರಲಿ ಅದು ನಿಮಗೆ ಸಂತೋಷ ಮತ್ತು ತೃಪ್ತಿಯನ್ನು ತರಬೇಕು, ಅಷ್ಟೇ. ಅದನ್ನು ಮಾತ್ರವೇ ಗುರಿಯಾಗಿಟ್ಟುಕೊಳ್ಳಿ.





- ಮನುಷ್ಯರು ಸಮಾಜದಲ್ಲಿ ಬದುಕಲು ಹುಟ್ಟಿದ್ದಾರೆ. ನಮ್ಮ ಸುತ್ತಲಿನ ಅನೇಕ ಜನರು ನಾವು ಬದ್ಧತೆಯಿಂದ ಏನನ್ನಾದರೂ ಮಾಡಲು ಸಹಾಯ ಮಾಡುತ್ತಾರೆ. ನಮ್ಮ ಪ್ರಯತ್ನಗಳನ್ನು ಮೆಚ್ಚುವ ಮತ್ತು ಉತ್ಸಾಹದಿಂದ ಬೆಂಬಲಿಸುವ ಕುಟುಂಬ, ಸಂಬಂಧಿಕರು ಮತ್ತು ಸ್ನೇಹಿತರನ್ನು ಹೊಂದಿರುವುದು ಮತ್ತು ಅವರೊಂದಿಗೆ ಅರ್ಥಪೂರ್ಣ ಸಂಬಂಧಗಳನ್ನು ಬೆಳೆಸಿಕೊಳ್ಳುವುದು ಕೂಡ ಮುಖ್ಯ. ಯಾವಾಗಲೂ ಬಾಂಧವ್ಯವನ್ನು ಕಳೆದುಕೊಳ್ಳದಂತೆ ನಡೆದುಕೊಳ್ಳಿ.
- ಯಾವುದೇ ಪರಿಸರದಲ್ಲಾದರೂ ಬದ್ಧತೆಯನ್ನು ಕಳೆದುಕೊಳ್ಳದೆ ಕೆಲಸ ಮಾಡಲು ಉತ್ಸಾಹಭರಿತ ಮನೋಭಾವ ಅತ್ಯಗತ್ಯ. ವೈಫಲ್ಯಗಳನ್ನು ಯಶಸ್ಸಿನ ಹಾದಿಗಳಾಗಿ ಮತ್ತು ಹಿನ್ನಡೆಗಳನ್ನು ಕಲಿಯುವ ಅವಕಾಶಗಳಾಗಿ ನೋಡಿ. ಹೊಸ ಸಂದರ್ಭಗಳನ್ನು ಹಿಂಜರಿಕೆಯಿಲ್ಲದೆ ಸ್ವೀಕರಿಸಿ. "ಇದು ನನ್ನ ಮಿತಿ" ಎಂದು ಯೋಚಿಸುವ ಬದಲು, "ಇದನ್ನು ಮೀರಿ ಹೋದಾಗ ಮಾತ್ರ ಬೆಳವಣಿಗೆ ಬರುತ್ತದೆ" ಎಂದು ಹೇಳುವ ಸಕಾರಾತ್ಮಕ ಮನಸ್ಥಿತಿಯನ್ನು ಹೊಂದಿರಿ.
- ಯಾವಾಗಲೂ ಹೊಸ ವಿಷಯಗಳನ್ನು ಪ್ರಯತ್ನಿಸುವುದರಿಂದ ನಿಮ್ಮ ಮನಸ್ಸು ವಿಶಾಲವಾಗುತ್ತದೆ. ಉತ್ಸಾಹ ಮತ್ತು ಬದ್ಧತೆ ನಿಮ್ಮನ್ನು ಎಂದಿಗೂ ಕೊರತೆಯಿಲ್ಲದ ವ್ಯಕ್ತಿಯನ್ನಾಗಿ ಮಾಡುತ್ತದೆ. ಹೊಸ ಸ್ಥಳಗಳಿಗೆ ಪ್ರಯಾಣಿಸಿ, ಹೊಸ ಜನರನ್ನು ಭೇಟಿ ಮಾಡಿ. ನೀವು ಹಿಂದೆಂದೂ ಮಾಡಿರದ ಹೊಸ ಸಾಹಸಗಳನ್ನು ಪ್ರಯತ್ನಿಸಿ. ಹೊಸ ಅನುಭವಗಳನ್ನು ಹುಡುಕುವುದು ನಿಮ್ಮ ಜೀವನವನ್ನು ಆಸಕ್ತಿದಾಯಕವಾಗಿಸುತ್ತದೆ.
- ನೀವು ಉತ್ಸಾಹ ಮತ್ತು ಬದ್ಧತೆಯನ್ನು ಕಳೆದುಕೊಳ್ಳದೆ ಕೆಲಸ ಮಾಡಲು ಬಯಸಿದರೆ, ನಿಮ್ಮ ದೇಹ ಮತ್ತು ಮನಸ್ಸು ಸಹಕರಿಸಬೇಕು. ಆದ್ದರಿಂದ ನಿಮ್ಮ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಿ. ಆರೋಗ್ಯಕರ ಜೀವನಶೈಲಿ, ಸಮತೋಲಿತ ಆಹಾರ ಮತ್ತು ಸಾಕಷ್ಟು ವ್ಯಾಯಾಮ ಸೇರಿದಂತೆ ಎಲ್ಲದರ ಬಗ್ಗೆಯೂ ಜಾಗರೂಕರಾಗಿರಿ.
- ಹರಿತ ಮಾಡಿದ ಕೊಡಲಿ ಚೆನ್ನಾಗಿ ಕತ್ತರಿಸುತ್ತದೆ. ಅದರಂತೆಯೇ ನಿಮ್ಮ ಕೆಲಸ ಪರಿಪೂರ್ಣವಾಗಿರಬೇಕಾದರೆ ನೀವು ಸಾಕಷ್ಟು ವಿಶ್ರಾಂತಿ ಕೂಡ ಪಡೆಯಬೇಕು ಮತ್ತು ನಿಮ್ಮ ಶಕ್ತಿಯನ್ನು ಮರುಪೂರಣ ಮಾಡಿಕೊಳ್ಳಬೇಕು. ಉತ್ತಮ ನಿದ್ರೆ ಮುಖ್ಯ. ಯೋಗ, ಧ್ಯಾನ ಮತ್ತು ಸಕಾರಾತ್ಮಕ ಆಲೋಚನೆಗಳನ್ನು ಹೊಂದಿರುವ ಪುಸ್ತಕಗಳನ್ನು ಓದುವ ಮೂಲಕ ನಿಮ್ಮನ್ನು ನೀವು ರೂಪಿಸಿಕೊಳ್ಳಿ.
- ಕಲಿಕೆಯೇ ಬೆಳವಣಿಗೆಗೆ ಮೂಲ ಮಂತ್ರ. ನೀವು ಯಾವುದೇ ಕ್ಷೇತ್ರದಲ್ಲಿದ್ದರೂ, ಅದರ ಬಗ್ಗೆ ಕಲಿಯುತ್ತಲೇ ಇರಿ. ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡುವವರು ಎಂದಿಗೂ ಮಡುಗಟ್ಟುವುದಿಲ್ಲ.
- ಸುಗಮ ಸಂಚಾರಕ್ಕಾಗಿ ಕೆಲವು ಸಾರಿಗೆ ನಿಯಮಗಳನ್ನು ವಿಧಿಸಲಾಗಿದೆ. ಅವು ರಸ್ತೆಯಲ್ಲಿ ಸುಗಮವಾಗಿ ಚಲಿಸಲು ಸಹಾಯ ಮಾಡುತ್ತವೆ. ಅದೇ ರೀತಿ ನೀವು ಬದುಕಿನಲ್ಲಿ ಕೂಡ ಕೆಲವು ನಿಯಮಗಳನ್ನು ಪಾಲಿಸಬೇಕು. ನಿಮಗೆ ನೀವೇ ಕೆಲವು ಶಿಸ್ತಿನ ನಿಯಮಗಳನ್ನು ಹಾಕಿಕೊಳ್ಳಿ. ಯಾವುದೇ ಕಾರಣಕ್ಕೂ ಆ ನಿಯಮಗಳನ್ನು ಮುರಿಯಬೇಡಿ. "ಇವರಂತೆ ಶಿಸ್ತಿನಿಂದ ಬದುಕುವ ಇನ್ನೊಬ್ಬ ವ್ಯಕ್ತಿಯನ್ನು ಕಾಣಲು ಸಾಧ್ಯವಿಲ್ಲ" ಎಂದು ಹೆಸರು ಗಳಿಸಿರಿ.
- ವಿಶೇಷ ಕ್ಷಣಕ್ಕಾಗಿ ಅಥವಾ ಯಾವುದೋ ಒಂದು ಸರಿಯಾದ ಸಂದರ್ಭಕ್ಕಾಗಿ ಕಾಯಬೇಡಿ. ನೀವು ಒಂದನ್ನು ಮಾಡಲು ನಿರ್ಧರಿಸಿದರೆ ತಕ್ಷಣ ಅದನ್ನು ಪ್ರಾರಂಭಿಸಿ. ನೀವು ಇವತ್ತು ಮಾಡಿದ್ದಕ್ಕಿಂತ ನಾಳೆ ಒಂದು ಇನ್ನೂ ಒಂದು ಹೆಜ್ಜೆ ಚೆನ್ನಾಗಿ ಮಾಡಬೇಕೆಂದು ಪ್ರತಿದಿನ ಯೋಚಿಸಿ. ಹಾಗಾದಾಗ ನೀವು ಯಾವುದರಲ್ಲೂ ಆಸಕ್ತಿ ಕಳೆದುಕೊಳ್ಳದೆ ಬದುಕುವಿರಿ.

# ಅರ್ಪಣಾ ಭಾವವೇ ನಿಮ್ಮ ಗುರುತಾಗಿರಲಿ!

ನಾವು ಮಾಡುವ ಕ್ರಿಯೆಗಳೇ ನಮ್ಮೆಲ್ಲರ ಗುರುತುಗಳಾಗಿರುತ್ತವೆ. ಪೈಲಟ್‌ನ ಹೆಸರು ಯಾರಿಗೂ ತಿಳಿದಿಲ್ಲದಿದ್ದರೂ ಅವರ ವೃತ್ತಿಯನ್ನು ಆಧರಿಸಿ ಅವರನ್ನು 'ಪೈಲಟ್' ಎಂದು ಎಲ್ಲರೂ ಕರೆಯುತ್ತಾರೆ. ಹಾಗೆಯೇ ನೀವು ಕಾರು ಓಡಿಸಿದರೆ ನೀವು ಚಾಲಕರು. ನೀವು ಅಡುಗೆ ಕೆಲಸ ಮಾಡಿದರೆ ನೀವು ಅಡುಗೆಯವರು. ಕಾರ್ಯನಿರ್ವಾಹಕ ಅಥವಾ ವ್ಯವಸ್ಥಾಪಕ ನಿರ್ದೇಶಕರಾಗಿದ್ದರೆ ಮ್ಯಾನೇಜರ್. ಹೀಗೆ ಅನೇಕ ಜನರಿಗೆ ಅವರು ಮಾಡುವ ಕೆಲಸವೇ ಅವರ ಗುರುತಾಗಿರುತ್ತದೆ.

ನಮ್ಮ ಕೆಲಸಕ್ಕೆ ನಾವು ತೋರಿಸುವ ಬದ್ಧತೆಯೇ ನಮ್ಮನ್ನು ಅತ್ಯುತ್ತಮರನ್ನಾಗಿ ಮಾಡುತ್ತದೆ. ಯಾರನ್ನಾದರೂ "ನಗರದ ಅತ್ಯುತ್ತಮ ಬಿರಿಯಾನಿ ತಯಾರಕರು" ಎಂದು ಬಣ್ಣಿಸಿದರೆ ಅದು ಅವರ ಸಮರ್ಪಣೆಯನ್ನು ಪ್ರತಿಬಿಂಬಿಸುವ ಪ್ರಶಂಸೆಯಾಗಿರುತ್ತದೆ. 'ನಾವು ಮಾಡುವ ಆಹಾರವು ಇತರರು ಮಾಡುವ ಆಹಾರಕ್ಕಿಂತ ಉತ್ತಮವಾಗಿರಬೇಕು. ತಿನ್ನುವವರ ಹೊಟ್ಟೆ ಮತ್ತು ಮನಸ್ಸನ್ನು ಅದು ತುಂಬಿಸಬೇಕು' ಎಂದು ಭಾವಿಸಿ ಉತ್ಸಾಹ ಮತ್ತು ಆಸಕ್ತಿಯಿಂದ ಅಡುಗೆ ಮಾಡುವುದರಿಂದ ಇಂತಹ ಗುರುತನ್ನು ಅವರು ಗಳಿಸುತ್ತಾರೆ.

ಆಸಕ್ತಿ ಮತ್ತು ಬದ್ಧತೆಗಳು ನಿಮ್ಮೊಳಗಿನಿಂದ ಬರುತ್ತವೆ. ಅವುಗಳನ್ನು ಕೃತಕವಾಗಿ ಮೂಡಿಸಲಾಗುವುದಿಲ್ಲ. ಹಾಗೆ ಮಾಡುವುದು ನಮ್ಮನ್ನು ನಾವೇ ಮೋಸಗೊಳಿಸಿಕೊಂಡಂತೆ. ನೀವು ನಿಮ್ಮ ಪ್ರತಿಭೆಯನ್ನು ಬೆಳೆಸಿಕೊಂಡರೆ ಮತ್ತು ನಿಮಗೆ ನಿಜವಾಗಿಯೂ ಆಸಕ್ತಿ ಇರುವ ಯಾವುದಾದರೂ ವಿಷಯದಲ್ಲಿ ಶ್ರಮಿಸಿದರೆ, ಈ ಜಗತ್ತಿನಲ್ಲಿ ನೀವು ಸಾಧಿಸಲು ಸಾಧ್ಯವಾಗದದ್ದು ಯಾವುದೂ ಇಲ್ಲ.

ನಿಮ್ಮ ಆಸಕ್ತಿ ಬೇರೆಡೆ ಇದ್ದರೂ ಮತ್ತು ನೀವು ಸಂಪೂರ್ಣವಾಗಿ ಸಂಬಂಧವಿಲ್ಲದ ಯಾವುದಾದರೂ ವಿಷಯದಲ್ಲಿ ತೊಡಗಿಸಿಕೊಂಡರೂ ಅದು ಫಲಪ್ರದವಾಗುವುದಿಲ್ಲ. ಇದರ ಬಗ್ಗೆ ಒಂದು ಕಥೆ ಇದೆ... ಗಂಡನನ್ನು ಕಳೆದುಕೊಂಡ ಒಬ್ಬ ಮಹಿಳೆ ಮತ್ತು ಹೆಂಡತಿಯನ್ನು ಕಳೆದುಕೊಂಡ ಒಬ್ಬ ಪುರುಷ ಇದ್ದರು. ಇಬ್ಬರೂ ಪರಸ್ಪರ ಒಪ್ಪಿಗೆಯೊಂದಿಗೆ ಮರುಮದುವೆಯಾದರು. ಆ ಮಹಿಳೆಗೆ ಒಬ್ಬ ಮಗಳಿದ್ದಳು. ಆ ಪುರುಷನಿಗೂ ಒಬ್ಬ ಮಗನಿದ್ದ. ಅವರಿಬ್ಬರೂ ಒಟ್ಟಿಗೆ ಸೇರಿ ಇಬ್ಬರೂ ಮಕ್ಕಳನ್ನು ತಮ್ಮದೇ ಮಕ್ಕಳಂತೆ ಬೆಳೆಸಬೇಕು ಎಂದುಕೊಂಡರು. ಹಾಗಾಗಿ, "ನಮಗೆ ಇನ್ನು ಮಕ್ಕಳು ಬೇಡ" ಎಂದು ಇಬ್ಬರೂ ಒಟ್ಟಿಗೆ ನಿರ್ಧರಿಸಿದರು.

ತಾಯಿಯ ಪ್ರೀತಿ ಇಲ್ಲದೆ ಬೆಳೆಯುತ್ತಿರುವ ಆ ಹುಡುಗ ತಾಯಿಗಾಗಿ ಹಂಬಲಿಸಬಾರದು ಎಂದು ಭಾವಿಸಿ, ಅವಳು ತನ್ನ ಮಗಳಿಗಿಂತ ಗಂಡು ಮಗುವಿನ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೋರಿಸಿದಳು. ಆದರೂ ಅವನು ಆ ಮಗಳಷ್ಟು ಉತ್ಸಾಹದಿಂದಿರಲಿಲ್ಲ, ಆಸಕ್ತಿಯಿಂದ ಆಡುತ್ತಿರಲಿಲ್ಲ, ಓದುವ ವಿಷಯದಲ್ಲೂ ಅವನು ಮುಂದಿರಲಿಲ್ಲ. ತಂದೆ ತಾಯಿ ಇಬ್ಬರಿಗೂ ಇದಕ್ಕೆ ಕಾರಣ ಅರ್ಥವಾಗಲಿಲ್ಲ.

ಮನೆಯಲ್ಲಿ ಒಂದು ರಾತ್ರಿ ಕಚೇರಿಯ ಕೆಲಸವನ್ನು ಮುಗಿಸಿ ತಡವಾಗಿ ಮಲಗಲು ಹೋದಾಗ ಅವನಿಗೆ ಅದರ ಕಾರಣ ತಿಳಿಯಿತು. ಆ ಮಹಿಳೆ ಗಂಡು ಮಗುವನ್ನು ತನ್ನ ಪಕ್ಕದಲ್ಲಿ ಮಲಗಿಸಿಕೊಂಡಿದ್ದಳು. ಸ್ವಲ್ಪ ದೂರದಲ್ಲಿ ಮಲಗಿದ್ದ ಮಗಳು ನಿದ್ರೆಯಲ್ಲಿ ಕೆಮ್ಮಿದಾಗ, ಅವಳಿಗೇ ತಿಳಿಯದಂತೆ ಅವಳು ತನ್ನ ಕೈಗಳನ್ನು ನೀಡಿ ಮಗಳನ್ನು ಸಾಂತ್ವನಗೊಳಿಸಿದಳು. "ಹೆಂಡತಿ ತನ್ನ ಮಗನ ಬಗ್ಗೆ ಎಷ್ಟೇ ಕಾಳಜಿ ವಹಿಸಿದರೂ, ಅವಳ ಅಂತರಂಗದ ಪ್ರೀತಿ ಮಗಳ ಮೇಲೇ ಹೆಚ್ಚಾಗಿರುತ್ತದೆ" ಎಂಬುದು ಅವನಿಗೆ ಅರ್ಥವಾಯಿತು. ಇದೇ ರೀತಿ ತಾನು ಕೂಡ ತನ್ನ ಮಗನ ಮೇಲೆ ಅಂತರಾಳದಿಂದ ಪ್ರೀತಿಯನ್ನು ತೋರಿಸಿದರೆ ಮಾತ್ರವೇ ಅವನನ್ನು ನೆಮ್ಮದಿಯಾಗಿ ಬೆಳೆಸಲು ಸಾಧ್ಯ ಎಂಬುದನ್ನು ತಂದೆ ಅರಿತುಕೊಂಡರು. ನಿಜವಾದ ಸಮರ್ಪಣಾಭಾವವನ್ನು ಯಾರಿಂದಲೂ ಮರೆಮಾಚಲು ಸಾಧ್ಯವಿಲ್ಲ.



ಅದೇ ಸಮಯದಲ್ಲಿ, ನೀವು ಆಸಕ್ತಿ ಹೊಂದಿರುವ ಕ್ಷೇತ್ರದಲ್ಲಿ ನೀವು ಮುಂದುವರೆಯುವುದನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಇದರ ಬಗ್ಗೆ ಇನ್ನೊಂದು ಕಥೆ ಇದೆ. ಒಂದು ಹಳ್ಳಿಯಲ್ಲಿ ಹೊಸ ದೇವಾಲಯದ ನಿರ್ಮಾಣ ಕಾರ್ಯ ನಡೆಯುತ್ತಿತ್ತು. ಊರಿನ ಎಲ್ಲರೂ ತಮ್ಮ ಉಳಿತಾಯದ ಹಣವನ್ನು ಅದಕ್ಕಾಗಿ ನೀಡಿದರು. ಆ ಊರಿನಲ್ಲಿ ಎಲ್ಲರಿಗಿಂತ ತುಂಬಾ ಬಡವನಾಗಿದ್ದ ಒಬ್ಬ ವ್ಯಕ್ತಿ ಕೂಡ ತನ್ನ ಜೀವನವಿಡೀ ಉಳಿತಾಯ ಮಾಡಿದ್ದ ಹಣವನ್ನೆಲ್ಲ ದೇವಾಲಯದ ಕೆಲಸಕ್ಕಾಗಿ ನೀಡಿದ. ಆದರೆ ಆ ಬಡವ ಸಾವಿರ ರೂಪಾಯಿಯನ್ನೂ ಕೂಡ ಕೊಡಲಿಲ್ಲ. ಆ ಊರಿನ ಒಬ್ಬ ಅತ್ಯಂತ ಶ್ರೀಮಂತ ವ್ಯಕ್ತಿ, "ನಾನೂ ನನ್ನ ಕೈಲಾದಷ್ಟು ನೀಡುತ್ತೇನೆ" ಎಂದು ಹೇಳಿ ತನ್ನ ಉಳಿತಾಯದ ಒಂದು ಭಾಗವನ್ನು ದಾನ ಮಾಡಿದ. ಈ ಮೂಲಕ ಅವನು ಕೆಲವು ಲಕ್ಷ ರೂಪಾಯಿಗಳನ್ನು ಕೊಟ್ಟ.



ಅವರಿಬ್ಬರೂ ಒಂದೇ ದಿನ ಸತ್ತು ಸ್ವರ್ಗಕ್ಕೆ ಹೋದರು. ದೇವದೂತರು ಸ್ವರ್ಗದ ದ್ವಾರಗಳಲ್ಲಿ ಕಾದು ನಿಂತಿದ್ದು, ಆ ಬಡವನಿಗೆ ಹಾರ ಹಾಕಿ ಅತ್ಯಂತ ಸಡಗರ ಸಂಭ್ರಮ ಹಾಗೂ ಗೌರವದಿಂದ ಅವನನ್ನು ಕರೆದುಕೊಂಡು ಹೋಗಿ ಸನ್ಮಾನಿಸಿದರು. ಆದರೆ ಶ್ರೀಮಂತನನ್ನು ಸುಮ್ಮನೆ ಬಾಗಿಲು ತೆರೆದು ಒಳಗೆ ಆಹ್ವಾನಿಸಲಾಯಿತು. ಅವನು ಇದರಿಂದ ತುಂಬಾ ಕೋಪಗೊಂಡ. "ದೇವರೇ, ನಿನಗೆ ದೇವಸ್ಥಾನ ಕಟ್ಟಲು ನಾನು ಎಷ್ಟೊಂದು ಲಕ್ಷ ಹಣ ಕೊಟ್ಟೆ. ಇವನು ನಿನಗೆ ಒಂದು ಸಾವಿರ ರೂಪಾಯಿ ಕೂಡ ಕೊಡಲಿಲ್ಲ. ಆದರೆ ನೀವು ಇವನಿಗೆ ಇಷ್ಟೊಂದು ಗೌರವ ಕೊಡುತ್ತೀದ್ದೀರಿ. ನೀವು ನನ್ನನ್ನು ಅವಮಾನಿಸುತ್ತಿದ್ದೀರಿ" ಎಂದು ಕೋಪದಿಂದ ದೇವರ ಬಳಿ ಕೇಳಿದ.

ದೇವರು ಮುಗುಳ್ನಗುತ್ತಾ ಅವನಿಗೆ, "ಆ ಬಡವ ತನ್ನ ಜೀವಮಾನದ ಉಳಿತಾಯವನ್ನೆಲ್ಲ ಕೊಟ್ಟ. ಎಂದರೆ ದೇವಾಲಯಕ್ಕಾಗಿ ತನ್ನ ಬಳಿಯಿದ್ದ ಎಲ್ಲವನ್ನೂ ಕೊಡುವ ಬಯಕೆ ಅವನಲ್ಲಿತ್ತು. ಆದರೆ ನೀನು ನಿನ್ನ ಬಳಿ ಇದ್ದದ್ದರಲ್ಲಿ ಒಂದು ಭಾಗವನ್ನು ಮಾತ್ರ ದೇವಸ್ಥಾನಕ್ಕೆ ಕೊಟ್ಟಿದ್ದೀಯ. ಊರಿನಲ್ಲಿರುವ ಎಲ್ಲರಿಗಿಂತಲೂ ಹೆಚ್ಚಿನದನ್ನು ನೀಡಿದವನು ಎಂಬ ಹೆಸರಿನ ಹೆಮ್ಮೆಗಾಗಿ ನೀನು ಅದನ್ನು ಮಾಡಿದೆ. ಉಳಿದಂತೆ ನಿನ್ನಲ್ಲಿ ಭಕ್ತಿಯಾಗಲೀ ಅರ್ಪಣಾ ಮನೋಭಾವವಾಗಲೀ ಏನೂ ಇರಲಿಲ್ಲವಲ್ಲ" ಎಂದು ದೇವರು ಕೇಳಿದ!

ನಮಗೆ ಆಸಕ್ತಿ ಇರುವುದನ್ನು ಮಾಡುವುದರಿಂದ ಉತ್ತಮ ಫಲಿತಾಂಶಗಳು ದೊರೆಯುತ್ತವೆ. ಕಷ್ಟಪಟ್ಟು ಕೆಲಸ ಮಾಡುವ ಜನರು ಕೆಲವು ಸಾಮಾನ್ಯ ಗುಣಲಕ್ಷಣಗಳನ್ನು ಹೊಂದಿರುತ್ತಾರೆ.


- ‘ನಾವು ನಮ್ಮ ಅಂತಃಪ್ರಜ್ಞೆಯಿಂದ ಮಾರ್ಗದರ್ಶಿಸಲ್ಪಟ್ಟ ಮಾರ್ಗವನ್ನು ಅನುಸರಿಸುತ್ತೇವೆ’ ಎಂಬ ಭಾವ ಅವರಲ್ಲಿರುತ್ತದೆ. ತಮ್ಮ ಹೃದಯ ಹೇಳುವಂತೆ ಮಾಡುತ್ತಿದ್ದೇವೆ ಎಂಬ ಪರಮಾನಂದವೂ ಅವರಲ್ಲಿರುತ್ತದೆ. ಅವರು ತಾವು ಕೆಲಸ ಮಾಡುವ ಪ್ರತಿ ನಿಮಿಷವನ್ನೂ ಆನಂದಿಸುತ್ತಾರೆ ಮತ್ತು ಅದನ್ನು ಉತ್ಸಾಹದಿಂದ ಮಾಡುತ್ತಾರೆ.

- ಅವರಲ್ಲಿ ಧೈರ್ಯವಿರುತ್ತದೆ. ಧೈರ್ಯ ಎಂಬುದು, ದೇಹವನ್ನು ಕಟ್ಟುಮಸ್ತಾಗಿಟ್ಟುಕೊಂಡು ಎಲ್ಲರೊಂದಿಗೆ ಹೋರಾಡಿ ಜಗಳವಾಡುವುದಲ್ಲ. ಏನೇ ಮಾಡಿದರೂ ಅದರಲ್ಲಿ ನಾವು ಗೆಲ್ಲುತ್ತೇವೆ ಎಂದು ದೃಢನಿಶ್ಚಯದಿಂದ ಅದನ್ನು ಮಾಡಲು ಮತ್ತು ನಮ್ಮ ದಾರಿಯಲ್ಲಿ ಬರುವ ಯಾವುದೇ ಸಮಸ್ಯೆಗಳನ್ನೂ ಎದುರಿಸಿ ಮುಂದುವರೆಯಲು ನಿಶ್ಚಲವಾದ ಧೈರ್ಯ ಬೇಕು. ಇತರರು ಅನುಮಾನಿಸಿದರೂ ಅಥವಾ ಅದರ ವಿರುದ್ಧ ಮಾತನಾಡಿದರೂ ಸಹ ಅದನ್ನೆಲ್ಲ ನಿರ್ಲಕ್ಷಿಸಿ ನಿಮ್ಮ ಕೆಲಸದ ಮೇಲೆ ಗಮನ ಹರಿಸಲು ಧೈರ್ಯ ಬೇಕು.

- ಉತ್ಸಾಹ, ಆಸಕ್ತಿ ಮತ್ತು ಪ್ರತಿಭೆ ಇರುವ ಕ್ಷೇತ್ರದಲ್ಲಿ ಇತರರನ್ನೂ ಮೀರಿ ಮೇಲೆ ಬರಲು ಖಂಡಿತವಾಗಿಯೂ ದೃಢಸಂಕಲ್ಪ ಬೇಕಾಗುತ್ತದೆ. ಹಿಂಜರಿಕೆಯಿಲ್ಲದೆ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು, ವಿಭಿನ್ನವಾಗಿ ಯೋಚಿಸಬೇಕು, ಹೊಸತನವನ್ನು ಕಂಡುಕೊಳ್ಳಬೇಕು ಮತ್ತು ಅದನ್ನು ಸಾಧಿಸಬೇಕು.

- ಯಾವಾಗಲೂ ಸಕಾರಾತ್ಮಕವಾಗಿ ಯೋಚಿಸುವುದನ್ನು ರೂಢಿಸಿಕೊಳ್ಳಿ. ನೀವು ಯಾವುದೇ ರೀತಿಯ ಸಮಸ್ಯೆಗಳನ್ನು ಎದುರಿಸಿದರೂ, ಹೆದರಿ ಹಿಂಜರಿಯದೆ ಸ್ಪಷ್ಟವಾಗಿ ಯೋಚಿಸಿ ಮೇಲೇರಲು ಇಂತಹ ಸಕಾರಾತ್ಮಕ ಯೋಚನೆಗಳು ನಿಮಗೆ ನೆರವಾಗುತ್ತವೆ.

# ಯಾವುದರಲ್ಲಿ ನಿಮಗೆ ಬದ್ಧತೆಯಿದೆ?



‘ಜೀವನದಲ್ಲಿ ನಾವು ಏನಾಗಬೇಕು?’ ಎಂಬುದನ್ನು ಕುರಿತು ಪ್ರತಿಯೊಬ್ಬರಿಗೂ ಅವರದೇ ಆದ ಕನಸು ಇರುತ್ತದೆ. ಕಠಿಣ ಪರಿಶ್ರಮ ವಹಿಸಿ, ಅರ್ಪಣಾ ಭಾವದಿಂದ ಅದಕ್ಕಾಗಿ ಪ್ರಯತ್ನಿಸಿದರೆ ಅದನ್ನು ಖಂಡಿತವಾಗಿಯೂ ಸಾಧಿಸಬಹುದು. ಇದರ ಬಗ್ಗೆ ಹಲವು ಕಲ್ಪನೆಗಳು ಹರಿದಾಡುತ್ತವೆ. 'ಒಬ್ಬರಿಗೆ ಒಂದೇ ಒಂದು ಕನಸು ಕಾಣಲು ಮಾತ್ರವೇ ಸಾಧ್ಯ' ಎಂಬುದು ಅಂತಹ ಒಂದು ಕಲ್ಪನೆಯಾಗಿದೆ.

ಆದರೆ ಅದು ನಿಜವಲ್ಲ! ಕನಸುಗಳು ಪ್ರತಿಯೊಂದು ಪರ್ವದಲ್ಲಿ ಮತ್ತು ಪ್ರತಿಯೊಂದು ಸನ್ನಿವೇಶದಲ್ಲೂ ಬದಲಾಗುತ್ತಿರುತ್ತದೆ. ಬಾಲ್ಯದಲ್ಲಿ ನಾವು ಕಾಣುವ ಕನಸುಗಳು ಮತ್ತು ನಮ್ಮ ಅನುಭವಗಳು ನಾವು ಬೆಳೆದಂತೆಲ್ಲಾ ಬದಲಾಗುತ್ತಾ ಹೋಗುತ್ತವೆ. ಆಸಕ್ತಿಗಳು ಮತ್ತು ಪ್ರತಿಭೆಗಳು ವಿಭಿನ್ನವಾಗಿರುತ್ತವೆ. ಎಂದರೆ, ಒಬ್ಬ ವ್ಯಕ್ತಿಗೆ ವಿಮಾನ ಹಾರಿಸುವ ಆಸಕ್ತಿ ಇರಬಹುದು. ಆದರೆ ಆತನಿಗೆ ವಾಸ್ತುಶಿಲ್ಪ ವಿನ್ಯಾಸದಲ್ಲಿ ಪ್ರತಿಭೆ ಇದ್ದರೆ ಆತ ಅದರ ವಿನ್ಯಾಸಕನಾಗುವುದೇ ಸುಲಭವಾದುದು. ಉದಾಹರಣೆಗೆ ಸಚಿನ್ ತೆಂಡೂಲ್ಕರ್ ಕ್ರಿಕೆಟ್‌ನಲ್ಲಿ ವೇಗದ ಬೌಲರ್ ಆಗಬೇಕೆಂಬ ಆಸೆಯೊಂದಿಗೇ ಮೈದಾನಕ್ಕೆ ಬಂದದ್ದು. ಆದರೆ ಅವರಿಗೆ ಬ್ಯಾಟಿಂಗ್‌ನಲ್ಲಿ ಅಪರೂಪದ ಪ್ರತಿಭೆ ಇತ್ತು. ಅವರ ಕೋಚ್ ಅದನ್ನು ಕಂಡು ಹಿಡಿದು ಆ ಪ್ರತಿಭೆಯನ್ನು ಅಭಿವೃದ್ಧಿಪಡಿಸಲು ಕಲಿಸಿದ್ದರಿಂದ, ಅವರು ವಿಶ್ವದ ಅತ್ಯುತ್ತಮ ಬ್ಯಾಟ್ಸ್‌ಮನ್ ಆದರು.

ಈ ರೀತಿಯಾಗಿ ನಿಮ್ಮ ಆಸಕ್ತಿ ಮತ್ತು ಪ್ರತಿಭೆಗಳ ನಡುವೆ ಇರುವ ವ್ಯತ್ಯಾಸವನ್ನು ಗುರುತಿಸಲು ನಿಮಗೆ ಸಾಧ್ಯವಾದರೆ, ನಿಮ್ಮ ಕನಸುಗಳನ್ನು ಗುರುತಿಸಲು ಮತ್ತು ಅವುಗಳನ್ನು ಸಾಧಿಸುವ ಮಾರ್ಗವನ್ನು ನಿರ್ಧರಿಸಲೂ ನಿಮಗೆ ಸಾಧ್ಯವಾಗುತ್ತದೆ. ಜೀವನದಲ್ಲಿ ಸಂತೋಷ ಮತ್ತು ಸಾರ್ಥಕತೆಯು ನಮ್ಮ ಕನಸುಗಳು ಮತ್ತು ಗುರಿಗಳನ್ನು ಸಾಧಿಸುವುದರಿಂದ ಬರುತ್ತದೆ.

ನಿಮ್ಮ ಜೀವನದ ಮಹತ್ವಾಕಾಂಕ್ಷೆ, ಕನಸು ಮತ್ತು ಜೀವನದ ಗುರಿ ಎಂದು ನೀವು ಪರಿಗಣಿಸುವ ಅಂಶವನ್ನು ನೀವು ಹೇಗೆ ಗುರುತಿಸಬಹುದು?

- ಸಮಯ ಕಳೆಯುವುದಕ್ಕಾಗಿ ಮಾಡುವ ಯಾವುದೇ ಹವ್ಯಾಸದ ಕೆಲಸವನ್ನು ನೀವು ಮಾಡುವಾಗ ಪಡೆಯುವಷ್ಟೇ ಆನಂದವನ್ನು ನೀವು ಆ ಕೆಲಸವನ್ನು ಮಾಡುವಾಗಲೂ ಹೊಂದುವಿರಿ.
- ನೀವು ಆ ಕ್ರಿಯೆಯನ್ನು ಉತ್ಸಾಹ ಮತ್ತು ಆನಂದದಿಂದ ಮಾಡುವಿರಿ.
- ಬೆಳಿಗ್ಗೆ ನಿಮ್ಮ ಅಲಾರಾಂ ಬಾರಿಸುವ ಮೊದಲೇ ನೀವು ಬೇಗನೆ ಎಚ್ಚರಗೊಳ್ಳುವಿರಿ ಮತ್ತು ಆ ದಿನ ಮಾಡಲಿರುವ ಆ ಕೆಲಸದ ನೆನಪಿನಿಂದಲೇ ನೀವು ಉಲ್ಲಾಸ ಹೊಂದುವಿರಿ.
- ಹಾಸಿಗೆಯಲ್ಲಿ ಮಲಗುವುದು, ಸುತ್ತಾಡುವುದು ಅಥವಾ ಸ್ನೇಹಿತರೊಂದಿಗೆ ಹರಟೆ ಹೊಡೆಯುವುದಕ್ಕಿಂತ ಆ ಕೆಲಸ ಮಾಡುವುದು ನಿಮಗೆ ಹೆಚ್ಚಿನ ಸಂತೋಷವನ್ನು ತರುತ್ತದೆ.
- ನೀವು ಪ್ರತಿದಿನ ಉತ್ಸಾಹದಿಂದ ಕೆಲಸಕ್ಕೆ ಹೋಗುತ್ತೀರಿ. "ನಾನು ಈ ಕೆಲಸವನ್ನು ಅದೇಕೆ ತಾನೇ ಮಾಡುತ್ತಿದ್ದೇನೋ?" ಎಂಬ ಬೇಸರ ನಿಮ್ಮಲ್ಲಿ ಮೂಡುವುದಿಲ್ಲ. ಭಾನುವಾರದ ರಜೆಯ ನಂತರ ಸೋಮವಾರದಂದು ಕೆಲಸಕ್ಕೆ ಹೋಗುವಾಗ ಅನೇಕ ಜನರು ಸಾಮಾನ್ಯವಾಗಿ ಅನುಭವಿಸುವ ಕಿರಿಕಿರಿಯನ್ನು ಸಹ ನೀವು ಅನುಭವಿಸುವುದಿಲ್ಲ.
- ನೀವು ಕೆಲಸ ಮಾಡುವುದಕ್ಕೆ ಆರಂಭಿಸಿ ನಂತರ, ಸಮಯ ಕಳೆದು ಹೋಗುವುದನ್ನೇ ಮರೆತು ಬಿಡುತ್ತೀರಿ.
- ನೀವು ಸಂತೋಷವಾಗಿರುತ್ತೀರಿ ಮತ್ತು ನಿಮ್ಮ ಕೆಲಸದಲ್ಲಿನ ಸಣ್ಣ ಸುಧಾರಣೆಯನ್ನು ಸಹ ದೊಡ್ಡ ಸಾಧನೆ ಎಂದು ಪರಿಗಣಿಸುತ್ತೀರಿ.
- ನೀವು ಎಂತಹ ಸಮಸ್ಯೆಗಳನ್ನು ಎದುರಿಸಿದರೂ, ಎಷ್ಟೇ ಕೆಟ್ಟ ವೈಫಲ್ಯಗಳನ್ನು ಎದುರಿಸಿದರೂ, ನೀವು ಮಾಡುತ್ತಿರುವ ಕೆಲಸದಿಂದ ಎಂದಿಗೂ ಹಿಂದೆ ಸರಿಯುವುದಿಲ್ಲ.
- ಇದನ್ನು ಮಾಡುವ ಬದಲು ಬೇರೆ ಏನಾದರೂ ಮಾಡುವ ಆಲೋಚನೆ ನಿಮ್ಮ ಮನಸ್ಸಿಗೆ ಎಂದಿಗೂ ಬರುವುದಿಲ್ಲ.
- ಈ ಕೆಲಸ ಮಾಡುವುದರಿಂದ ನೀವು ಎಷ್ಟು ಹಣ ಗಳಿಸಬಹುದು ಅಥವಾ ಎಷ್ಟು ಖ್ಯಾತಿಯನ್ನು ಗಳಿಸಬಹುದು ಎಂದು ನೀವು ಎಂದಿಗೂ ಯೋಜಿಸುವುದಿಲ್ಲ. "ನಾನು ನನ್ನ ಕೆಲಸವನ್ನು ಚೆನ್ನಾಗಿ ಮಾಡಬೇಕು" ಎಂದು ಮಾತ್ರ ಯೋಚಿಸುತ್ತೀರಿ. ಅದು ನಿಮಗೆ ಎಲ್ಲವನ್ನೂ ಗಳಿಸಿ ಕೊಡುತ್ತದೆ.



Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 &
Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL




Available at Ramraj Showrooms and All Leading Textile Shops

Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-07-2025 Posted at Tirupur BPC on 5th of every month.

